

**ಲಕ್ಷ್ಮಣ ಕೊಡಸೆ**
ಹಿರಿಯ ಪತ್ರಕರ್ತರು
ಪ್ರಶಸ್ತಿ ಪುರಸ್ಕಾರಗಳ ಸಾಂಸ್ಕೃತಿಕ ರಾಜಕೀಯ

**ಜಾಣಗೆರೆ ವೆಂಕಟರಾಮಯ್ಯ**
ಸಾಹಿತಿ ಹಾಗೂ ಹಿರಿಯ ಪತ್ರಕರ್ತರು
ಹಿಂದಿ ಹೇರಿಕೆ



**ಕ.ರ.ವೇ ಸಂಘಟನೆ**
ಮೂಲ ಸಂಸ್ಥಾಪಕರು
ಹಿಂದಿನ ಷಡ್ಯಂತ್ರಗಳು

**ಆರ್.ಟಿ. ವಿಠ್ಠಲಮೂರ್ತಿ**
ಪತ್ರಕರ್ತರು, ರಾಜಕೀಯ ವಿಶ್ಲೇಷಕರು
ಸಿದ್ದು-ಡಿಕೆ ಸಂಘರ್ಷ ಮಿತ್ರಕೂಟಕ್ಕೆ ಹರ್ಷ




ಕರವೇ ವಾಹಿನಿ

ಸತ್ಯ–ನ್ಯಾಯ–ಧರ್ಮಕ್ಕಾಗಿ ಸ್ವಾಭಿಮಾನಿ ಸಮೂಹ

# ಕರ್ನಾಟಕ ರಕ್ಷಣಾ ವೇದಿಕೆ

ಕನ್ನಡಿಗರ ಹೋರಾಟಕ್ಕೊಂದು ಕೆಚ್ಚೆದೆಯ ಮಾಸಪತ್ರಿಕೆ

₹15

ಕನ್ನಡ
ಕನ್ನಡಿಗ
ಕರ್ನಾಟಕ
ಸೇವೆಗಾಗಿ
ನಾವು

ಸಂಪುಟ : 18 ಸಂಚಿಕೆ : 11 KARNATAKA RAKSHANAA VEDIKE Kannada Monthly KARKAN/2008/26245 ಮಾರ್ಚ್ - 2026 ಪುಟ : 48


18 ವರ್ಷದ ಹೆಜ್ಜೆ



## ಸಾಫ್ಟ್‌ವೇರ್ ಉದ್ಯಮದಲ್ಲಿ ಕನ್ನಡಿಗನ ಸಾಧನೆ

# ಆರ್ ಸಿದ್ದೇಶ್‌ಕುಮಾರ್

## ಪರಭಾಷಿಕರ ಬಿಕನಾಸಿ ಕಾಸಿಗೆ ಕನ್ನಡಿಗರ ಆಸ್ತಿ ನಾಶ




ಕನ್ನಡಿಗರ ಉದಾಸೀನ ಮತ್ತು ಒಗ್ಗಟ್ಟಿನ ಕೊರತೆಯಿಂದಾಗಿ ಇಂದು ನಮ್ಮ ನೆಲೆಯನ್ನು ಕಳೆದುಕೊಂಡು ಪರಭಾಷಿಕರ ಅಡಿಯಲ್ಲಿ ಶೋಷಣೆಗೊಳಗಾಗುತ್ತಿದ್ದಾರೆ.

ಕರವೇ ವಾಹಿನಿ

ಮಾರ್ಚ್ - 2026
ಸಂಪುಟ: 18, ಸಂಚಿಕೆ:11
ರೂ. 15/-

## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**

ಜಾಣಗೆರೆ ವೆಂಕಟರಾಮಯ್ಯ,
ಎ. ಬಾಲಚಂದ್ರ,
ಎಚ್.ಶಿವರಾಮೇಗೌಡ

**ಗೌರವ ಸಲಹೆಗಾರರು**

ಲಕ್ಷ್ಮಣ ಕೊಡಸೆ
ಆರ್.ಟಿ.ವಿಠ್ಠಲಮೂರ್ತಿ

**ಸಂಪಾದಕ**

ಕ.ನ. ಚಂದ್ರಶೇಖರ

**ವ್ಯವಸ್ಥಾಪಕ ಸಂಪಾದಕಿ**

ಪ್ರತಿಮಾ

**ಕಾರ್ಯನಿರ್ವಾಹಕ ಸಂಪಾದಕರು**

ಎಸ್.ಪ್ರಕಾಶ್ ಬಾಬು

**ಉಪ ಸಂಪಾದಕರು**

ಶ್ರೀಪತಿ ಗೊಡಗಿ
ಆರುಡೋ ಗಣೇಶ್

**ಸಂಪಾದಕೀಯ ಮಂಡಳಿ**

ಕೆ.ಎ.ರಾಮಕೃಷ್ಣ ಮೂರ್ತಿ
ಖಂಡಪರಶು

**ವಕೀಲರು/ಕಾನೂನು ಸಲಹೆಗಾರರು**

ಎಂ. ರಕ್ಷಿತ್ ಗೌಡ
ಜಗದೀಶ್

**ಜಾಹಿರಾತು ವ್ಯವಸ್ಥಾಪಕ**

ವಿ.ಆರ್. ರಾಧಾಕೃಷ್ಣ

**ಶ್ರೀನಂದಿ**
#೧೬೭೩, ೨ನೇ ಅಡ್ಡರಸ್ತೆ,
ಪ್ರಕಾಶನಗರ,
ಬೆಂಗಳೂರು-೫೬೦೦೨೧
ದೂ: ೯೪೮೨೫೯೦೬೭೪
krvnews2008@gmail.com

## ಒಳ ಪುಟಗಳಲ್ಲಿ...

| | |
|---|---|
| ಹಿಂದಿ ಹೇರಿಕೆ ಹಿಂದಿನ ಷಡ್ಯಂತ್ರಗಳು | 4 |
| ವಿದೇಶದಲ್ಲಿರುವ ಕನ್ನಡಿಗರ ರಕ್ಷಣೆಗೆ ಸರ್ಕಾರ ಮುಂದಾಗಲಿ | 5 |
| ಪರಭಾಷಿಕರ ಬಿಕನಾಸಿ ಕಾಸಿಗೆ ಕನ್ನಡಿಗರ ಆಸ್ತಿ ಲೂಟಿ | 6 |
| ರೈಲ್ವೆ ಪರೀಕ್ಷೆಯಲ್ಲಿ ಮತ್ತೆ ಕನ್ನಡಕ್ಕೆ ದ್ರೋಹ ಬಗೆದ ಕೇಂದ್ರ | 9 |
| ಸಿದ್ದು-ಡಿಕೆ ಸಂಘರ್ಷ ಮಿತ್ರಕೂಟಕ್ಕೆ ಹರ್ಷ | 10 |
| ಪ್ರಶಸ್ತಿ ಪುರಸ್ಕಾರಗಳ ಸಾಂಸ್ಕೃತಿಕ ರಾಜಕೀಯ | 11 |
| ಕೆನಡಾ ಕನ್ನಡಿಗನ ಹತ್ಯೆ ಹಿಂದೆ ವ್ಯಾಪಾರಿಗಳ ಕೈವಾಡ | 12 |
| ಸಾಕೇತ್ ಸಾವಿಗೆ ನ್ಯಾಯ ಸಿಗಲಿ | 14 |
| ಸಾಫ್ಟ್‌ವೇರ್ ಉದ್ಯಮದಲ್ಲಿ ಕನ್ನಡಿಗ ಸಿದ್ದೇಶ್‌ಕುಮಾರ್ ಸಾಧನೆ | 16 |
| ವರ್ಲ್ಡ್ ಸೂಪರ್ ಸ್ಟಾರ್ ಯಶ್ | 20 |
| ಕನ್ನಡಿಗರು ಕಳೆದುಕೊಂಡ ಕನ್ನಡ-೨ | 24 |

**ಒಕ್ಕೂಟ ವ್ಯವಸ್ಥೆಯ ಭಾರತದಲ್ಲಿ ಯಾರು ಎಲ್ಲಿ ಬೇಕಾದರೂ ವಾಸ ಮಾಡಬಹುದು, ಆಸ್ತಿ ಖರೀದಿಸಬಹುದು ಎಂಬ ಸಾಂವಿಧಾನಿಕ ಹಕ್ಕು ಕನ್ನಡ ನಾಡಿಗೆ ಧಕ್ಕೆಯಾಗಿದೆ.**

# ಹಿಂದಿ ಹೇರಿಕೆ ಹಿಂದಿನ ಷಡ್ಯಂತ್ರಗಳು

## ವಿದ್ಯಮಾನ




ಜಾಣಗೆರೆ ವೆಂಕಟರಾಮಯ್ಯ

'ಮೂಲ ಸಂಸ್ಥಾಪಕರು'
ಕರ್ನಾಟಕ ರಕ್ಷಣಾ ವೇದಿಕೆ

ಲಂಕೇಶ್, ನಮ್ಮನಾಡು, ರೂಪಲೇಖಾ, ರೂಪಶಿಲ್ಪಿ ಪತ್ರಿಕೆಗಳಲ್ಲಿ ಸಹಾಯಕ ಸಂಪಾದಕರಾಗಿ ಮತ್ತು ಅಭಿಮಾನಿ, ಈ ಸಂಜೆ, ಅರಗಿಣಿ, ಮಾರ್ದನಿ, ಕರುನಾಡ ಸಂಜೆ, ಜಾಣಗೆರೆ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದವರು


ಅಂತಾರಾಷ್ಟ್ರೀಯ ವ್ಯವಹಾರಕ್ಕೆ ಇಂಗ್ಲಿಷ್, ಸಂಪರ್ಕ ಭಾಷೆಯಾಗಿ ಹಿಂದಿ, ಪ್ರಾದೇಶಿಕ ಆಡಳಿತಕ್ಕೆ ಸ್ಥಳೀಯ ರಾಜ್ಯಭಾಷೆ ಬಳಸಬಹುದೆಂಬ ನೀತಿಯನ್ನು ಘೋಷಿಸಿತ್ತು. ಅದನ್ನು ಉತ್ತರ ಮತ್ತು ಮಧ್ಯ ಭಾರತದ ಬಹುತೇಕ ರಾಜ್ಯಗಳು ಒಪ್ಪಿಕೊಂಡವು.

ಕಳೆದ ಶತಮಾನದ ಆರಂಭದಲ್ಲಿ ಕನ್ನಡಿಗರು 'ಇಂಗ್ಲಿಷ್ ವ್ಯಾಮೋಹಿಗಳು' ಎಂದು ಹೆಸರಾಗಿದ್ದರು. ಅದರಿಂದಾಗಿಯೇ ರಾಷ್ಟ್ರಕವಿ ಕುವೆಂಪು ಅವರು 'ಕನ್ನಡಕ್ಕಾಗಿ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುವುದು' ಎಂದು ಒತ್ತಿ ಹೇಳಿದ್ದರು. ಆ ಮೂಲಕ ಕನ್ನಡಿಗರನ್ನು ಎಚ್ಚರಿಸಲು ಪ್ರಯತ್ನಿಸಿದ್ದರು. ಶತಮಾನದ ನಡು ಭಾಗದಲ್ಲಿ ದೇಶವು ಸ್ವತಂತ್ರಗೊಂಡಾಗ ಉತ್ತರ ಭಾರತದ ಹಿಂದಿ ಭಾಷೆಯನ್ನೆ ಸ್ವದೇಶಿ ಆಡಳಿತಗಾರರು ಎಲ್ಲರ ಮೇಲೆ ಹೇರಲು ಮುಂದಾದಾಗ ಅದೇ ಕುವೆಂಪು 'ತ್ರಿಭಾಷಾ ಸೂತ್ರ ತ್ರಿಶೂಲವಾಗಿದೆ' ಎಂದು ಕಟುವಾಗಿ ಟೀಕಿಸಿದ್ದರು.

ಹಿಂದಿ ಉತ್ತರ ಭಾರತದ ೩-೪ ರಾಜ್ಯಗಳ ಭಾಷೆಯಾಗಿದೆ. ಅದು ದೇಶದ ಹೆಚ್ಚು ಜನರಾಡುವ ಭಾಷೆಯಾಗಿರುವುದಷ್ಟೆ ವಿಶೇಷವಾಗಿದೆ. ಅದರ ಹೊರತಾಗಿ ಅದಕ್ಕೆ ಯಾವ ಮಹತ್ವವೂ ಇರುವುದಿಲ್ಲ. ಅದನ್ನೆ ದೇಶದ ಎಲ್ಲೆಡೆಗೆ ಹರಡುವ ಉದ್ದೇಶ ಸ್ವದೇಶಿ ರಾಜಕಾರಣದ್ದಾಗಿತ್ತು. ರಾಜಕಾರಣದಲ್ಲಿ ಉತ್ತರದವರ ಪ್ರಾಬಲ್ಯವೂ ಜೋರಾಗಿತ್ತು. ದೇಶದ ರಾಜಧಾನಿಯೂ ಉತ್ತರದ ದೆಹಲಿ ಕೇಂದ್ರಿತವಾಗಿತ್ತು. ಆ ಪ್ರದೇಶದಲ್ಲಿ ಹಿಂದಿ ಭಾಷೆಯೊಂದೇ ಬಳಕೆಯಾಗುತ್ತಿತ್ತು. ಆಡಲು ಮತ್ತು ವ್ಯವಹರಿಸಲು ಅದನ್ನೇ ಹೆಚ್ಚಾಗಿ ಬಳಸಲಾಗುತ್ತಿತ್ತು. ಅದರ ಹೊರತಾಗಿ ಇಂಗ್ಲಿಷ್ ಭಾಷೆಯನ್ನಾಗಲಿ ಅಥವಾ ದಕ್ಷಿಣದ ಯಾವುದಾದರೂ ಒಂದು ಭಾಷೆಯನ್ನಾಗಲಿ ಕಲಿಯುವ ಆಸಕ್ತಿ ಅವರಲ್ಲಿ ಬರದೇ ಹೋಗಿದ್ದು ದುರಂತ.

ಹಿಂದಿ ಹೇರಿಕೆಯು ಉತ್ತರದ ಹಿಂದಿಯೇತರ ರಾಜ್ಯಗಳವರಿಗೆ ದೊಡ್ಡ ಸಮಸ್ಯೆಯಾಗಿ ಕಾಣಲಿಲ್ಲ. ಆದರೆ ದಕ್ಷಿಣ ರಾಜ್ಯಗಳವರಿಗೆ ಅದು 'ಬಲವಂತದ ಹೇರಿಕೆ' ಅನ್ನಿಸತೊಡಗಿತ್ತು. ಹಾಗಾಗಿ ಪ್ರಮುಖವಾಗಿ ಮದ್ರಾಸ್ ರಾಜ್ಯವು ಹಿಂದಿ ಹೇರಿಕೆಯನ್ನು ವಿರೋಧಿಸತೊಡಗಿತು. ಅದರಿಂದ ತಮಿಳು ಭಾಷೆ ಬೆಳವಣಿಗೆಗೆ ಮಾರಕವಾಗುತ್ತದೆಂದು ಭಾವಿಸಿ ಪ್ರತಿರೋಧ ತೋರಿದ್ದು ವಾಸ್ತವವಾಗಿತ್ತು.

ಆದರೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಒಕ್ಕೂಟ ಸರ್ಕಾರವು ದೇಶಕ್ಕೊಂದು 'ಭಾಷಾ ನೀತಿ' ರೂಪಿಸಲು ತರಾತುರಿ ನಡೆಸಿತ್ತು. ಅದೇ 'ತ್ರಿಭಾಷಾ ಸೂತ್ರ'ದ ಘೋಷಣೆಯಾಗಿತ್ತು. ಅಂತಾರಾಷ್ಟ್ರೀಯ ವ್ಯವಹಾರಕ್ಕೆ ಇಂಗ್ಲಿಷ್, ಸಂಪರ್ಕ ಭಾಷೆಯಾಗಿ ಹಿಂದಿ, ಪ್ರಾದೇಶಿಕ ಆಡಳಿತಕ್ಕೆ ಸ್ಥಳೀಯ ರಾಜ್ಯಭಾಷೆ ಬಳಸಬಹುದೆಂಬ ನೀತಿಯನ್ನು ಘೋಷಿಸಿತ್ತು. ಅದನ್ನು ಉತ್ತರ ಮತ್ತು ಮಧ್ಯ ಭಾರತದ ಬಹುತೇಕ ರಾಜ್ಯಗಳು ಒಪ್ಪಿಕೊಂಡವು. ಹಿಂದಿಗೂ ಉತ್ತರ ಭಾರತದ ಹಿಂದಿಯೇತರ ಭಾಷೆಗಳಿಗೂ ಅಲ್ಪಸ್ವಲ್ಪ ಸಾಮ್ಯತೆಯಿದ್ದುದರಿಂದ ಒಪ್ಪಲು ಸಾಧ್ಯವಾಗಿತ್ತು.

ವಿಚಿತ್ರವೆಂದರೆ, ದಕ್ಷಿಣದ ಯಾವ ಭಾಷೆಗೂ ಹಿಂದಿಯು ಸಾಮ್ಯತೆ ಹೊಂದಿರಲು ಸಾಧ್ಯವಿಲ್ಲ. ಕನ್ನಡ-ತಮಿಳು-ತೆಲುಗು-ಮಲೆಯಾಳಿ ಭಾಷಿಕರಿಗೆ ಹಿಂದಿ ಕಬ್ಬಿಣದ ಕಡಲೆಯಂತೆ ಕಂಡಿದೆ. ಅದಕ್ಕಾಗಿ ಅದರ ಕಲಿಕೆಯ ಬಗ್ಗೆ ಅಷ್ಟಾಗಿ ಆಸಕ್ತಿ ತಾಳಲಿಲ್ಲ. ಅದರಲ್ಲೂ ಸ್ವಾಭಿಮಾನಿಗಳಾದ ತಮಿಳು ರಾಜಕಾರಣಿಗಳು 'ತ್ರಿಭಾಷಾ ನೀತಿ'ಯನ್ನು ತೀವ್ರವಾಗಿ ವಿರೋಧಿಸಲು ಮುಂದಾದರು. ಒಕ್ಕೂಟ ಸರ್ಕಾರದ ಭಾಷಾ ನೀತಿಗೆ ಅವರು ಸಡ್ಡು ಹೊಡೆದಿದ್ದು ಇತರೆ ದಕ್ಷಿಣ ರಾಜ್ಯಗಳಿಗೆ ಪ್ರೇರಣೆ ನೀಡಿತಾದರೂ, ತಮಿಳರಂತೆ ಪ್ರಬಲವಾಗಿ ವಿರೋಧಿಸಿ ನಿಲ್ಲುವ ರಾಜಕೀಯ ನಿರ್ಧಾರ ತೆಗೆದುಕೊಳ್ಳಲು ಕನ್ನಡಿಗರಾದಿಯಾಗಿ ವಿಫಲವಾಗಿದ್ದು ದುರಂತದ ಸಂಗತಿ.

ಮೊದಮೊದಲು ಒಕ್ಕೂಟ ಸರ್ಕಾರ ಹಿಂದಿ ಹೇರಿತಾದರೂ ಕಡ್ಡಾಯಗೊಳಿಸದೆ ಹೋಗಿದ್ದರಿಂದ ಕರ್ನಾಟಕ ಸೇರಿದಂತೆ ಇತರೆ ದಕ್ಷಿಣ ರಾಜ್ಯಗಳು ಹಿಂದಿ ಕಲಿಕೆಯನ್ನು ಉದಾರವಾಗಿ ಒಪ್ಪಿಕೊಂಡಿದ್ದು ಪರೋಕ್ಷವಾಗಿ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಳ್ಳುವಂತೆ ಮಾಡಿಬಿಟ್ಟಿತು. ಕೇಂದ್ರದಲ್ಲಿ ಅಧಿಕಾರ ಮಾಡುತ್ತಿದ್ದ ರಾಜಕೀಯ ಪಕ್ಷವೇ ಈ ರಾಜ್ಯಗಳಲ್ಲೂ

29 ನೇ ಪುಟಕ್ಕೆ

ಗೆದ್ದರೆ ಖುಷಿ , ಬಿದ್ದರೆ ಪಾಠ . ಸಂಭ್ರಮ , ಅನುಭವ ಎರಡೂ
ಬೇಕು . ಗೆಲ್ಲಲಿ , ಸೋಲಲಿ ಸಮಚಿತ್ತವಿರಲಿ !

ಪುರುಷೋತ್ತಮ್
ಮೈಸೂರು



## ಕನ್ನಡ ಕಹಳೆ



ಕ.ನ. ಚಂದ್ರಶೇಖರ

# ವಿದೇಶದಲ್ಲಿರುವ ಕನ್ನಡಿಗರ ರಕ್ಷಣೆಗೆ ಸರ್ಕಾರ ಮುಂದಾಗಲಿ

೨೦೨೬ರ ಫೆಬ್ರವರಿ ೩ಂಗಳು ಕನ್ನಡಿಗರ ಪಾಲಿಗೆ ಅತ್ಯಂತ ಕರಾಳ ದಿನ. ಕೆನಡಾದ ಟೊರೊಂಟೋದಲ್ಲಿ ನರಹಂತಕರ ಗುಂಡಿಗೆ ನೆಲಮಂಗಲ ಮೂಲದ ಚಂದನ್ ಕುಮಾರ್ ಹತ್ಯೆಗೀಡಾದರೆ, ಪಕ್ಕದ ಅಮೆರಿಕಾದ ಕ್ಯಾಲಿಫೋರ್ನಿಯಾದ ವಿಶ್ವವಿದ್ಯಾನಿಲಯದಲ್ಲಿ ಎಂಎಸ್ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿದ್ದ ಬೆಂಗಳೂರಿನ ಸಾಕೇತ್ ಶ್ರೀನಿವಾಸಯ್ಯ ನಿಗೂಢವಾಗಿ ಸಾವಿಗೀಡಾಗಿದ್ದಾರೆ. ಇದರ ಬೆನ್ನಿಗೆ ಐರ್ಲೆಂಡ್‌ನಲ್ಲಿ ದಕ್ಷಿಣಕನ್ನಡದ ಕಡಬ ಮೂಲದ ಸಂಜೋ ಸುನೀಲ್ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬಂದಿದೆ. ಈ ಯುವಕರು ಪ್ರತಿಭಾವಂತರು. ಭವಿಷ್ಯದ ಬಗ್ಗೆ ಅಪಾರ ಕನಸುಗಳನ್ನು ಕಟ್ಟಿಕೊಂಡಿದ್ದವರು. ಚಂದನ್ ಕುಮಾರ್ ಕೆನಡಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕನ್ನಡ ಸಂಸ್ಕೃತಿ ಬೆಳೆಸಲು ಶ್ರಮಿಸುತ್ತಿದ್ದರೆ, ಸಾಕೇತ್ ಶ್ರೀನಿವಾಸಯ್ಯ ಅಮೆರಿಕದಲ್ಲಿ ರಾಸಾಯನಿಕ ಮತ್ತು ಜೈವಿಕ ಅಣು ಇಂಜಿನಿಯರಿಂಗ್ ಬಗ್ಗೆ ಉನ್ನತ ವ್ಯಾಸಂಗ ಮಾಡುತ್ತಾ, ಹೈಪರ್ ಲೂಟ್ ತಂತ್ರಜ್ಞಾನ ಅಭಿವೃದ್ಧಿ ಪಡಿಸುತ್ತಿದ್ದರು. ಇಬ್ಬರ ಸಾವು ಕನ್ನಡ ನಾಡಿಗೆ ಮಾತ್ರವಲ್ಲದೆ, ಇಡೀ ಮನುಕುಲಕ್ಕೆ ಆದ ಬಹು ದೊಡ್ಡ ನಷ್ಟ.

ನೆಲಮಂಗಲ ಮೂಲದ ಚಂದನ್ ಕುಮಾರ್ ಹತ್ಯೆ ಹಿಂದೆ ಸಿಖ್ ಭಯೋತ್ಪಾದಕರ ಕೈವಾಡ ಇದೆ ಎಂಬ ಶಂಕೆ ಇದ್ದರೆ, ಬೆಂಗಳೂರಿನ ಸುಂಕದ ಕಟ್ಟೆ ಮೂಲದ ಸಾಕೇತ್ ಶ್ರೀನಿವಾಸಯ್ಯ ನಿಗೂಢ ಸಾವಿನ ಹಿಂದೆ ಕಾಣದ ಕೈಗಳ ಕೈವಾಡದ ಶಂಕೆ ವ್ಯಕ್ತವಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ವಿದೇಶದಲ್ಲಿ ೧೨೦೦ಕ್ಕೂ ಹೆಚ್ಚು ಭಾರತೀಯರ ಹತ್ಯೆಯಾಗಿದೆ. ಕಳೆದ ಎರಡು ವರ್ಷಗಳ ಅವಧಿಯೊಂದರಲ್ಲೇ ೬೦೦ಕ್ಕೂ ಹೆಚ್ಚು ಭಾರತೀಯರ ಹತ್ಯೆಯಾಗಿದೆ. ಇದರಲ್ಲಿ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲೆಂದು ಹೋದ ವಿದ್ಯಾರ್ಥಿಗಳು ಅತಿ ಹೆಚ್ಚಿದ್ದಾರೆ. ಇದರ ಬಗ್ಗೆ ಭಾರತ ಸರ್ಕಾರ ತುರ್ತು ನಿಗಾವಹಿಸಿ ವಿದೇಶದಲ್ಲಿ ವಾಸಿಸುವ ಭಾರತೀಯರ ರಕ್ಷಣೆಗೆ ಮುಂದಾಗಬೇಕು. ಇದಕ್ಕಾಗಿ ರಾಯಭಾರ ಮಟ್ಟದಲ್ಲಿ ಆಯಾ ದೇಶಗಳ ಮೇಲೆ ಒತ್ತಡ ತಂದು ಭಾರತೀಯರ ರಕ್ಷಣೆಗೆ ಮುಂದಾಗಬೇಕು. ಹಾಗೇ, ರಾಜ್ಯ ಸರ್ಕಾರ ವಿದೇಶದಲ್ಲಿ ಹತ್ಯೆಗೀಡಾಗಿರುವ ಚಂದನ್ ಕುಮಾರ್‌ರಂಥ ಕನ್ನಡಿಗರ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡು, ಆ ದೇಶಗಳ ನಾಯಕರಿಗೆ ಪತ್ರ ಬರೆದು, ಹಂತಕರ ಬಂಧನಕ್ಕೆ ಒತ್ತಾಯಿಸಬೇಕು. ಜೊತೆಗೆ, ಮುಂದೆ ಇಂಥ ಅಮಾನುಷ ಕುಕೃತ್ಯಗಳು ನಡೆಯದಂತೆ ಎಚ್ಚರವಹಿಸಲು, ವಿದೇಶದಲ್ಲಿ ವಾಸಿಸುವ ಕನ್ನಡಿಗರಿಗೆ ಸೂಕ್ತ ರಕ್ಷಣೆ ನೀಡುವಂತೆ ತಾಕೀತು ಮಾಡಬೇಕು.

ಕಳೆದ ಫೆಬ್ರವರಿ.೭ ರಂದು ಕೆನಡಾದ ಟೊರೊಂಟೋದಲ್ಲಿ ಕಾರಿನಲ್ಲಿ ಹೋಗುತ್ತಿದ್ದ ಚಂದನ್‌ಕುಮಾರ್ ಹತ್ಯೆ ಬಗ್ಗೆ ಗೃಹ ಸಚಿವರಾದ ಜಿ.ಪರಮೇಶ್ವರ್ ಕೇವಲ ಸಂತಾಪ ಸೂಚಿಸಿದರೆ ಸಾಲುವುದಿಲ್ಲ. ಕೆನಡಾಗೆ ನಮ್ಮ ಪೋಲೀಸರನ್ನು ಕಳುಹಿಸಿ, ಹತ್ಯೆ ಹಿಂದೆ ಇರುವ ರಾಕ್ಷಸ ಕೈಗಳು ಯಾವುದು ಎಂಬುದನ್ನು ತಿಳಿಯಬೇಕು. ಈ ಪ್ರಕರಣ ನಮ್ಮ ವ್ಯಾಪ್ತಿಗೆ ಬರೊಲ್ಲ ಅಂತ ಎಂದಿನ ಉದಾಸೀನ ರಾಗ ಹಾಡದೆ, ಚಂದನ್ ಕುಮಾರ್ ಹತ್ಯೆ ಪ್ರಕರಣ ಭೇದಿಸಲು ರಾಜತಾಂತ್ರಿಕ ಮಾರ್ಗದಲ್ಲಿ ಯತ್ನಿಸಬೇಕು. ಕೇಂದ್ರದಲ್ಲಿ ಹೊಣೆಗೇಡಿ ನಾಯಕರು ಕೂತಿದ್ದಾರೆ. ಭಾರತೀಯರ ಹತ್ಯೆ ಕುರಿತು ಆಯಾ ದೇಶಗಳೊಂದಿಗೆ ಖಡಕ್ ಆಗಿ ವರ್ತಿಸುತ್ತಿಲ್ಲ. ಕೆನಡಾದಲ್ಲಿ ೨೦೨೩ರ ಜೂನ್.೧೮ ರಂದು ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆ ಹಿಂದೆ ಭಾರತದ ಗುಪ್ತಚರ ಇಲಾಖೆ ಕೈವಾಡ ಇದೆ ಅಂತ ಅಂದಿನ ಪ್ರಧಾನಿ ಜಸ್ಟಿನ್ ಟ್ರೂಡೋ ಆರೋಪಿಸಿದಂಥ ದಪವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ತೋರಿಸುತ್ತಿಲ್ಲ.

ಈ ಪ್ರಕರಣ ನಮ್ಮ ವ್ಯಾಪ್ತಿಗೆ ಬರೊಲ್ಲ ಅಂತ ಎಂದಿನ ಉದಾಸೀನ ರಾಗ ಹಾಡದೆ, ಚಂದನ್ ಕುಮಾರ್ ಹತ್ಯೆ ಪ್ರಕರಣ ಭೇದಿಸಲು ರಾಜತಾಂತ್ರಿಕ ಮಾರ್ಗದಲ್ಲಿ ಯತ್ನಿಸಬೇಕು. ಕೇಂದ್ರದಲ್ಲಿ ಹೊಣೆಗೇಡಿ ನಾಯಕರು ಕೂತಿದ್ದಾರೆ. ಭಾರತೀಯರ ಹತ್ಯೆ ಕುರಿತು ಆಯಾ ದೇಶಗಳೊಂದಿಗೆ ಖಡಕ್ ಆಗಿ ವರ್ತಿಸುತ್ತಿಲ್ಲ. ಕೆನಡಾದಲ್ಲಿ ೨೦೨೩ರ ಜೂನ್.೧೮ ರಂದು ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆ ಹಿಂದೆ ಭಾರತದ ಗುಪ್ತಚರ ಇಲಾಖೆ ಕೈವಾಡ ಇದೆ ಅಂತ ಅಂದಿನ ಪ್ರಧಾನಿ ಜಸ್ಟಿನ್ ಟ್ರೂಡೋ ಆರೋಪಿಸಿದಂಥ ದರ್ಪವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ತೋರಿಸುತ್ತಿಲ್ಲ.

ಕೆನಡಾ ಪ್ರಧಾನಿ ತಮ್ಮ ದೇಶದ ಒಬ್ಬ ನಿಕೃಷ್ಟ ಭಯೋತ್ಪಾದಕನಿಗಾಗಿ ೨೦೨೩ರ ಸೆಪ್ಟೆಂಬರ್.೮ ರಂದು ನವದೆಹಲಿಯಲ್ಲಿ ನಡೆದ ಜೀ-೨೦ ಸಮಾವೇಶಕ್ಕೆ ಬಂದಿದ್ದಾಗಲೂ ಅದೇ ವಿಷಯ ಪ್ರಮುಖವಾಗಿ ಎತ್ತಿಕೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿ ಜೊತೆ ಸಮಾವೇಶದ

23 ನೇ ಪುಟಕ್ಕೆ



ಮನುಷ್ಯರು ಸದಾ ಹೇಳುತ್ತಾರೆ, "ಜೀವಂತವಾಗಿ ಇದ್ದರೆ ಮತ್ತೆ ಭೇಟಿಯಾಗೋಣ" ಅಂತ. ಆದರೆ ಒಬ್ಬ ಒಳ್ಳೆಯ ಸ್ನೇಹಿತ ಅದ್ಭುತವಾದ ಮಾತನ್ನು ಹೇಳಿದ – "ಭೇಟಿಯಾಗುತ್ತ ಇದ್ದರೆ ಜೀವಂತವಾಗಿ ಇರುತ್ತೇವೆ" ಅಂತ

ಲೋಕೇಶ್ ಗೌಡ
ಬೆಂಗಳೂರು ಗ್ರಾಮಾಂತರ



# ಪರಭಾಷಿಕರ ಬಿಕನಾಸಿ ಕಾಸಿಗೆ ಕನ್ನಡಿಗರ ಆಸ್ತಿ ನಾಶ

**● ಪ್ರಕಾಶ್ ಬಾಬು**

ಕರ್ನಾಟಕದ ಮೂಲೆಮೂಲೆಯಲ್ಲಿ ಎಕರೆಗಟ್ಟಲೆ ಜಮೀನು ಖರೀದಿಸುತ್ತಿದ್ದಾರೆ ಪರಭಾಷಿಕ ಭೂಗಳ್ಳರು. ಕರ್ನಾಟಕದ ಭೂಮಿ ಕನ್ನಡ ನೆಲದವರಿಗೆ ಎಂಬ ಕಾನೂನು ಇದ್ದರೂ, ನ್ಯಾಯದ ಕಣ್ಣಿಗೆ ಮಣ್ಣು ತೂರಿ ಎಗ್ಗುಸಿಗ್ಗಿಲ್ಲದೆ ಭೂಮಿ ಕಬಳಿಸುತ್ತಿದ್ದಾರೆ. ಪರಭಾಷಿಕರ ಬಿಕನಾಸಿ ಕಾಸಿಗೆ ಕನ್ನಡಿಗರ ಸ್ವತ್ತು ಪರಭಾರೆಯಾಗುತ್ತಿದ್ದರೂ, ಸರ್ಕಾರ ಕಣ್ಣು ಮುಚ್ಚಿಕೊಂಡು ತೂಕಡಿಸುತ್ತಿದೆ. ಇದು ಜಾಣ ಕುರುಡೋ, ಅಥವ ಅಭಿನಯದ ಮಂಪರೋ ಇರಬೇಕು. ಹೀಗಾಗಿ ಸರ್ಕಾರಿ ಅಧಿಕಾರಿಗಳು ಪರಭಾಷಿಕ ಭೂಗಳ್ಳರು ಎಸೆಯೋ ಎಂಜಲು ಕಾಸಿಗೆ ಹಲ್ಲುಗಿಂಜಿಕೊಂಡು ಕೂತಿದ್ದಾರೆ.

ಬೆಂಗಳೂರು ಅಂದ್ರೆ ಸಿಲಿಕಾನ್ ಸಿಟಿ. ಪ್ರಪಂಚದ ಕಣ್ಣೆಲ್ಲ ಇದರ ಮೇಲೇ ಇದೆ. ಹೀಗಾಗಿ ಬೆಂಗಳೂರು ಎಂದರೆ ರಿಯಲ್ ಎಸ್ಟೇಟ್ ತಿಮಿಂಗಿಲಗಳು ಈಜಾಡೋ ಸಾಗರ ಆಗಿಬಿಟ್ಟಿದೆ. ಈ ದೇಶದಲ್ಲಿ ರಿಯಲ್ ಎಸ್ಟೇಟ್ ಕಳ್ಳರ ಕೈಯಲ್ಲಿ ನಲಿದಾಡೋ ನೋಟುಗಳು ಖೋಟಾನೋಟೋ-ಸಾಚಾ ನೋಟೋ ಗೊತ್ತಿಲ್ಲ. ಕೇಳ ಬೇಕಾದ ಅಧಿಕಾರಿಗಳು ಯಬಡೇಶಿಗಳಂತೆ ಆ ನೋಟುಗಳನ್ನೇ ಕಣ್ಣಿಗೊತ್ತಿಕೊಂಡು ಕುಳಿತಿದ್ದಾರೆ. ಇದರಿಂದ ಮತ್ತಷ್ಟು ಉತ್ತೇಜಿತರಾಗಿರುವ ಪರಭಾಷಿಕ ಭೂಗಳ್ಳರು ಯಾವ ಪರಿ ಭೂಮಿ ಗೆಬರಿಕೊಂಡು ಸಾವಿರಾರು ಕೋಟಿ ರೂಪಾಯಿ ಸಂಪಾದಿಸುತ್ತಿದ್ದಾರೆನ್ನುವುದಕ್ಕೆ ಇತ್ತೀಚೆಗೆ ಆದಾಯ ತೆರಿಗೆ ಅಧಿಕಾರಿಗಳ ದಾಳಿಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡ ಡಾ.ಸಿ.ಜೆ.ರಾಯ್‌ನೇ ಸಾಕ್ಷಿ.

ಬೆಂಗಳೂರಿನ ಸಾಫ್ಟ್ ವೇರ್ ದೈತ್ಯ ಹೆಚ್.ಪಿ ಕಂಪನಿಯಲ್ಲಿ ಸಣ್ಣ ಕೆಲಸ ಮಾಡುತ್ತಿದ್ದ ಡಾ.ಚಿರಿಯಂಕಂದತ್ ಜೋಸೆಫ್ ರಾಯ್ ಎಂಬಾತ ಕೇರಳದಿಂದ ಬಂದಾಗ ರಿಯಲ್ ಎಸ್ಟೇಟ್‌ನ ಗಂಧಗಾಳಿಯೂ ಗೊತ್ತಿರಲಿಲ್ಲ. ಇವರ ತಲೆಗೆ ಭೂಕಬಳಿಕೆ ವಿದ್ಯೆ ಹೋಗಿದ್ದು "ಕ್ರಿಸ್ಟಲ್ ಗ್ರೂಪ್" ಸೇರಿಕೊಂಡಾಗ ಅನ್ನುವವರಿದ್ದಾರೆ. ಕೆ.ಕೆ ನಂಬೂದರಿ ಮತ್ತು ಲತಾ ನಂಬೂದರಿ ದಂಪತಿ ಕಟ್ಟಿದ "ಕ್ರಿಸ್ಟಲ್ ಗ್ರೂಪ್" ಎಂಬ ರಿಯಲ್ ಎಸ್ಟೇಟ್ ಸಂಸ್ಥೆಯಲ್ಲಿ ತೂರಿಕೊಂಡಾಗ ಸಿ.ಜೆ.ರಾಯ್‌ಗೆ ಭೂಗಳ್ಳ ಪ್ರಪಂಚದ ವ್ಯವಹಾರ ತಿಳಿಯಿತು. ಒಂದು ಪುಟ್ಟ ಬಾಡಿಗೆ ಕಚೇರಿಯಲ್ಲಿ ಕೇವಲ ಐದು ಜನರಿದ್ದ "ಕ್ರಿಸ್ಟಲ್ ಗ್ರೂಪ್" ಸಂಸ್ಥೆಯು ಬೆಂಗಳೂರಿನಲ್ಲಿ ಸೈಟು-ಮನೆ ಕೊಡ್ತೀವಿ ಅಂತ ದೇಶ-ವಿದೇಶಗಳಲ್ಲಿರುವ ಮಲಯಾಳೀ ಜನರಿಗೆ ಹೇಳಿ ಕೋಟಿಗಟ್ಟಲೆ ಹಣ ಸಂಪಾದಿಸುತ್ತಿದ್ದುದನ್ನು ನೋಡಿದ ಸಿ.ಜೆ.ರಾಯ್, ಹಲವರಿಂದ ಹಣ ಹೂಡಿಸುವುದನ್ನು ರೂಢಿಸಿಕೊಂಡ. ಸಣ್ಣ ನೌಕರನಾಗಿ ಕ್ರಿಸ್ಟಲ್ ಗ್ರೂಪ್ ಸೇರಿ, ಅತಿ ಶೀಘ್ರದಲ್ಲೆ ಅದರ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದು ಮರಾಮೋಸದಿಂದ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಸೈಟು-ಪ್ಲಾಟು ದೊರೆಯುತ್ತೆ ಅಂತ ದೇಶ-ವಿದೇಶಗಳಲ್ಲಿದ್ದ ಹಣವಂತರಿಂದ ಹೂಡಿಕೆ ಮಾಡಿಸಿಕೊಳ್ಳುತ್ತಿದ್ದ. ಇವನ ಈ ವ್ಯವಹಾರ ತಂತ್ರಗಳು ಯಶಸ್ವಿ ಆದಾಗ "ಕ್ರಿಸ್ಟಲ್ ಗ್ರೂಪ್" ಕಂಪನಿಯ ಪ್ರಾಫಿಟ್ ಗ್ರಾಫ್ ರಾಕೆಟ್ ಥರ ಮೇಲೆ ಹೋಗತೊಡಗಿತು.

ಗಲ್ಫ್, ಮತ್ತು ಅಮೆರಿಕಾದಲ್ಲಿರುವ ಮಲಯಾಳಿಗಳು "ಕ್ರಿಸ್ಟಲ್ ಗ್ರೂಪ್" ಕಂಪನಿಯ ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಮಿಲಿಯನ್ ಡಾಲರ್ ಗಟ್ಟಲೆ ಹೂಡಿಕೆ ಮಾಡತೊಡಗಿದ್ದರಿಂದ, ಕೋಟಿ ಕೋಟಿ ಆದಾಯ ಬಂತು. ಆಗ "ಕ್ರಿಸ್ಟಲ್ ಗ್ರೂಪ್"ಮಾಲೀಕ ಕೆ.ಕೆ. ನಂಬೂದರಿ ಮತ್ತು ಸಿ.ಜೆ.ರಾಯ್ ನಡುವೆ ಕಮಿಷನ್

**ಧೈರ್ಯವು ಯಶಸ್ಸಿನ ಮೂಲಮಂತ್ರವಾಗಿದ್ದು , ಬದುಕಿನ ಸವಾಲುಗಳನ್ನು ಎದುರಿಸಲು ನಿರಂತರ ಪರಿಶ್ರಮ ಮತ್ತು ಆತ್ಮವಿಶ್ವಾಸ ಅತ್ಯಗತ್ಯ.**



**ಧರ್ಮರಾಜ್**
ಹಾಸನ

ವಿಚಾರಕ್ಕೆ ಮನಸ್ತಾಪವಾಯಿತು. ೨೦೦೫ರಲ್ಲಿ "ಕ್ರಿಸ್ಟಲ್ ಗ್ರೂಪ್" ಬಿಟ್ಟು ಹೊರ ಬಂದ ಸಿ.ಜೆ.ರಾಯ್ ಕಟ್ಟಿದ್ದು "ಕಾನ್ಫಿಡೆಂಟ್ ಗ್ರೂಪ್" ಅನ್ನೋ ರಿಯಲ್ ಎಸ್ಟೇಟ್ ಸಂಸ್ಥೆ. ಹೀಗೇ, ಕೇರಳಾದಿಂದ ಬೆಂಗಳೂರಿಗೆ ಬಂದು ರಿಯಲ್ ಎಸ್ಟೇಟ್‌ನಲ್ಲಿ ಸಾವಿರಾರು ಕೋಟಿ ರೂಪಾಯಿ ಸಂಪಾದಿಸಿದ ಸಿ.ಜೆ.ರಾಯ್ ತನ್ನ ಶ್ರೀಮಂತಿಕೆ ಹೇಗೆ ಬಂತು ಎಂದರೆ? ತನ್ನ ತಾಯಿಯಿಂದ ಅನ್ನೋ ಕಾಗಕ್ಕ ಗೂಬಕ್ಕನ ಕತೆ ಹೇಳುತ್ತಿದ್ದ. ಇವರಮ್ಮ ಎಸ್‌ಎಸ್‌ಎಲ್‌ಸಿ ಓದಿದ್ರು. ಸಣ್ಣದೊಂದು ಮನೆ ಕಟ್ಟೋದು, ಪ್ಲಾಟ್ ತಗೋಳೋದು, ಅದನ್ನ ಮಾರೋದು ಮಾಡುತ್ತಿದ್ದಳಂತೆ. ೧೨ ವರ್ಷದ ಸಿ.ಜೆ.ರಾಯ್ ಅಕೌಂಟೆಂಟ್ ಆಗಿ, ಅಮ್ಮನ ಬಿಸಿನೆಸ್ ನೋಡಿಕೊಳ್ತಾ ರಿಯಲ್ ಎಸ್ಟೇಟ್ ವ್ಯವಹಾರ ಕಲಿತನಂತೆ. ಹೀಗೇ ರಿಯಲ್ ಎಸ್ಟೇಟ್ ಅನ್ನೋದು ನನ್ನ ರಕ್ತದಲ್ಲೇ ಬಂದಿದೆ ಅನ್ನುತ್ತಿದ್ದವನ ಕಚೇರಿಗೆ ಆದಾಯ ತೆರಿಗೆ ಅಧಿಕಾರಿಗಳು ದಾಳಿ ಮಾಡುತ್ತಿದ್ದಂತೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಇದು ಒಬ್ಬ ಸಿ.ಜೆ.ರಾಯನ ಕತೆಯಲ್ಲ, ಇಲ್ಲಿ ಅದೆಷ್ಟೋ ಓಬಿರಾಯನ ಕತೆಗಳು ಇವೆ. ಪರಭಾಷಿಕ ಭೂಗಳ್ಳರು, ಅದರಲ್ಲೂ ಆಂಧ್ರ ಮೂಲದವರು, ಉತ್ತರ ಭಾರತೀಯರು, ಪಶ್ಚಿಮ ಭಾರತದ ಗುಜರಾತಿ-ರಾಜಸ್ತಾನಿಗಳು, ಪೂರ್ವ ಭಾರತದ ಬಂಗಾಳಿ-ಬಿಹಾರಿಗಳು ಬೆಂಗಳೂರು ಸುತ್ತಲ ಸಾವಿರಾರು ಪ್ರದೇಶಗಳನ್ನು ನುಂಗಿದ್ದಾರೆ. ಇಲ್ಲಿಗೆ ಸಿ.ಜೆ. ರಾಯ್‌ನಂತೆ 'ಕ್ರಿಸ್ಟಲ್ಲೋ-ಕಾನ್ಫಿಡೆಂಟೋ' ಮಾಡಿಕೊಂಡು ತಮ್ಮ ಭಾಷೆಯ ಜನರನ್ನು ತುಂಬುತ್ತಿದ್ದಾರೆ. ಬಹುಮುಖ್ಯವಾಗಿ ಹೊರ ರಾಜ್ಯದ ಟೆಕ್ಕಿಗಳನ್ನು ಸಿಲಿಕಾನ್ ಕ್ಷೇತ್ರದಲ್ಲಿ ತುಂಬಿಕೊಂಡಿದ್ದಾರೆ. ಅವರೆಲ್ಲಾ ಇಲ್ಲೇ ಬೀಡುಬಿಡುತ್ತಿರುವುದರಿಂದ ಪರಭಾಷಿಕರ ಸಂಖ್ಯೆ ಹೆಚ್ಚಾಗಿ ಕನ್ನಡಿಗರ ಸಂಖ್ಯೆ ಕುಸಿಯುತ್ತಿದೆ. ಸ್ಥಳೀಯ ಭಾಷೆ ಕಲಿಯದೆ, ಕನ್ನಡಿಗರ ಮೇಲೇ ದಬ್ಬಾಳಿಕೆ ಮಾಡುತ್ತಿದ್ದಾರೆ. ಇದರಿಂದ ಕನ್ನಡಿಗ ಬೆಂಗಳೂರಿನಲ್ಲಿ ಸಾರ್ವಭೌಮನಾಗುವ ಬದಲು ಸವಕಳಿಯಾಗುತ್ತಿದ್ದಾನೆ. ನಾವು ಆರಿಸುವ ಸರ್ಕಾರ ಕನ್ನಡ ಪರವಾಗಿದ್ದಿದ್ದರೆ ಪರಭಾಷಿಕರ ಹಾವಳಿ ಬಾಧಿಸುತ್ತಿರಲಿಲ್ಲ. ಕನ್ನಡಿಗರು ರಾಷ್ಟ್ರೀಯ ಪಕ್ಷಗಳನ್ನು ಅಧಿಕಾರಕ್ಕೆ ತರುತ್ತಿರುವುದರಿಂದ ಕನ್ನಡಿಗರ ಅಸ್ತಿತ್ವಕ್ಕೆ ಮತ್ತು ಅಸ್ಮಿತೆಗೆ ಧಕ್ಕೆಯಾಗುತ್ತಿದೆ. ಕನ್ನಡ-ಕನ್ನಡಿಗ-ಕರ್ನಾಟಕ ರಕ್ಷಣೆಗೆ ಬದ್ಧವಾಗಿರುವ ಪ್ರಾದೇಶಿಕ ಪಕ್ಷವನ್ನು ಅಧಿಕಾರಕ್ಕೆ ತರದಿದ್ದರೆ, ಕನ್ನಡಿಗರು ಮತ್ತಷ್ಟು ಕುಸಿಯುವ ಅಪಾಯವಿದೆ.

**ಸಿಲಿಕಾನ್ ಸಿಟಿ-ಲ್ಯಾಂಡ್ ಮಾಫಿಯಾ ಆಗುತ್ತಿದೆ:**

ಮಧ್ಯ ಅಮೆರಿಕಾ ಖಂಡದ ಖಿಚಡಿ ದೇಶಳಿಗೆ ಕೊಲಂಬಿಯಾ ಮತ್ತು ಮೆಕ್ಸಿಕೋ ದೇಶಗಳು ಉತ್ತರ-ದಕ್ಷಿಣ ತುದಿಯ ಗಡಿಗಳಂತೆ ಕಾಣುತ್ತವೆ. ಈ ಎರಡು ದೇಶಗಳ ನಡುವೆ ಇರುವ ಖಿಚಡಿ ದೇಶಗಳಾದ ಬೆಲಿಝ್-ಕೋಸ್ಟಾರಿಕಾ-ಎಲ್ ಸಾಲ್ವೆಡಾರ್-ಗ್ವಾಟೇಮಾಲಾ-ಹೊಂಡುರಾಸ್-ನಿಕರಾಗುವಾ ಮತ್ತು ಪನಾಮಾ ದೇಶಳು ಭೂಗತ ಕುಕೃತ್ಯಕ್ಕೆ ಕುಖ್ಯಾತವಾಗಿವೆ. ಈ ಖಿಚಡಿ ದೇಶಗಳಂತೆ ಭೂ ಮಾಫಿಯಾ ಕೈಗೆ ಬೆಂಗಳೂರು ಸಿಲುಕಿ ನಲುಗುವ ಕಾಲ ಬಹಳ ದೂರವಿಲ್ಲ. ಆ ಅಪಾಯ ಸನಿಹದಲ್ಲೇ ಇದೆ ಅನ್ನಿಸುತ್ತೆ. ಬೆಂಗಳೂರಿನ ಶೇ.೮೦ರಷ್ಟು ಭೂ ಭಾಗವನ್ನು ಪರಭಾಷಿಕ ಭೂಗಳ್ಳರು ಆಕ್ರಮಿಸಿದ್ದಾರೆ. ಇವರೆಲ್ಲ ಸ್ಥಳೀಯ ಕನ್ನಡಿಗರನ್ನು ಹೆದರಿಸಲು ರೌಡಿಗಳನ್ನು ತಮ್ಮ ಬಾಡಿಗಾರ್ಡ್ ಗಳಂತೆ ಇಟ್ಟುಕೊಂಡಿದ್ದಾರೆ. ಇದರಿಂದ ಪುಡಿ ರೌಡಿಗಳ ನಡುವೆ ನಡೆಯುತ್ತಿದ್ದ ಮಚ್ಚು-ಲಾಂಗು ದಾಳಿಗಳ ಬದಲು ಮುಂದೆ ಎಕೆ-೪೭ ನಂಥ ಆಧುನಿಕ ಗನ್‌ಗಳಿಂದ ದಾಳಿಗಳಾಗಬಹುದು. ಹೀಗಾದ ಸಂದರ್ಭದಲ್ಲಿ ಸ್ಥಳೀಯ ಕನ್ನಡಿಗರು ಮತ್ತಷ್ಟು ಭಯಭೀತರಾಗಿ ಬೆಂಗಳೂರು ಬಿಡಬೇಕಾದ ಸಂದರ್ಭ ಬಂದರೂ ಅಚ್ಚರಿ ಇಲ್ಲ.

ಬೆಂಗಳೂರು ಸೇರಿದಂತೆ ಕರ್ನಾಟಕದ ಫಲವತ್ತಾದ ಭೂಮಿಗಳೆಲ್ಲ ಪರಭಾಷಿಕರ ಪಾಲಾಗುತ್ತಿದೆ. ಅದರಲ್ಲು ಕೇರಳಾ ಮೂಲದ ಮಲಬಾರಿಗಳು ಕೊಡಗು-ಚಿಕ್ಕಮಗಳೂರುಗಳಲ್ಲಿ ಕಾಫಿ ಎಸ್ಟೇಟ್‌ಗಳನ್ನು ಸಾವಿರಾರು ಎಕರೆ ಗಟ್ಟಲೆ ಖರೀದಿಸಿದ್ದಾರೆ. ಇಲ್ಲಿ ಬಾಂಗ್ಲಾ ಮೂಲದ ಜನರನ್ನು ಅಸ್ಸಾಂ ಮೂಲದವರು ಅಂತ ಕೂಲಿ ಕಾರ್ಮಿಕರನ್ನಾಗಿ ಅವ್ಯಾಹತವಾಗಿ ನೇಮಿಸಿಕೊಳ್ಳುತ್ತಿದ್ದಾರೆ. ಬೆಂಗಳೂರಿನಲ್ಲಿ ಸೈಟು-ಪ್ಲಾಟು ಇದೆ ಅಂತ ದೇಶ-ವಿದೇಶಗಳಲ್ಲಿರುವ ಹಣವಂತರನ್ನು ಪುಸಲಾಯಿಸಿ ಕರೆಸಿಕೊಂಡಂತೆಯೇ, ಕರ್ನಾಟಕದಲ್ಲಿ ಹೊಟ್ಟೆ-ಬಟ್ಟೆಗೆ ಸಾಕಾಗುವಷ್ಟು ಕೆಲಸ ಸಿಗುತ್ತೆ ಅಂತ ಬಡಪಾಯಿ ಪರದೇಸಿಗಳನ್ನು ಕರೆಸಿಕೊಂಡು ಕನ್ನಡಿಗರನ್ನೇ ಕರ್ನಾಟಕದಲ್ಲಿ ಮೂಲೋತ್ಪಾಟನೆ ಮಾಡುವ ಕುತಂತ್ರ ರೂಪಿಸುತ್ತಿದ್ದಾರೆ. ನಮ್ಮನ್ನಾಳುವ ಸರ್ಕಾರಕ್ಕಾಗಲಿ, ನಮ್ಮ ಜನರಿಗಾಗಲಿ ಭವಿಷ್ಯದಲ್ಲಿ ಕರ್ನಾಟಕ-ಕನ್ನಡ-ಕನ್ನಡಿಗರ ಸ್ಥಿತಿ ಏನಾಗುತ್ತೆ ಅನ್ನೋ ಸಣ್ಣ ಕಲ್ಪನೆ ಕೂಡಾ ಇಲ್ಲ.

ಕನ್ನಡ-ಕನ್ನಡಿಗ-ಕರ್ನಾಟಕ ಎಂಬ ಅಸ್ಮಿತೆ ಉಳಿದು ಬೆಳೆಯಬೇಕಾದರೆ, ಮೊದಲಿಗೆ ನಮ್ಮ ನೆಲ ಭದ್ರ ಮಾಡಿಕೊಳ್ಳಬೇಕು. ಇದಕ್ಕಾಗಿ ಪರಭಾಷಿಕರು ಕನ್ನಡ ನಾಡಿನ ಭೂಮಿ ಖರೀದಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಕನ್ನಡ ಮಕ್ಕಳಿಗೆ ಉದ್ಯೋಗ ದೊರಕಿಸಿಕೊಡಲು ಸರ್ಕಾರ ಮಾತ್ರವಲ್ಲದೆ, ಸಂಘ-ಸಂಸ್ಥೆಗಳು ಮುಂದಾಗಬೇಕು. ಸ್ಥಳೀಯ ಉದ್ಯೋಗ ಕನ್ನಡಿಗರಿಗೆ ಮೀಸಲು ಅನ್ನೋದು ಅರ್ಥ ಧ್ಯೇಯ ಮಾತ್ರವಲ್ಲ, ಸರ್ಕಾರದ ನಿಯಮವೂ ಆಗಿರಬೇಕು.





ಸಂಬಂಧಗಳು ಹುಟ್ಟೋದು ರಕ್ತದಿಂದ. ಆದರೆ ನಮ್ಮವರು ಅನ್ನೋ ಭಾವನೆ ಹುಟ್ಟೋದು ಮನಸ್ಸಿನಿಂದ ಮಾತ್ರ. ನಾವು ನೋಡೋ ದೃಷ್ಟಿ-ಅರ್ಥ ಮಾಡಿಕೊಳ್ಳುವ ಮನಸ್ಸು-ಮಾತನಾಡುವ ನಾಲಿಗೆ ಸರಿಯಿಲ್ಲದಿದ್ದರೆ ಯಾವ ಸಂಬಂಧಗಳೂ ಉಳಿಯುವುದಿಲ್ಲ

ಸಿದ್ದರಾಜು
ತುಮಕೂರು

# ವೃದ್ಧಾಶ್ರಮಗಳಂತಾದ ಹಳ್ಳಿಗಳು

ನಮ್ಮ ಕರ್ನಾಟಕದ ದುರಂತಕ್ಕೆ ನಾಡಿನ ತಾಯಿ ಬೇರು ಎನಿಸಿದ ಹಳ್ಳಿಗಳು ಸೊರಗಿ ಹೋಗುತ್ತಿವೆ. ಒಂದು ಸಸ್ಯದ ಜೀವದ ಮೂಲವಾದ ತಾಯಿ ಬೇರು ಸತ್ತಿತೆಂದರೆ, ಅದರ ಸಾವು ಖಚಿತ ಎಂದರ್ಥ. ಅದೇ ರೀತಿ ಒಂದು ನಾಡಿನ ಜೀವ ನಾಡಿ ಅಥವ ತಾಯಿ ಬೇರು ಎಂದರೆ, ಅದು ಹಳ್ಳಿ. ಹಳ್ಳಿಗಳಿಂದ ಸಮೃದ್ಧವಾಗಿದ್ದ ಕನ್ನಡ ನಾಡು ದಿನದಿಂದ ದಿನಕ್ಕೆ ಹಳಿಯುತ್ತಿವೆ. ಜನರ ಉದರ ಸಲಹುವ ಅನ್ನದ ಮೂಲವಾದ ಹಳ್ಳಿಗಳೇ ನಿರ್ನಾಮವಾಗುವ ಹಂತಕ್ಕೆ ಬಂದಿವೆ. ಅಲ್ಲಿ ಬೆಳೆಯುವ ಭೂಮಿ ವಿಷಯುಕ್ತವಾಗಿದ್ದರೆ, ಬೆಳೆವ ಬೆಳೆಗೆ ಬೆಲೆ ಇಲ್ಲದೆ ಜನ ಹಳ್ಳಿಗಳಿಂದ ಗುಳೆ ಹೋಗುತ್ತಿದ್ದಾರೆ. ಕೃಷಿ ಕೆಲಸ ಶ್ರಮಧಾಯಕ ಮತ್ತು ಅಲ್ಪ ಆದಾಯ ಅಂತ ನಗರ ಪಟ್ಟಣಗಳತ್ತ ವಲಸೆ ಬರುತ್ತಿರುವ ಯುವಕರು ಹೆಚ್ಚಾಗುತ್ತಿರುವುದರಿಂದ ಹಳ್ಳಿಗಳಲ್ಲಿ ಯುವಕರೇ ಇಲ್ಲದಂತಾಗಿದೆ. ವೃದ್ಧರಷ್ಟೇ ಮುರುಕಲು ಮನೆ ಕಾಯ್ದುಕೊಂಡಿರುವುದರಿಂದ ಹಳ್ಳಿಗಳೆಲ್ಲ ವೃದ್ಧಾಶ್ರಮಗಳಂತಾಗಿವೆ. ಸದಾ ಜನ-ಜಾನುವಾರುಗಳಿಂದ ಗಿಜಿಗಿಡುತ್ತಿದ್ದ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಸ್ಮಶಾನ ಮೌನ ಆವರಿಸಿದೆ. ಕಾಡಿನಲ್ಲಿ ಪ್ರಾಣಿಗಳ ಸಂಖ್ಯೆ ಹೆಚ್ಚಾಗಿ, ನಿಶ್ಯಬ್ದವಾದ ಹಳ್ಳಿ ಪ್ರದೇಶಗಳಿಗೆ ನುಗ್ಗುತ್ತಿವೆ. ಇದರಿಂದ ಹಿಂದೆಂದೂ ಕೇಳಿರದ ಹುಲಿ-ಚಿರತೆ-ಆನೆ ದಾಳಿಗಳು ನಿತ್ಯ ಸಾಮಾನ್ಯ ಎಂಬಂತಾಗಿದೆ.

ಕನ್ನಡಿಗರು ಸೋಂಬೇರಿಗಳಾಗದೆ, ಸಣ್ಣ-ಪುಟ್ಟ ಕೆಲಸ ಎಂಬ ಕೆಲಸದಲ್ಲಿ ಕೀಳರಿಮೆ ಬೆಳೆಸಿಕೊಳ್ಳದೆ ದುಡಿದು ಬದುಕುವ ಛಾತಿ ಬೆಳೆಸಿಕೊಳ್ಳಬೇಕು. ಉದ್ಯೋಗವಂತರಾಗಿ ಸ್ಥಿತಿವಂತರಾದ ಕನ್ನಡಿಗರಿಗೆ ಕಂಕಣ ಭಾಗ್ಯ ಕೊಡಿಸಬೇಕು. ಆದ್ಯತೆ ಮೇರೆಗೆ ಕನಿಷ್ಟ ಮೂರು ಮಕ್ಕಳನ್ನಾದರೂ ಕನ್ನಡಿಗರು ಹೊಂದಬೇಕು. ಮಕ್ಕಳ ಶಿಕ್ಷಣ ವೆಚ್ಚದ ದುಬಾರಿಯಿಂದಲೇ ಬಹಳಷ್ಟು ಪೋಷಕರು ಸಂತಾನವನ್ನು ಒಂದಕ್ಕೆ ಸೀಮಿತಗೊಳಿಸಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ದುಬಾರಿ ಶುಲ್ಕಕ್ಕೆ ಕಡಿವಾಣ ಹಾಕಬೇಕು. ಆಗಷ್ಟೇ ಕನ್ನಡ-ಕನ್ನಡಿಗ-ಕರ್ನಾಟಕ ಸಮೃದ್ಧವಾಗಿ ಬೆಳೆದು, ಉಳಿಯುತ್ತದೆ. ಹಾಗಲ್ಲದಿದ್ದರೆ, ವಿಶ್ವಸಂಸ್ಥೆ ಅಂಗ ಸಂಸ್ಥೆಯಾದ ಯುನೆಸ್ಕೋ ಪ್ರಕಟಿಸಿರುವಂತೆ ಕ್ರಿ.ಶ.೨೦೫೦ಕ್ಕೆ ನಶಿಸಿ ಹೋಗುವ ಪಟ್ಟಿಯಲ್ಲಿ ಕನ್ನಡ ಭಾಷೆ ಮಾತ್ರವಲ್ಲ, ಕನ್ನಡಿಗರೇ ನಾಶವಾಗಿ ಹೋಗುವ ಗಂಡಾಂತರವಿದೆ.

**ಕನ್ನಡಿಗರ ಜನನ ಪ್ರಮಾಣ ಕುಸಿತ:**

ಕನ್ನಡಿಗರ ಅಸ್ತಿತ್ವಕ್ಕೆ ಅಪಾಯ ಬರುತ್ತಿರುವುದು ಪರಭಾಷಿಕರ ದಾಳಿಗಿಂತ ಕನ್ನಡ ಮಕ್ಕಳ ಜನನ ಪ್ರಮಾಣ ಕುಸಿಯುತ್ತಿರುವುದು. ಬಹುತೇಕ ಒಂದು ಮಗುವಿಗೆ ಸೀಮಿತಗೊಳಿಸಿಕೊಳ್ಳುತ್ತಿರುವ ಕನ್ನಡಿಗರ ಭಯಾನಕ ಕುಟುಂಬ ಕಲ್ಯಾಣ ಯೋಜನೆಗಳು ಮತ್ತು ಯೋಚನೆಗಳು ಕರ್ನಾಟಕದ ಅಸ್ತಿತ್ವಕ್ಕೆ ಅಪಾಯವಾಗುತ್ತಿದೆ. ಇತ್ತೀಚೆಗೆ ಹೆಣ್ಣು ಮಕ್ಕಳ ಕೊರತೆ ಹೆಚ್ಚಾಗಿ, ಮದುವೆ ಆಗದ ಗಂಡು ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ತೀವ್ರಗತಿಯಲ್ಲಿ ಕನ್ನಡಿಗರ ಸಂಖ್ಯೆ ಕುಸಿಯುತ್ತಿದೆ. ಆದರೆ, ಜನಸಂಖ್ಯೆ ನಿಯಂತ್ರಣವಿರದ ಉತ್ತರ ಭಾರತ ಹಿಂದಿವಾಲಾಗಳು ಉದ್ಯೋಗ ಅರಸಿ ಕರ್ನಾಟಕದತ್ತ ವಲಸೆ ಬರುವುದು ಹೆಚ್ಚಾಗುತ್ತಿದೆ. ಇದರ ಜೊತೆಗೆ ಬಿಜೆಪಿ-ಆರೆಸೆಸ್ ಹಿಡನ್ ಅಜೆಂಡವಾದ ಹಿಂದಿ ಹೇರಿಕೆ ಜೊತೆಗೆ ಹಿಂದಿ ವಾಲಾಗಳನ್ನು ಹೇರುವ ಹುನ್ನಾರ ಕೇಂದ್ರದ ಮೋದಿ ಸರ್ಕಾರ ಮಾಡುತ್ತಿರುವುದರಿಂದ ಬ್ಯಾಂಕ್-ರೈಲ್ವೆ ಸೇರಿದಂತೆ ಕೇಂದ್ರ, ಸರ್ಕಾರಿ ಸ್ವಾಮ್ಯದಲ್ಲೆಲ್ಲ ಸ್ಥಳೀಯರ ಬದಲು ಉತ್ತರ ಭಾರತೀಯರೇ ತುಂಬಿಕೊಂಡಿದ್ದಾರೆ.

ನಮ್ಮಲ್ಲಿನ ಯಬಡೇಶಿ ರಾಜ್ಯ ಸರ್ಕಾರ ಪಕ್ಕದ ತಮಿಳುನಾಡಿನವರಂತೆ ದ್ವಿಭಾಷಾ ಸೂತ್ರ ಹಿಡಿದು, ಹಿಂದಿಯನ್ನು ಮೂರನೇ ಭಾಷೆಯಾಗಿಯೂ ಕಲಿಯುವುದಿಲ್ಲ ಅನ್ನುವ ಬದಲು, ಹಿಂದಿ ಕಡ್ಡಾಯ ಕಲಿಯಬೇಕೆಂದು ನಮ್ಮ ಮಕ್ಕಳ ಮೇಲೆ ದಬ್ಬಾಳಿಕೆ ಮಾಡುತ್ತಿದೆ. ತಮಿಳುನಾಡಿನಲ್ಲಿ ಬ್ಯಾಂಕ್-ರೈಲ್ವೆ ಮತ್ತಿತರ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಹಿಂದಿ ನಾಮ ಫಲಕ ಹಾಕುವುದಕ್ಕೂ ಬಿಡುವುದಿಲ್ಲ. ಅಲ್ಲಿನ ಬ್ಯಾಂಕ್ ಚೆಕ್ ಬುಕ್, ರೈಲ್ ಟಿಕೆಟ್‌ಗಳಲ್ಲು ತಮಿಳು-ಇಂಗ್ಲಿಷ್ ಹೊರತು ಬೇರೆ ಭಾಷೆಗೆ ಅವಕಾಶವೇ ಇಲ್ಲ. ಹೀಗೇ, ಅಲ್ಲಿ ಸರ್ಕಾರವೇ ತಮಿಳು ಭಾಷೆ ಮತ್ತು ತಮಿಳರ ರಕ್ಷಣೆಗೆ ನಿಲ್ಲುತ್ತೆ. ನಮ್ಮಲ್ಲಿಯಂತೆ ಅಲ್ಲಿ ಯಾರೂ ತಮಿಳು ಹೋರಾಟಗಾರರು ಅಂತಿಲ್ಲ. ಬಹುಶಃ ನಮ್ಮ ಕನ್ನಡ ಭಾಷೆ ಮೇಲೆ ನಾವು ಬರೆದಿರುವಷ್ಟು ನಾಡ ಭಕ್ತಿ ಗೀತೆಗಳು ವಿಶ್ವದ ಯಾವ ಭಾಷೆಯಲ್ಲೂ ಬಂದಿರಲಾರದು. ಒಟ್ಟಾರೆ, ಕನ್ನಡ ನಾಡು-ನುಡಿಯ ಬಗ್ಗೆ ನಮ್ಮನ್ನಾಳುವವರೇ ಮುಂದಾಳ್ತನವಹಿಸಿಕೊಂಡರೆ, ನಮ್ಮ ಕನ್ನಡ-ಕನ್ನಡಿಗ-ಕರ್ನಾಟಕದ ರಕ್ಷಣೆ ಮಾಡಬಹುದು.

## ಸಿ.ಜೆ.ರಾಯನ ಕೋರಮಂಗಲದ ಆಸ್ತಿ ನಟ ಪುನೀತ್ ಖರೀದಿಸಿದ್ದೇಗೇ?

ಕಾನ್ಫಿಡೆಂಟ್ ಗ್ರೂಪ್‌ನ ಮಾಲೀಕ ಡಾ.ಸಿ.ಜೆ.ರಾಯ್ ಆತ್ಮಹತ್ಯೆ ಮಾಡಿಕೊಂಡ ನಂತರ ಹಲವು ವಿಚಾರಗಳು ಹೊರಬರುತ್ತಿವೆ. ಬೆಂಗಳೂರಿನ ಕೋರಮಂಗಲದಲ್ಲಿದ್ದ ಹತ್ತಾರು ಕೋಟಿ ರೂಪಾಯಿ ಬೆಲೆಯ ಆಸ್ತಿಯನ್ನು ಯಾರಿಗೂ ಮಾರುವುದಿಲ್ಲ. ಅದು ನನ್ನ ಮಗಳ ಹೆಸರಿನಲ್ಲಿದೆ, ಅದು ಅವಳಿಗಾಗಿ ಮಾತ್ರ ಎನ್ನುತ್ತಿದ್ದ ಸಿ.ಜೆ.ರಾಯ ನಟ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಕೇಳುತ್ತಿದ್ದಂತೆ, ಮರು ಮಾತಿಲ್ಲದೆ ಮಾರಿದ್ದನಂತೆ. ಕೋರಮಂಗಲದ ಸಿ.ಜೆ.ರಾಯ್ ಮಗಳು ರಿಯಾಮೇರಿ ಹೆಸರಲ್ಲಿದ್ದ ಕೋರಮಂಗಲದ ಆಸ್ತಿ ಈಗ ಪುನೀತ್ ಪತ್ನಿ ಅಶ್ವಿನಿ ಹೆಸರಿನಲ್ಲಿದೆ. ಅದ್ಯಾವ ಕಾರಣಕ್ಕೆ ಸಿ.ಜೆ.ರಾಯ್ ಕೋರಮಂಗಲದ ಆಸ್ತಿ ಮಾರಿದ ಅನ್ನೋದು ಬಹಳ ನಿಗೂಢವಾಗಿದೆ, ಪುನೀತ್ ಹಠಾತ್ ಸಾವಿನಂತೆ.!

**ಕನ್ನಡಿಗರು ತಮ್ಮ ಉದಾಸೀನ ಮತ್ತು ಒಗ್ಗಟ್ಟಿನ ಕೊರತೆಯಿಂದಾಗಿ, ಇಂದು ನಮ್ಮ ನೆಲೆಯನ್ನು ಕಳೆದುಕೊಳ್ಳುತ್ತಾ, ಪರಭಾಷಿಕರ ಅಡಿಯಲ್ಲಿ ಶೋಷಣೆಗೊಳಗಾಗುತ್ತಿದ್ದಾರೆ.**

## ಇದ್ದದ್ದು ಇದ್ದಂಗೆ



ಎಚ್.ಶಿವರಾಮೇಗೌಡ
ರಾಜ್ಯಾಧ್ಯಕ್ಷರು, ಕ.ರ.ವೇ.

ಪದೇ ಪದೇ ಅನ್ಯಾಯಕ್ಕೊಳಗಾಗುತ್ತಿರುವ ಕನ್ನಡಿಗರು ಇಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಇನ್ನೂ ಮುಂದುವರೆಯಬೇಕೇ? ಒಕ್ಕೂಟ ವ್ಯವಸ್ಥೆಯೆಂದರೆ ದಕ್ಷಿಣದವರ ಮತಗಳಿಂದ ಉತ್ತರದವರು ಅಧಿಕಾರಕ್ಕೇರುವುದಕ್ಕಲ್ಲ, ಒಕ್ಕೂಟ ಮಾಡಿಕೊಂಡಿರುವುದೂ ನಮ್ಮ ತೆರಿಗೆಯಿಂದ ಉತ್ತರದ ರಾಜ್ಯಗಳನ್ನು ಉದ್ಧರಿಸಿಕೊಳ್ಳುವುದಕ್ಕೂ ಅಲ್ಲ.

# ರೈಲ್ವೆ ಪರೀಕ್ಷೆಯಲ್ಲಿ ಮತ್ತೆ ಕನ್ನಡಕ್ಕೆ ದ್ರೋಹ ಬಗೆದ ಕೇಂದ್ರ

ರೈಲ್ವೆ ಹುದ್ದೆಗಳ ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶವಿದ್ದರೂ "ಸ್ಟೇಷನ್ ಮಾಸ್ಟರ್" ಹುದ್ದೆಗೆ ಕನ್ನಡದಲ್ಲಿ ಪರೀಕ್ಷೆ ಬರೆಯುವ ಅವಕಾಶ ಕಿತ್ತುಕೊಳ್ಳಲಾಗಿದೆ.

ನೈಋತ್ಯ ರೈಲ್ವೆಯ ಹುಬ್ಬಳ್ಳಿ ವಲಯದಲ್ಲಿ ಜನವರಿ ೩೧, ೨೦೨೬ ರಂದು ಮುಂಬಡ್ತಿ ನೇಮಕಾತಿಗಾಗಿ ಅಧಿಸೂಚನೆ (ಯುಬಿಎಲ್ ಡಿ/೧೭೮೩೪/೨//ಎಸ್ ೨೩೭೬/ಎ೦೧೬/ಓ೧೬/ ಅನ್ನು ಹೊರಡಿಸಿ ಮಾರ್ಚ್ ೨ ಅರ್ಜಿ ಸಲ್ಲಿಸಲು ಕೊನೇ ದಿನಾಂಕ ನಿಗದಿ ಮಾಡಿದ್ದರು. ಈ ಸ್ಟೇಷನ್ ಮಾಸ್ಟರ್ ಹುದ್ದೆಗೆ ೪೫ ಸಾವಿರ ವೇತನಗಳಿದ್ದವು. ಇದಕ್ಕೆ ಜರುಗುವ ಪರೀಕ್ಷೆಗೆ ಕನ್ನಡ ಭಾಷೆಯನ್ನು ತೆಗೆದು ಹಾಕಿ ಕೇವಲ ಹಿಂದಿ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅಧಿಸೂಚನೆ ಹೊರಡಿಸುವುದು ಕನ್ನಡಿಗರು ಇನ್ನೂ ಒಕ್ಕೂಟ ವ್ಯವಸ್ಥೆಯಲ್ಲಿ ಮುಂದುವರಿಯಬೇಕೇ ಎಂಬ ಪ್ರಶ್ನೆ ಎತ್ತಿದೆ. ಕಾರಣ ಈಗಾಗಲೇ ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆದು ಆಯ್ಕೆಯಾದ ರೈಲ್ವೆ ನೌಕರರಿಗೆ, ಇದು ಇಲಾಖೆಯ ಆಂತರಿಕ ಪರೀಕ್ಷೆಯಾಗಿದ್ದು, ಮುಂಬಡ್ತಿಗಾಗಿ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದಿರುವುದು ನನ್ನ ಆಕ್ರೋಶಕ್ಕೆ ಕಾರಣವಾಗಿದೆ.

೨೦೧೨ ರಿಂದಲೂ ರೈಲ್ವೇಯ ಗ್ರೂಪ್ ಸಿ ಗ್ರೂಪ್ ಡಿ ಹುದ್ದೆಗಳಿಗೆ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಲು ಆದೇಶವಿದ್ದರೂ, ಈಗಾಗಲೇ ಕನ್ನಡದವರೇ ಆದ ರೈಲ್ವೇ ಮಂತ್ರಿ ವಿ.ಸೋಮಣ್ಣನವರು ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಯಲ್ಲೇ ನಡೆಸಬೇಕೆಂದು ಸ್ಪಷ್ಟವಾಗಿ ಆದೇಶಿಸಿದ್ದರೂ ಸಹ, ಕೇವಲ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಪರೀಕ್ಷೆಗೆ ಅವಕಾಶ ನೀಡಿರುವುದು ಒಕ್ಕೂಟ ವ್ಯವಸ್ಥೆಯ ಸೌಹಾರ್ದತೆಗೆ ಎಸಗುತ್ತಿರುವ ಮಹಾದ್ರೋಹವಲ್ಲದೇ ಮತ್ತೇನು? ನಾನು ಎತ್ತಿರುವ ಈ ವಿಷಯ ಕೇವಲ ರೈಲ್ವೆ ಪರೀಕ್ಷೆಗೆ ಮಾತ್ರ ಸೀಮಿತವಲ್ಲ. ಒಕ್ಕೂಟ ವ್ಯವಸ್ಥೆಯ ಆತ್ಮವೇ ಈ ಪ್ರಶ್ನೆಯಲ್ಲಿದೆ. ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸುವ ಕೇಂದ್ರದ ಧೋರಣೆಯು ಒಕ್ಕೂಟ ವಿರೋಧಿ ನಡೆಯಲ್ಲದೇ ಮತ್ತೇನು?

ಭಾರತ ಸಂವಿಧಾನವೇ ದೇಶವನ್ನು ಒಕ್ಕೂಟ ವ್ಯವಸ್ಥೆಯ ರಾಷ್ಟ್ರವೆಂದು ಘೋಷಿಸಿರುವಾಗ, ಈ ಒಕ್ಕೂಟದ ಮೂಲ ತತ್ವವೇ ಭಾಷೆ, ಸಂಸ್ಕೃತಿ, ಪ್ರಾದೇಶಿಕ ಗೌರವಕ್ಕೆ ಸಮಾನ ಮಾನ್ಯತೆ ಕೊಡುವುದು. ಆದರೆ ರೈಲ್ವೇ ಇಲಾಖೆಯ ಸ್ಟೇಷನ್ ಮಾಸ್ಟರ್ ಮುಂಬಡ್ತಿಯ ಒಳಪರೀಕ್ಷೆ ಪ್ರಶ್ನೆಪತ್ರಿಕೆಯ ವಿಷಯ ಈ ತತ್ವವನ್ನೇ ನೇರವಾಗಿ ಪ್ರಶ್ನಿಸುತ್ತಿದೆ. ಅಂದು ನನ್ನ ನೇತೃತ್ವದ ಕರ್ನಾಟಕ ರಕ್ಷಣಾ ವೇದಿಕೆ ನೀಡಿದ ಮನವಿಗೆ ಸ್ಪಂದಿಸಿದ ರೈಲ್ವೆ ಸಚಿವರು ಪ್ರಾದೇಶಿಕ ಭಾಷೆಗಳಲ್ಲಿ ಪ್ರಶ್ನೆಪತ್ರಿಕೆ ಹೊರಡಿಸಬೇಕೆಂದು ಸ್ಪಷ್ಟ ಆದೇಶ ಹೊರಡಿಸಿದರು. ರೈಲ್ವೆ ನೌಕರರಾದವರು ಕೇವಲ ದೆಹಲಿ, ಉತ್ತರ ಪ್ರದೇಶ, ಬಿಹಾರ ಸೇರಿದಂತೆ ಕೇವಲ ಉತ್ತರದ ರಾಜ್ಯಗಳಿಗೆ ಮಾತ್ರ ಸೇವೆ ಸಲ್ಲಿಸುವುದಿಲ್ಲ. ಅವರು ಕರ್ನಾಟಕದ ಹಳ್ಳಿ, ಪಟ್ಟಣಗಳ ರೈಲು ನಿಲ್ದಾಣಗಳಲ್ಲಿ ಪ್ರತಿದಿನ ಜನರೊಂದಿಗೆ ಸಂವಹನ ನಡೆಸುತ್ತಾರೆ. ಆದರೆ ಇಂಥಾ ಸ್ಥಳೀಯ ನೌಕರರಿಗೆ ಅವರದೇ ರಾಜ್ಯದ ಭಾಷೆಯಲ್ಲಿ ಪರೀಕ್ಷೆ ಬರೆಯುವ ಹಕ್ಕನ್ನೇ ಕಿತ್ತುಕೊಂಡರೆ ಇದ್ಯಾವ ನ್ಯಾಯ?

ಕೇಂದ್ರ ಸರ್ಕಾರದ ಸಂಸ್ಥೆಗಳು ಕನ್ನಡವನ್ನು ನಿರ್ಲಕ್ಷಿಸುತ್ತಾ ಬಂದಿರುವುದು ಇದು ಮೊದಲೇನಲ್ಲ. ಬ್ಯಾಂಕಿಂಗ್ ಪರೀಕ್ಷೆಗಳು, ಕೇಂದ್ರ ಸರ್ಕಾರದ ನೇಮಕಾತಿಗಳು, ಇನ್ನ್ಯಾವುದೇ ಸೈನಿಕ ಹುದ್ದೆಗಳಲ್ಲೂ ಸಹ ತಾರತಮ್ಯ ಇದ್ದದ್ದೆ. ಕನ್ನಡಿಗರ ತೆರಿಗೆ ಬೇಕು, ಕನ್ನಡಿಗರ ಸೇವೆ ಬೇಕು, ಆದರೆ ಕನ್ನಡಿಗನಿಗೆ ಗೌರವ ಮಾತ್ರ ಇಲ್ಲ. ಇದರಿಂದಲೇ ನಾನು ಕೇಳಿದ್ದು , ಪದೇ ಪದೇ ಅನ್ಯಾಯಕ್ಕೊಳಗಾಗುತ್ತಿರುವ ಕನ್ನಡಿಗರು ಇಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಇನ್ನೂ ಮುಂದುವರೆಯಬೇಕೇ? ಒಕ್ಕೂಟ ವ್ಯವಸ್ಥೆಯೆಂದರೆ ದಕ್ಷಿಣದವರ ಮತಗಳಿಂದ ಉತ್ತರದವರು ಅಧಿಕಾರಕ್ಕೇರುವುದಲ್ಲ. ಒಕ್ಕೂಟ ಮಾಡಿಕೊಂಡಿರುವುದೂ, ನಮ್ಮ ತೆರಿಗೆಯಿಂದ ಉತ್ತರದ ರಾಜ್ಯಗಳನ್ನು ಉದ್ಧರಿಸಿಕೊಳ್ಳುವುದಕ್ಕೂ ಅಲ್ಲ. ಅದೊಂದು ಪರಸ್ಪರ ಗೌರವದ ಒಪ್ಪಂದ. ಒಂದು ಭಾಷೆಯನ್ನು ವ್ಯವಸ್ಥಿತವಾಗಿ ಕಡೆಗಣಿಸುವುದು, ರೈಲ್ವೆ ಖಾತೆ ರಾಜ್ಯ ಸಚಿವರ ಆದೇಶವನ್ನೇ ಧಿಕ್ಕರಿಸುವುದು, ಒಂದು ರಾಜ್ಯದ ಪ್ರಜೆಗಳ ಹಕ್ಕುಗಳನ್ನೇ ಹತ್ತಿಕ್ಕುವುದು ಇದನ್ನೇ ಒಕ್ಕೂಟ ವ್ಯವಸ್ಥೆ ಎನ್ನುವುದಾದರೆ ಯಾಕೆ ಬೇಕು ಈ ವ್ಯವಸ್ಥೆ ನಮಗೆ ಅನ್ನಿಸುತ್ತೆ. ಧಿಕ್ಕಾರವಿರಲಿ ಇಂಥ ಭಾಷಾಂಧ ಸರ್ವಾಧಿಕಾರಿ ವ್ಯವಸ್ಥೆಗೆ. ■

ಧೈರ್ಯವು ಯಶಸ್ಸಿನ ಮೂಲಮಂತ್ರವಾಗಿದ್ದು , ಬದುಕಿನ ಸವಾಲುಗಳನ್ನು ಎದುರಿಸಲು ನಿರಂತರ ಪರಿಶ್ರಮ ಮತ್ತು ಆತ್ಮವಿಶ್ವಾಸ ಅತ್ಯಗತ್ಯ.

## ರಾಜಕೀಯ ವಿದ್ಯಮಾನ



ಆರ್.ಟಿ.ವಿಠ್ಠಲಮೂರ್ತಿ

# ಸಿದ್ದು-ಡಿಕೆ ಸಂಘರ್ಷ, ಮಿತ್ರಕೂಟಕ್ಕೆ ಹರ್ಷ

ಇತ್ತೀಚೆಗೆ ರಾಜ್ಯ ಕಾಂಗ್ರೆಸ್ ಪಾಳಯದಿಂದ ತೇಲಿ ಬರುತ್ತಿರುವ ಸುದ್ದಿ ಬಿಜೆಪಿ-ಜೆಡಿಎಸ್ ಮಿತ್ರಕೂಟದ ನಾಯಕರ ಹರ್ಷಕ್ಕೆ ಕಾರಣವಾಗಿದೆ.

ಇವತ್ತು ರಾಜ್ಯ ಕಾಂಗ್ರೆಸ್ ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳೇನಿವೆ?ಈ ಬೆಳವಣಿಗೆ ಮುಂದೆ ಸಿಎಂ ಸಿದ್ಧರಾಮಯ್ಯ ಅವರ ಪರವಾಗಿ ತಿರುಗಿಕೊಂಡರೂ ಅಥವಾ ಅವರ ವಿರುದ್ಧವಾಗಿ ತಿರುಗಿಕೊಂಡರೂ ಮಿತ್ರಕೂಟಕ್ಕೇ ಲಾಭ ಎಂಬುದು.

ಹೀಗೆ ಬಿಜೆಪಿ-ಜೆಡಿಎಸ್ ಮಿತ್ರಕೂಟದ ನಾಯಕರ ರ್ಷಕ್ಕೆ ಕಾರಣವಾದ ಬೆಳವಣಿಗೆಗಳನ್ನೇ ನೋಡಿ. ಇತ್ತೀಚೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಹೋಗಿದ್ದರಲ್ಲ? ಈ ಸಂದರ್ಭದಲ್ಲಿ , ಅವರು ಕಾಂಗ್ರೆಸ್ ನಾಯಕರಾದ ಶ್ರೀಮತಿ ಸೋನಿಯಾಗಾಂಧಿ, ಪ್ರಿಯಾಂಕಾ ಗಾಂಧಿ ಅವರನ್ನಲ್ಲದೆ ರಾಹುಲ್ ಗಾಂಧಿ ಅವರನ್ನು ಭೇಟಿಯಾದರು.

ಹಾಗೆ ನೋಡಿದರೆ ಇತ್ತೀಚಿನ ದಿನಗಳಲ್ಲಿ ರಾಹುಲ್ ಗಾಂಧಿ ಅವರು ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಲು ಉತ್ಸುಕತೆ ತೋರಿಸುತ್ತಿಲ್ಲ. ಕಾರಣ? ಈಗ ಡಿ.ಕೆ.ಶಿವಕುಮಾರ್ ತಮ್ಮನ್ನು ಭೇಟಿ ಮಾಡುವ ಸನ್ನಿವೇಶ ಬಂದರೆ ಅಧಿಕಾರ ಹಂಚಿಕೆಯ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ಮಾತನಾಡುವುದಿಲ್ಲ ಎಂಬುದು ರಾಹುಲ್ ಗಾಂಧಿಯವರಿಗೆ ಗೊತ್ತು.



ಕಳೆದ ವಿಧಾನಸಭಾ ಚುನಾವಣೆಯ ನಂತರ ಮುಖ್ಯಮಂತ್ರಿ ಹುದ್ದೆಯ ವಿಷಯ ಬಂದಾಗ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಸಿದ್ದರಾಮಯ್ಯ ಮತ್ತು ತಾವು ಅಲಿಖಿತ ಒಪ್ಪಂದವೊಂದಕ್ಕೆ ಬಂದಿದ್ದೆವು. ಅದರ ಪ್ರಕಾರ, ಮೊದಲ ಎರಡೂವರೆ ವರ್ಷ ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿಯಾಗಬೇಕು, ನಂತರದ ಎರಡೂವರೆ ವರ್ಷ ಕಾಲ ತಾವು ಮುಖ್ಯಮಂತ್ರಿಯಾಗಬೇಕು ಎಂಬ ಒಪ್ಪಂದವಾಗಿತ್ತು.

ಹೀಗೆ ಆದ ಒಪ್ಪಂದದ ಪ್ರಕಾರ, ಕಳೆದ ವರ್ಷದ ನವೆಂಬರ್ ಇಪ್ಪತ್ತರಂದು ಸಿದ್ದರಾಮಯ್ಯನವರು ತಮಗೆ ಅಧಿಕಾರ ಬಿಟ್ಟುಕೊಡಬೇಕಿತ್ತು. ಆದರೆ ಅವಧಿ ಪೂರ್ಣವಾಗಿ,ಮೂರು ತಿಂಗಳುಗಳಾಗುತ್ತಾ ಬಂದರೂ, ಅವರು ಅಧಿಕಾರ ಬಿಟ್ಟುಕೊಡುತ್ತಿಲ್ಲ. ಹೀಗಾಗಿ ನೀವು ಅವರಿಗೆ ಸೂಚನೆ ಕೊಡಬೇಕು ಎಂಬುದು ಡಿ.ಕೆ.ಶಿವಕುಮಾರ್ ಅವರ ಪಟ್ಟು.

ಆದರೆ ಇಂತಹ ಪಟ್ಟಿಗೆ ಈವರೆಗೆ ರಾಹುಲ್ ಗಾಂಧಿಯವರು ಸಿಗುತ್ತಿಲ್ಲ. ಕಾರಣ ?ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಉಭಯ ನಾಯಕರ ಮಧ್ಯೆ ಆದ ಒಪ್ಪದಕ್ಕೆ ತಾವು ಬಾಧ್ಯಸ್ಥರಲ್ಲ ಎಂಬುದು ರಾಹುಲ್ ಗಾಂಧಿ ಅವರ ವಾದ. ಅರ್ಥಾತ್ ಇಂತಹ ಒಪ್ಪಂದ ಮೊದಲನೆಯದಾಗಿ ತಮ್ಮ ಸಮ್ಮುಖದಲ್ಲಿ ನಡೆದಿಲ್ಲ.ಎರಡನೆಯದಾಗಿ, ಇಂತಹ ಒಪ್ಪಂದ ಮಾಡಿಕೊಳ್ಳುವ ಮುನ್ನ ತಮ್ಮ ಗಮನಕ್ಕೆ ತರುವ ಕೆಲಸವೂ ಆಗಿರಲಿಲ್ಲ. ಹೀಗಾಗಿ ಅದಕ್ಕೆ ತಾವು ಹೇಗೆ ಬಾಧ್ಯಸ್ಥರು? ಎಂಬುದು ರಾಹುಲ್ ಗಾಂಧಿ ಅವರ ಪ್ರತಿಪಟ್ಟು.

ಹೀಗೆ ಅವರು ಒಪ್ಪಂದಕ್ಕೆ ಬಾಧ್ಯಸ್ಥರಲ್ಲ ಎಂದು ಹೇಳುತ್ತಿರುವುದಕ್ಕೆ ಮತ್ತೊಂದು ಟ್ವಿಸ್ಟ್ ಇದೆ. ಅದೆಂದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಲು ರಾಹುಲ್ ಗಾಂಧಿ ಬಯಸುತ್ತಿಲ್ಲ. ಯಾಕೆಂದರೆ ಇವತ್ತು ಕರ್ನಾಟಕ ಅಹಿಂದ ವರ್ಗದ ನಾಯಕರಾಗಿ ಎದ್ದು ನಿಂತಿರುವ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ, ದೇವರಾಜ ಅರಸರ ಕಾಲದ ಇತಿಹಾಸ ಮರುಕಳಿಸುತ್ತದೆ.ವೀರೇಂದ್ರಪಾಟೀಲ್,ಬಂಗಾರಪ್ಪನವರ ಪದಚ್ಯುತಿಯ ಹಿನ್ನೆಲೆಯಲ್ಲಿ ೧೯೯೪ ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕಾದ ದುರ್ಗತಿ ಮರುಕಳಿಸುತ್ತದೆ ಎಂಬುದು ರಾಹುಲ್ ಗಾಂಧಿ ಅವರಿಗೆ ಗೊತ್ತು.

22ನೇ ಪುಟಕ್ಕೆ


> ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಉಭಯ ನಾಯಕರ ಮಧ್ಯೆ ಆದ ಒಪ್ಪದಕ್ಕೆ ತಾವು ಬಾಧ್ಯಸ್ಥರಲ್ಲ ಎಂಬುದು ರಾಹುಲ್ ಗಾಂಧಿ ಅವರ ವಾದ.ರ್ಥಾತ್,ಇಂತಹ ಒಪ್ಪಂದ ಮೊದಲನೆಯದಾಗಿ ತಮ್ಮ ಸಮ್ಮುಖದಲ್ಲಿ ನಡೆದಿಲ್ಲ. ಎರಡವೆಯದಾಗಿ, ಇಂತಹ ಒಪ್ಪಂದ ಮಾಡಿಕೊಳ್ಳುವ ಮುನ್ನ ತಮ್ಮ ಗಮನಕ್ಕೆ ತರುವ ಕೆಲಸವೂ ಆಗಿರಲಿಲ್ಲ. ಹೀಗಾಗಿ ಅದಕ್ಕೆ ತಾವು ಹೇಗೆ ಬಾಧ್ಯಸ್ಥರು?ಎಂಬುದು ರಾಹುಲ್ ಗಾಂಧಿ ಅವರ ಪ್ರತಿಪಟ್ಟು.

**ಕನಸಿಗೆ ಅಡಚಣೆ ಇಲ್ಲದ ನಿದ್ದೆ ಬೇಕು . ಗುರಿಗೆ ನಿದ್ದೆ ಮಾಡಲಾಗದಷ್ಟು ಶ್ರಮ ಬೇಕು.**
**ಆರಾಮಾಗಿ ಮಲಗಿ ಕನಸು ಕಂಡು , ಮೇಲೆದ್ದು ಗುರಿ ತಲುಪೋಣ !**



ವೇಣು ಗೋಪಾಲ್.ಎ
ಸರ್ಜಾಪುರ

ಲಕ್ಷ್ಮಣ ರೇಖೆ




ಲಕ್ಷ್ಮಣ ಕೊಡಸೆ

## ಪ್ರಶಸ್ತಿ ಪುರಸ್ಕಾರಗಳ

# ಸಾಂಸ್ಕೃತಿಕ ರಾಜಕೀಯ

`ವಸಂತವನದಲಿ ಹಾಡುವ ಕೋಗಿಲೆ ರಾಜನ ಬಿರುದನು ಬಯಸುವುದಿಲ್ಲ...' `ವಿಪ್ಲವಮೂರ್ತಿಯ ಸಖನಾಗಿಹನೈ; ಕವಿಗರಸುಗಿರಸುಗಳ ಋಣವಿಲ್ಲ! ಅವನಗ್ನಿಮುಖಿ! ಪ್ರಲಯಶಿಖಿ!'

- ೧೯೩೧ರ ಜನವರಿ ೯ ರಂದು ಅಂದಿನ ಯುವಕವಿ ಕುವೆಂಪು ಬರೆದಿದ್ದ `ಕವಿ' ಶೀರ್ಷಿಕೆಯ ಈ ಕವನ ಸ್ವಾತಂತ್ರ್ಯಾನAತರವೂ ತನ್ನ ಪ್ರಭಾವ ಉಳಿಸಿಕೊಂಡಿರುವ ಉಜ್ವಲ ಕವನ. ಮೈಸೂರಿನಲ್ಲಿ ರಾಜರ ಆಡಳಿತ ಇದ್ದಾಗ ಬರೆದಿದ್ದ ಕವನದಲ್ಲಿ ವ್ಯಕ್ತವಾಗಿದ್ದ ಕವಿಯ ಆತ್ಮಪ್ರತ್ಯಯಕ್ಕೆ ಸ್ವತಂತ್ರ ಭಾರತ ಒಕ್ಕೂಟಕ್ಕೆ ಸೇರಿ ಸಂಸದೀಯ ಪ್ರಜಾಸತ್ತೆಯನ್ನು ಅಳವಡಿಸಿಕೊಂಡ ಕರ್ನಾಟಕ ಸರ್ಕಾರವೂ `ಗೌರವಪೂರ್ವಕ ಮನ್ನಣೆ' ಇರಿಸಿಕೊಂಡಿತ್ತು. ಆದ್ದರಿಂದಲೇ ರಾಜ್ಯದ ಏಕೀಕರಣದ ನೆನಪಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಾಗಿ ೧೯೬೬ರಲ್ಲಿ ಸರ್ಕಾರ ಆರಂಭಿಸಿದ್ದ ರಾಜ್ಯಪ್ರಶಸ್ತಿಯನ್ನು (ಇದು ರಾಜ್ಯೋತ್ಸವ ಪ್ರಶಸ್ತಿ ಎಂದೇ ಈಗ ಬಳಕೆಯಲ್ಲಿದೆ) ಕುವೆಂಪು ಅವರಿಗೆ ನೀಡಲಿಲ್ಲ. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು ಕುವೆಂಪು ಅವರ ಬಗ್ಗೆ ಇದ್ದ ತಮ್ಮ ಗೌರವ ವ್ಯಕ್ತಪಡಿಸಲು ಸರ್ಕಾರದ ಪರವಾಗಿ ರಾಷ್ಟ್ರ ಮನ್ನಣೆ ನೀಡಿದ್ದರು. ತೊಂಬತ್ತರ ದಶಕದಲ್ಲಿ ಎರಡು ವರ್ಷ ಮುಖ್ಯಮಂತ್ರಿಯಾಗಿದ್ದ ಎಸ್. ಬಂಗಾರಪ್ಪ ಅವರು ಕುವೆಂಪು ಮತ್ತು ರಾಜ್ ಕುಮಾರ್ ಅವರಿಗಾಗಿಯೇ `ಕರ್ನಾಟಕ ರತ್ನ' ಪ್ರಶಸ್ತಿಯನ್ನು ಆರಂಭಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯ ಕ್ಷೇತ್ರದ ಸಾಧನೆಗೆ ನೀಡುವ ಗೌರವ ಪ್ರಶಸ್ತಿಯನ್ನು ೧೯೬೬ರಲ್ಲಿಯೇ ಆರಂಭಿಸಿದ್ದರೂ ಕುವೆಂಪು ಅವರನ್ನು ೧೯೭೮ರವರೆಗೂ ಪರಿಗಣಿಸಿರಲಿಲ್ಲ



ಸಾಹಿತ್ಯಕರಾಗಿ ಸ್ವತಂತ್ರ ನಿಲುವನ್ನು ತಾಳಿದ್ದ ಡಿವಿಜಿ ಅವರಿಗೂ ರಾಜ್ಯೋತ್ಸವ ಪ್ರಶಸ್ತಿಯನ್ನು ಅಂದಿನ ರಾಜ್ಯ ಸರ್ಕಾರ ನೀಡಲಿಲ್ಲ. ಆದರೆ, ಅವರ `ಜೀವನಧರ್ಮ ಯೋಗ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದ ನೆಪದಲ್ಲಿ ೧೯೭೩ರಲ್ಲಿ ರಾಜ್ಯ ಸರ್ಕಾರ ಒಂದು ಲಕ್ಷ ರೂಪಾಯಿ ನಗದು ನೀಡಿ ಸನ್ಮಾನಿಸಿತು. ಸರ್ಕಾರ ನೀಡಿದ ಹಣವನ್ನು ಡಿವಿಜಿ ಅದೇ ಸಮಾರಂಭದಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆಗೆ ನೀಡಿದ್ದರು. ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನು ಮೊದಲು ಪಡೆದವರು ಜಿ.ಪಿ. ರಾಜರತ್ನಂ (೧೯೭೦). ಅವರ ನಂತರ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಕೆ.ಎಸ್. ನರಸಿಂಹಸ್ವಾಮಿ (೧೯೭೨). ಕನ್ನಡಕ್ಕೆ ಎರಡನೇ ಜ್ಞಾನಪೀಠ ತಂದುಕೊಟ್ಟ ದ.ರಾ.ಬೇಂದ್ರೆ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯೇ ಬರಲಿಲ್ಲ. ಶಿವರಾಮ ಕಾರಂತರ ಸರದಿ ೧೯೮೬ಕ್ಕೆ ಬಂದಿತು. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಜೈಲು ಸೇರಿದ್ದಲ್ಲದೆ, ಕರ್ನಾಟಕ ಏಕೀಕರಣದ ಹೋರಾಟವನ್ನು ಉಗ್ರವಾಗಿ ಆರಂಭಿಸಿದ್ದ ಮತ್ತು ೯೦ಕ್ಕೂ ಹೆಚ್ಚಿನ ಕೃತಿಗಳನ್ನು ಬರೆದ ಕೋ. ಚೆನ್ನಬಸಪ್ಪ ಅವರು ೨೦೧೩ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾದರು. ಆಗ ಅವರಿಗೆ ೯೧ ವರ್ಷ.

ಪ್ರಶಸ್ತಿಗೂ ಅರ್ಹತೆಗೂ ಸಂಬಂಧ ಕಲ್ಪಿಸುವುದಕ್ಕಿಂತ ಸದ್ಯ ಪ್ರಶಸ್ತಿ ಬಂತಲ್ಲ ಎಂದು ಸಮಾಧಾನಪಟ್ಟು ಸಂಭ್ರಮಪಡುವವರ ಪ್ರಮಾಣ ವರ್ಷಗಳು ಕಳೆದಂತೆ ಜಾಸ್ತಿ ಆಗುತ್ತಿರುವುದು ನಾಡಿನಲ್ಲಿ ಕಾಣುತ್ತಿರುವ ವಿದ್ಯಮಾನ. ನಿರ್ದಿಷ್ಟ ಕ್ಷೇತ್ರಗಳಲ್ಲಿ ಮಾಡಿದ ಸಾಧಕರಿಗೆ ಆಯಾ ಕ್ಷೇತ್ರದ ಸಂಸ್ಥೆಗಳು ವಾರ್ಷಿಕ ಪ್ರಶಸ್ತಿ ನೀಡುವುದು, ಅವುಗಳು ವಿಶ್ವಮಾನ್ಯ ಎಂಬಂತೆ ಪಡೆಯುವುದಕ್ಕೆ ತೀವ್ರ ಕಸರತ್ತು ನಡೆಸುತ್ತಿರುವ ಪ್ರಯತ್ನಗಳು ಕೂಡ ಕಂಡುಬರುತ್ತಿವೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರ ಇದ್ದಾಗ (೨೦೧೯-೨೩) ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿಗಳನ್ನು ಹಾಕಿಕೊಳ್ಳುವಂತೆ

26ನೇ ಪುಟಕ್ಕೆ

ನಾಡಿನಲ್ಲಿ ಪ್ರಶಸ್ತಿಯ ಗೀಳು ಎಷ್ಟರಮಟ್ಟಿಗೆ ಬಂದಿದೆ ಎಂದರೆ ಹಣ ಇರುವ ಯಾರು ಬೇಕಾದರೂ ಪ್ರಶಸ್ತಿಯನ್ನು ಸ್ಥಾಪಿಸಿ ತಮ್ಮ ಹೆಸರಿನ ಪ್ರಶಸ್ತಿಯ ಮೂಲಕ ಸಾಧಕರಾಗಿ ದಾಖಲಾಗಬಹುದು. ಪ್ರಭಾವಿಗಳಿಗೆ ಪ್ರಶಸ್ತಿಯನ್ನು ನೀಡಿ ಅವರ ಮೂಲಕ ತಾವೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣ್ಯರಾಗಿ ಮೆರೆಯಬಹುದು. ಒಂದೆರಡು ಕೃತಿಗಳನ್ನು ಪ್ರಕಟಿಸಿದ ಹಿನ್ನೆಲೆ ಇರುವ, ಆದರೆ ಸಾಕಷ್ಟು ಹಣದ ಅನುಕೂಲ ಇರುವವರು ತಮ್ಮ ಹೆಸರಿನಲ್ಲಿ ಪ್ರತಿಷ್ಠಾನ ರಚಿಸಿಕೊಂಡು ನಿರ್ದಿಷ್ಟ ಪ್ರಕಾರಗಳ ಒಂದು ಕೃತಿಗೆ ಇಪ್ಪತ್ತೈದು ಸಾವಿರ ರೂಪಾಯಿ ನಗದು ಪುರಸ್ಕಾರ ನೀಡಿ ತಮ್ಮದು ಪ್ರತಿಷ್ಠಿತ ಪ್ರಶಸ್ತಿಯಾಗುವಂತೆ ಮಾಡಿಕೊಳ್ಳುವ ತಂತ್ರಗಾರಿಕೆಯನ್ನೂ ಈಗ ನೋಡಬಹುದಾಗಿದೆ.



ನಮ್ಮ ಪ್ರಯಾಣದ ದಿಕ್ಕು ಒಂದೇ ಆದರೂ, ತಲುಪಲಿರುವ ಊರು ಬೇರೆ ಬೇರೆ ಇರಬಹುದು . ಸಿಕ್ಕಷ್ಟು ಸಮಯದಲ್ಲಿಯೇ ಸಹ ಪ್ರಯಾಣಿಕರೊಡನೆ ನಗು ನಗುತ್ತ ಸಾಗೋಣ !

ಆರಾಧ್ಯ
ದೊಡ್ಡಬಳ್ಳಾಪುರ



# ಕೆನಡಾ ಕನ್ನಡಿಗನ ಹತ್ಯೆ ಹಿಂದೆ ವ್ಯಾಪಾರಿಗಳ ಕೈವಾಡ

● ಸಿದ್ದರಾಜು

ಕೆನಡಾದ ವಾಣಿಜ್ಯ ರಾಜಧಾನಿ ಟೊರೊಂಟೊದಲ್ಲಿ ಕನ್ನಡಿಗ ಚಂದನ್‌ಕುಮಾರ್ ಹತ್ಯೆ ಹಿಂದೆ ವ್ಯಾಪಾರಿ ಮಾಫಿಯಾದ ಕೈವಾಡ ಇದೆಯಾ ಅನ್ನೋ ಶಂಕೆ ಮೂಡುತ್ತಿದೆ. ಹಾಗೇ, ಈ ವ್ಯಾಪಾರಿ ಮಾಫಿಯಾ ಸ್ಥಳೀಯ ಖಲಿಸ್ತಾನಿ ಉಗ್ರರ ಮೂಲಕ ಹತ್ಯೆ ಮಾಡಿಸಿದೆಯಾ ಎಂಬ ಅನುಮಾನವೂ ಮೂಡುತ್ತಿದೆ. ಆದರೆ, ಇದಕ್ಕೆಲ್ಲಾ ನಿಖರ ತನಿಖೆ ಮೂಲಕ ಸತ್ಯ ಬೆಳಕಿಗೆ ತರಬೇಕಾದ ಕೆನಡಾ ಪೋಲೀಸ್ ಇಲಾಖೆ ಎಂದಿನ ನಿರ್ಲಜ್ಜ ನಿರ್ಲಕ್ಷ್ಯ ವಹಿಸಿದೆ. ಭಾರತೀಯರ ಸಾವಿಗೆ ಸಣ್ಣ ಅನುಕಂಪ ಸಹ ತೋರಿಸದ, ಕೊಲೆಗಡುಕರ ಜಾಡು ಹಿಡಿಯುವ ಕನಿಷ್ಟ ಕಾಳಜಿ ತೋರಿಸದ ಕೆನಡಾ ಪೋಲೀಸರ ಬಗ್ಗೆ ಜಾಗತಿಕ ಮಟ್ಟದಲ್ಲಿ ಛೀಮಾರಿ ಹಾಕಿಸುವ ಅಪೂರ್ವ ಅವಕಾಶ ಬಹಳಷ್ಟಿದ್ದರೂ, ಮೋದಿ ನೇತೃತ್ವದ ಭಾರತ ಸರ್ಕಾರ ತೆಪ್ಪಗೆ ಕೂತಿದೆ. ೨೦೨೩ರ ಜೂನ್.೧೮ ರಂದು ಕೆನಡಾದಲ್ಲಿ ಸಿಖ್ ಭಯೋತ್ಪಾದಕ ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆ ಹಿಂದೆ ಭಾರತದ ಗುಪ್ತಚರ ಇಲಾಖೆ ಕೈವಾಡ ಇದೆ ಅಂತ ಅಂದಿನ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೋ ಗಟ್ಟಿಯಾಗಿ ಆರೋಪಿಸಿದ್ದಷ್ಟು ಎದೆಗಾರಿಕೆಯನ್ನು ತೋರಿಸದೆ ನಿಷ್ಕ್ರಿಯವಾಗಿದೆ.

ಕಳೆದ ಫೆಬ್ರವರಿ.೭ ರಂದು ಶನಿವಾರ ಮಧ್ಯಾಹ್ನ ೩.೩೦ ರ ಸುಮಾರಿಗೆ (ಸ್ಥಳೀಯ ಸಮಯ) ಕೆನಡಾದ ವಾಣಿಜ್ಯ ರಾಜಧಾನಿ ಟೊರೊಂಟೊದ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಜನನಿಬಿಡ ರಸ್ತೆಯಾದ ರೆಕ್ಸ್ಡೇಲ್ ಬೌಲೆವಾರ್ಡ್ ಬಳಿಯ ವುಡ್‌ಬೈನ್ ಶಾಪಿಂಗ್ ಸೆಂಟರ್ ಪ್ರವೇಶದ್ವಾರದ ಬಳಿ ಕನ್ನಡಿಗ ೩೭ವರ್ಷದ ಯುವಕ ಚಂದನ್ ಕುಮಾರ್ ತಮ್ಮ ಎಸ್‌ಯುವಿ ಕಾರ್‌ನಲ್ಲಿ ಕುಳಿತು ಚಾಲನೆ ಮಾಡಿಕೊಂಡು ಹೋಗುವಾಗ ಅಪರಿಚಿತ ದುಷ್ಕರ್ಮಿಗಳು ಗುಂಡು ಹಾರಿಸಿ ಕೊಂದಿದ್ದಾರೆ. ಇದು ೨೦೨೬ ರ ಈ ವರ್ಷದ ಒಂದೇ ತಿಂಗಳಲ್ಲಿ ಟೊರೊಂಟೊ ನಗರದಲ್ಲಿ ನಡೆದ ಮೂರನೇ ನರಹತ್ಯೆಯಾಗಿದೆ.

ಬೆಂಗಳೂರಿನಿಂದ ಸುಮಾರು ೪೭ ಕಿ.ಮೀ ದೂರದಲ್ಲಿರುವ ನೆಲಮಂಗಲ ತಾಲೂಕು ತ್ಯಾಮಗೊಂಡ್ಲು ಗ್ರಾಮದ ರಾಜಾ ನಂದಕುಮಾರ್‌ಎಂಬುವರ ಪುತ್ರನಾದ ಚಂದನ್ ಕುಮಾರ್ ಸಾಫ್ಟ್ವೇರ್ ಇಂಜಿನಿಯರ್ ಆಗಿ ಕೆನಡಾದ ಗ್ರೇಟರ್ ಟೊರೊಂಟೊ ಪ್ರದೇಶದ ಬ್ರಾಂಪ್ಟನ್ ಬಡಾವಣೆಯಲ್ಲಿ ವಾಸಿಸುತ್ತಿದ್ದರು. ಕೆನಡಾದಲ್ಲಿರುವ ಸಾವಿರಾರು ಕನ್ನಡಿಗರನ್ನು ಒಗ್ಗೂಡಿಸಿಕೊಂಡು ಕನ್ನಡ ಕಾರ್ಯಕ್ರಮಗಳನ್ನು ನಡೆಸುತ್ತಾ ಜನಪ್ರಿಯರಾಗಿದ್ದರು. ಜೊತೆಗೆ, ವಾಣಿಜ್ಯಾತ್ಮಕವಾಗಿಯೂ ಬೆಳೆಯುತ್ತಿದ್ದ ಚಂದನ್ ಬಗ್ಗೆ ಆಗದ ವ್ಯಾಪಾರಿ ವೈರಿಗಳು ಹತ್ಯೆಯ ಹಿಂದಿರಬಹುದು ಅನ್ನಿಸುತ್ತೆ. ಏಕೆಂದರೆ, ಚಂದನ್ ಕುಮಾರ್ ೨೦೨೩ರಲ್ಲೇ ಭಾರತದಿಂದ ಬಾಸ್ಮತಿ ಅಕ್ಕಿ ಮತ್ತಿತರ ಧಾನ್ಯಗಳನ್ನು ಕೆನಡಾ ಮಾರುಕಟ್ಟೆಗಳಿಗೆ ವಿತರಣೆ ಮಾಡುತ್ತಿದ್ದರು. ಇದರಲ್ಲಿ ಸಾಕಷ್ಟು ಲಾಭ ಮಾಡಿಕೊಂಡಿದ್ದ ಚಂದನ್‌ಕುಮಾರ್ ಮತ್ತಷ್ಟು ತಮ್ಮ ಮಾರುಕಟ್ಟೆ ವಿಸ್ತರಿಸಲು ಕಳೆದ ಫೆಬ್ರವರಿ.೭ ರಂದು ಶನಿವಾರ ಮಧ್ಯಾಹ್ನ ೩.೩೦ ರ ಸುಮಾರಿಗೆ (ಸ್ಥಳೀಯ ಸಮಯ) ಕೆನಡಾದ ವಾಣಿಜ್ಯ ರಾಜಧಾನಿ ಟೊರೊಂಟೊದ ವಿಮಾನ ನಿಲ್ದಾಣಕ್ಕೆ ಹೋಗುವ ರಸ್ತೆಯಾದ ರೆಕ್ಸ್ಡೇಲ್ ಬೌಲೆವಾರ್ಡ್ ಬಳಿ ಇರುವ ವುಡ್‌ಬೈನ್ ಶಾಪಿಂಗ್ ಸೆಂಟರ್‌ಗೆ ಹೋಗುತ್ತಿದ್ದರು. ಚಂದನ್ ಕುಮಾರ್ ವುಡ್‌ಬೈನ್ ಶಾಪಿಂಗ್ ಸೆಂಟರ್‌ಗೆ ಬರುವುದನ್ನು ಮೊದಲೇ ಖಚಿತಪಡಿಸಿಕೊಂಡು ಪ್ರವೇಶದ್ವಾರದಲ್ಲೇ ಕಾಯುತ್ತಿದ್ದ ಹಂತಕರು ಗುಂಡಿನ ಸುರಿಮಳೆಗರೆದು ಕೊಂದಿದ್ದಾರೆ.

**ಬಾಸ್ಮತಿ ಅಕ್ಕಿ ಕಾಳಸಂತೆಕೋರರ ಸಂಚು:**

ಜಾಗತಿಕ ಬಾಸ್ಮತಿ ಅಕ್ಕಿ ರಫ್ತಿನಲ್ಲಿ ಶೇ. ೪೦ ರಷ್ಟು ಪಾಲನ್ನು ಹೊಂದಿರುವ ವಿಶ್ವದ ಅತಿದೊಡ್ಡ ಅಕ್ಕಿ ರಫ್ತುದಾರ ದೇಶ

**ಕಷ್ಟ ಬಂದಾಗಲೆಲ್ಲ ನಮ್ಮನ್ನು ನೆನಪಿಸಿಕೊಳ್ಳುವವರ ಕುರಿತು ಅಸಡ್ಡೆ ಬೇಡ . ಅವರ ಕಷ್ಟದ ಕತ್ತಲೆಗೆ ನಾವು ನೀಡುವ ಒಂದು ಚೂರು ಬೆಳಕು ನೀಡುವ ಪುಣ್ಯ ಅಂದುಕೊಳ್ಳೋಣ !**

ಭಾರತವಾಗಿದೆ. ೨೦೨೩ರ ಜುಲೈ ೨೦ ರಂದು, ಭಾರತ ಸರ್ಕಾರ "ಅರೆ-ಮಿಲ್ಡ್ ಅಥವಾ ಸಂಪೂರ್ಣವಾಗಿ ಮಿಲ್ಡ್ ಅಕ್ಕಿ, ಪಾಲಿಶ್ ಮಾಡಿದ ಅಥವಾ ಗ್ಲೇಜ್ ಮಾಡದಿರುವ ಬಾಸ್ಮತಿಯಂಥ ನಿರ್ದಿಷ್ಟ ವರ್ಗದ ಅಕ್ಕಿಯ ರಫ್ತಿನ ಮೇಲೆ ನಿಷೇಧವನ್ನು ಘೋಷಿಸಿತು. ಜೊತೆಗೆ ಭಾರತ ಸರ್ಕಾರ ಬಾಸ್ಮತಿಯೇತರ ಜನಪ್ರಿಯ ಅಕ್ಕಿ ಪ್ರಭೇದಗಳಾದ ಸೋನಾ ಮಸೂರಿ, ಸುರ್ತಿ, ಕೊಲ್ಲಂ, ಪೊನ್ನಿ, ಪರ್ಮಲ್ ಮತ್ತು ಸೀರಾಗ ಸಾಂಬಾ ಅಕ್ಕಿ ರಫ್ತಿನ ಮೇಲೆ ಶೇಕಡಾ ೨೦ ರಷ್ಟು ಸುಂಕವನ್ನು ವಿಧಿಸಿತು. ಇದರಿಂದ ಕೆನಡಾದಲ್ಲಿ ವಾಸಿಸುವ ಬಹುತೇಕ ದಕ್ಷಿಣ ಏಷ್ಯಾದ ಜನರಿಗೆ ಬಹಳ ತೊಂದರೆಯಾಯಿತು. ಬಾಸ್ಮತಿಯಲ್ಲದೆ, ಸಾಮಾನ್ಯ ದರ್ಜೆಯ ಅಕ್ಕಿಗಳ ಬೆಲೆ ಕೆನಡಾ ಮಾರುಕಟ್ಟೆಯಲ್ಲಿ ಬಹಳ ದುಬಾರಿಯಾಯಿತು.

ಯಾವ ಮಟ್ಟಿಗೆ ಕೆನಡಾದಲ್ಲಿ ಅಕ್ಕಿ ಬೆಲೆ ಗಗನಕ್ಕೆ ಏರಿತೆಂದರೆ; ೧೦ ಪೌಂಡ್ (ನಾಲ್ಕುವರೆ ಕೆಜಿ) ತೂಕದ ಸೋನಾ ಮಸೂರಿಯ ಚೀಲದ ಬೆಲೆ ಸುಮಾರು ೧೫ ಡಾಲರ್ ಇದ್ದದ್ದು , ೨೦ ರಿಂದ ೩೫ ಡಾಲರ್‌ವರೆಗೆ ಏರಿತು. ಗಾಬರಿ ಬಿದ್ದ ಅಕ್ಕಿ ಪ್ರಿಯ ದಕ್ಷಿಣ ಏಷ್ಯಾ ಸಮುದಾಯದ ಜನ, ಅಕ್ಕಿ ಮೇಲಿನ ರಫ್ತು ನಿಷೇಧದಿಂದ ಅಕ್ಕಿ ಬೆಲೆ ಮತ್ತಷ್ಟು ಏರಬಹುದೆಂದು ಹೆಚ್ಚಾಗಿ ಖರೀದಿಸಿ ಮನೆಯಲ್ಲಿ ದಾಸ್ತಾನು ಮಾಡಿಕೊಳ್ಳುತ್ತಿದ್ದರು. ಇದರಿಂದ ಕೆನಡಾದ್ಯಂತ ಅಕ್ಕಿ ಬೆಲೆ ಮತ್ತಷ್ಟು ಏರಿಕೆಯಾಗಿ ಒಂದು ಕೆಜಿ ಅಕ್ಕಿ ಬೆಲೆ ಒಂದು ಸಾವಿರ ರೂಪಾಯಿವರೆಗೂ ಏರಿತು. ಇಂಥ ಸಂದರ್ಭದಲ್ಲಿ ಚಂದನ್ ಕುಮಾರ್ "ಕೆನಡಾದಾದ್ಯಂತ ಅಕ್ಕಿ ಲಭ್ಯತೆ" ಎಂಬ ವಾಟ್ಸಾಪ್ ಗುಂಪನ್ನು ಪ್ರಾರಂಭಿಸಿದರು. ಈ ವಾಟ್ಸಾಪ್ ಗುಂಪಿನ ಧ್ಯೇಯ ಏನೆಂದರೆ, ಕೆನಡಾ ದೇಶಾದ್ಯಂತ ದಿನಸಿ ಅಂಗಡಿಗಳಲ್ಲಿರುವ ಅಕ್ಕಿ ದಾಸ್ತಾನು ವಿವರ ಮತ್ತು ನೈಜ ದರ ಹಾಗೂ ದೊರಕುವ ಸಮಯವನ್ನು ಹಂಚಿಕೊಳ್ಳುವುದಾಗಿತ್ತು. ಇದು ಕೆನಡಾದ ಪ್ರಮುಖ ನಗರಗಳಾದ ಟೊರಾಂಟೋ, ಮಾಂಟ್ರಿಯಲ್, ರಾಜಧಾನಿ ಒಟ್ಟಾವಗಳಲ್ಲಿರುವ ೬೦೦ ಕ್ಕೂ ಹೆಚ್ಚು ದಕ್ಷಿಣ ಏಷ್ಯನ್ನರ ಸದಸ್ಯತ್ವವನ್ನು ಹೊಂದಿರುವ ಗುಂಪಾಗಿತ್ತು.

ಕೆನಡಾದ ಒಂಟಾರಿಯೋ ರಾಜ್ಯದ ರಾಜಧಾನಿ ಟೊರೊಂಟೋದ ಹೊರ ವಲಯದ ಗ್ರೇಟರ್ ಟೊರೊಂಟೋ ಪ್ರಾಧಿಕಾರದಡಿ ಅಭಿವೃದ್ಧಿಯಾಗುತ್ತಿದ್ದ (ನಮ್ಮ ಬೆಂಗಳೂರು ಉಪನಗರ ಕೆಂಗೇರಿಯಂತೆ) ಬ್ರಾಮ್ಟನ್ ನಗರದಲ್ಲಿ ವಾಸಿಸುತ್ತಿದ್ದ ಚಂದನ್ ಕುಮಾರ್ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುವುದರ ಜೊತೆಗೆ ಭಾರತೀಯ ಸಮುದಾಯದ ಸಾಮಾಜಿಕ ಸೇವೆಗಳಿಗೂ ನೆರವಾಗುತ್ತಿದ್ದರು. "ಕೆನಡಾದಾದ್ಯಂತ ಅಕ್ಕಿ ಲಭ್ಯತೆ" ಎಂಬ ವಾಟ್ಸಾಪ್ ಗುಂಪನ್ನು ರಚಿಸಿದ ತಮ್ಮ ಉದ್ದೇಶ " ಭಾರತೀಯ ಸಮುದಾಯಕ್ಕೆ ಅಕ್ಕಿಯನ್ನು ನ್ಯಾಯಬೆಲೆಯಲ್ಲಿ ದೊರಕಿಕೊಡಲು" ಅಂತ ಹೇಳಿಕೊಂಡಿದ್ದರು. "ಕೆನಡಾದಾದ್ಯಂತ ಅಕ್ಕಿ ಲಭ್ಯತೆ" ಎಂಬ ವಾಟ್ಸಾಪ್ ಗುಂಪಿನಿಂದಾಗಿ ಕೆನಡಾದಾದ್ಯಂತ ಇರುವ ಯಾವ ದಿನಸಿ ಅಂಗಡಿಗಳಲ್ಲಿ ದಕ್ಷಿಣ ಏಷ್ಯನ್ನರು ಬಯಸುವ ಅಕ್ಕಿ ದೊರೆಯುತ್ತದೆ ಎಂಬುದನ್ನು ತಿಳಿಸಲು ಸ್ವತಃ ಚಂದನ್‌ಕುಮಾರ್ ನಿತ್ಯ ಹಲವು ದಿನಸಿ ಅಂಗಡಿಗಳಿಗೆ ಭೇಟಿ ಕೊಡುತ್ತಿದ್ದರು. ಅಲ್ಲಿ ಲಭ್ಯವಿರುವ ಅಕ್ಕಿ ಮತ್ತು ಅದರ ಬೆಲೆಯನ್ನು ಷಾಪಿಂಗ್ ಮಾಲ್‌ನಲ್ಲೇ ಮೊಬೈಲ್‌ನಲ್ಲಿ ಕ್ಲಿಕ್ಕಿಸಿ "ಕೆನಡಾದಾದ್ಯಂತ ಅಕ್ಕಿ ಲಭ್ಯತೆ" ಎಂಬ ವಾಟ್ಸಾಪ್ ಗುಂಪಿಗೆ ಕಳುಹಿಸುತ್ತಿದ್ದರು. ಇದೇ ರೀತಿ ವಾಟ್ಸಾಪ್‌ನಲ್ಲಿರುವ ೬೦೦ ಕ್ಕೂ ಹೆಚ್ಚು ಸದಸ್ಯರು ಸಹ ತಮಗೆ ತಿಳಿದ ಮಾಹಿತಿಯನ್ನು ಗ್ರೂಪ್‌ನಲ್ಲಿ ಹಾಕಿ ನೆರವಾಗುತ್ತಿದ್ದರು. ಕೆನಡಾದ ಯಾವ ನಗರದಲ್ಲಿ? ಯಾವ ಮಾಲ್‌ನಲ್ಲಿ ಅಕ್ಕಿ ದೊರೆಯುತ್ತೆ, ಅದರ ಬೆಲೆ ಎಷ್ಟು ಮತ್ತು ಯಾವಾಗ ಲಭ್ಯವಿದೆ ಎಂಬುದರ ವಿವರಗಳನ್ನು ಪ್ರಕಟಿಸುತ್ತಿದ್ದರು. ಇದರಿಂದ ದುರಾಸೆ ವ್ಯಾಪಾರಿಗಳು ದುಬಾರಿ ಬೆಲೆಗೆ ಅಕ್ಕಿ ಮಾರಲು ಸಾಧ್ಯವಾಗುತ್ತಿರಲಿಲ್ಲ.

ಕೆನಡಾದ ಒಂಟಾರಿಯೋ ಪ್ರಾಂತ್ಯದ ಮಿಸ್ಸಿಸ್ಸೋಗಾ ನಿವಾಸಿ ಮಾನಸ ಗುಪ್ತಾ ಹೇಳುವ ಪ್ರಕಾರ; ವಾಟ್ಸಾಪ್ ಗುಂಪಿನ ಜಾಗೃತಿ ಅಭಿಯಾನದಿಂದ ಕೆಲವೇ ವಾರಗಳಲ್ಲಿ ಕೆನಡಾದ ವಿವಿಧ ಅಂಗಡಿಗಳಲ್ಲಿ ಅಕ್ಕಿ ಬೆಲೆ ಕೆಜಿಗೇ ಒಂದು ಸಾವಿರ ರೂಪಾಯಿಯಿಂದ ಮುನ್ನೂರು ರೂಪಾಯಿಗೆ ಇಳಿಯಿತು. ಹೀಗೇ ೨೦೨೩ರಲ್ಲೇ ಅಕ್ಕಿ ವ್ಯಾಪಾರದ ಕಾಳಸಂತೆಕೋರರನ್ನು ನಿಯಂತ್ರಿಸಿದ್ದ ಚಂದನ್ ಕುಮಾರ್ ಒಂಟಾರಿಯೋದ ಭಾರತೀಯ ಸಮುದಾಯದಲ್ಲಿ ಭಾರಿ ಜನಪ್ರಿಯರಾಗಿದ್ದರು. ಅದರಲ್ಲೂ ಕೆನಡಾ ಕನ್ನಡ ಸಂಘದೊಂದಿಗೂ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಚಂದನ್ ಕುಮಾರ್ ವ್ಯಾವಹಾರಿಕವಾಗಿಯೂ ಬೆಳೆದಿದ್ದರು. ಕೆನಡಾದ ಒಂಟಾರಿಯೋ ಪ್ರಾಂತ್ಯದ ರಾಜಧಾನಿ ಟೊರೊಂಟೋದ ಗ್ರೇಟರ್



ಟೊರೊಂಟೋ ವ್ಯಾಪ್ತಿಗೆ ಸೇರಿದ ಬ್ರಾಮ್ಟನ್ ಉಪನಗರದಲ್ಲಿ ಸ್ವಂತ ಮನೆ ಕೊಳ್ಳುವಲ್ಲಿಯೂ ಚಂದನ್ ಕುಮಾರ ಯಶಸ್ವಿಯಾಗಿದ್ದರು.

ಬೆಂಗಳೂರಿನ ಸಪ್ತಗಿರಿ ಕಾಲೇಜಿನಿಂದ ಕಂಪ್ಯೂಟರ್ ಸೈನ್ಸ್ ಪದವೀಧರರಾಗಿದ್ದ ಚಂದನ್ ಸುಮಾರು ಆರು ವರ್ಷಗಳ ಹಿಂದೆ ಕೆನಡಾಕ್ಕೆ ತೆರಳಿದ್ದರು. ಅಲ್ಲಿ ಎಲ್ & ಟಿ ಅಂಗಸಂಸ್ಥೆಯಾದ

27ನೇ ಪುಟಕ್ಕೆ

ಯಾರಿಂದಲೂ ಏನನ್ನೂ ನಿರೀಕ್ಷಿಸದೇ ಇದ್ದಾಗ ನಿರಾಸೆಯಾಗುವುದಿಲ್ಲ .
ಸ್ವಪ್ರಯತ್ನದಿಂದ ದೊರೆತಿದ್ದಕ್ಕೆ ಬೆಲೆಯೂ ಹೆಚ್ಚು . ಸಂತೋಷವೂ ಹೌದು !



# ಸಾಕೇತ್ ಸಾವಿಗೆ ನ್ಯಾಯ ಸಿಗಲಿ

● ಬಾಬು

ಬೆಂಗಳೂರಿನ ಸುಂಕದಕಟ್ಟೆ ನಿವಾಸಿ ಪ್ರತಿಭಾವಂತ ವಿದ್ಯಾರ್ಥಿ ಸಾಕೇತ್ ಸಾವು ನಿಜಕ್ಕೂ ಬಹಳ ನೋವಿನ ಸಂಗತಿ. ದೂರದ ಅಮೆರಿಕಾದಲ್ಲಿ ಉನ್ನತ ವ್ಯಾಸಂಗ ಮಾಡಲು ಹೋದ ಸಾಕೇತ್ ಒಂಟಿಗುಳಿತನದಿಂದ ಖಿನ್ನತೆಗೊಳಗಾಗಿ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡನೆಂದು ಕತೆ ಕಟ್ಟಲಾಗುತ್ತಿದೆ. ಇಂಥ ಸುಳ್ಳನ್ನು ಸೃಷ್ಟಿಸಿ, ಕೊಲೆ ಹಿಂದಿನ ಹಂತಕರನ್ನು ಮರೆಮಾಚಿಸುತ್ತಿರುವುದು ಸರಿಯಲ್ಲ. ಈ ಬಗ್ಗೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳೆರಡೂ ಅಮೆರಿಕಾ ಮೇಲೆ ಒತ್ತಡ ತಂದು ನಿಖರವಾದ ತನಿಖೆ ನಡೆಯುವಂತಾಗಬೇಕು.

ಮೂಲತಃ ತುಮಕೂರಿನ ತಮ್ಮಣ್ಣಗೌಡರ ಮಗನಾದ ಶ್ರೀನಿವಾಸಯ್ಯ ಬೆಂಗಳೂರಿನ ಸುಂಕದಕಟ್ಟೆ ನಿವಾಸಿಯಾಗಿದ್ದಾರೆ. ಖಾಸಗಿ ಕಂಪನಿ ಒಂದರ ಉದ್ಯೋಗಿಯಾಗಿ ತಮ್ಮ ಚಿಕ್ಕ-ಚೊಕ್ಕ ಸಂಸಾರವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದರು. ಇವರ ೨೨ ವರ್ಷದ ಸಾಕೇತ್ ಬಹಳ ಬುದ್ದಿವಂತ. ಸುಂಕದಕಟ್ಟೆ ಸಮೀಪದ ಮಾಚೋಹಳ್ಳಿಯಲ್ಲಿರುವ ಶ್ರೀವಾಣಿ ವಿದ್ಯಾಕೇಂದ್ರದಲ್ಲಿ ೨೦೦೯ ರಿಂದ ೨೦೧೯ರವರೆಗೆ ೧ನೇ ತರಗತಿಯಿಂದ ೧೦ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದ. ಎಸ್‌ಎಸ್‌ಎಲ್‌ಸಿ ಯಲ್ಲಿ ಒಟ್ಟು ೬೨೫ ಅಂಕಗಳಿಗೆ ೬೦೩ ಅಂಕ ಪಡೆದಿದ್ದ. ಒಟ್ಟಾರೆ, ಶೇ.೯೬.೫ ರಷ್ಟು ಅಂಕ ಪಡೆದು ಶಾಲೆಗೆ ಮೊದಲಿಗನಾಗಿ ಹೊರಹೊಮ್ಮಿದ್ದ. ಪಿಯುಸಿಗೆ ಬೇಸ್ ಪಿಯು ಕಾಲೇಜು ಸೇರಿದ್ದ. ೨೦೨೧ರಲ್ಲಿ ವಿಜ್ಞಾನ ವಿಷಯದಲ್ಲಿ ಉನ್ನತ ದರ್ಜೆಯಲ್ಲಿ ಪಾಸಾಗಿದ್ದ. ಜೆಈಈ ಪರೀಕ್ಷೆ ಬರೆದು ಚೆನ್ನೈನಲ್ಲಿರುವ ಮದ್ರಾಸ್ ಐಐಟಿ ಕಾಲೇಜಿನಲ್ಲಿ ಬಿಟೆಕ್ ಪದವಿ ಸೇರಿದ್ದ.

ಮದ್ರಾಸ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ನಲ್ಲಿ ರಾಸಾಯನಿಕ ಎಂಜಿನಿಯರಿಂಗ್‌ನಲ್ಲಿ ಬ್ಯಾಚುಲರ್ ಆಫ್ ಟೆಕ್ನಾಲಜಿ (ಬಿಟೆಕ್) ಪದವಿಯನ್ನು ೨೦೨೧ರ ಅಕ್ಟೋಬರ್ ನಿಂದ ೨೦೨೫ರ ಜೂನ್ ವರೆಗೆ ಪೂರ್ಣಗೊಳಿಸಿದ. ರಾಸಾಯನಿಕ ಮತ್ತು ಜೀವಾಣು ಇಂಜಿನಿಯರಿಂಗ್ ಎಂಬ ವಿಷಯದಲ್ಲಿ ಬಿಟೆಕ್ ಪದವಿಯನ್ನು ಉನ್ನತ ದರ್ಜೆಯಲ್ಲಿ ಮಾಡಿದ್ದ. ಮದರಾಸು ಐಐಟಿ ಕಾಲೇಜು ನೀಡುವ ಗ್ರೇಡ್ ೧೦ಕ್ಕೆ ೮.೪೧ ಗ್ರೇಡ್ ಪಡೆದಿದ್ದ. ರಾಸಾಯನಿಕ ಮತ್ತು ಜೀವಾಣು ಇಂಜಿನಿಯರಿಂಗ್‌ನಲ್ಲಿ ಎಂಎಸ್ ಪದವಿಯನ್ನು ಪಡೆಯಲು ಅಮೆರಿಕಾಕ್ಕೆ ಕಳೆದ ಸೆಪ್ಟೆಂಬರ್.೪ರಂದು ತೆರಳಿದ್ದ. ಅಲ್ಲಿನ ಸಿಲಿಕಾನ್ ವ್ಯಾಲಿ ಎನಿಸಿದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಬರ್ಕ್ಲೀ ಯುನಿವರ್ಸಿಟಿ ಕ್ಯಾಂಪಸ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ. ಸಾಕೇತ್ ಕ್ಯಾಲಿಫೋರ್ನಿಯಾದ ಬರ್ಕ್ಲಿ ವಿಶ್ವವಿದ್ಯಾಲಯದಲ್ಲಿ ಉತ್ಪನ್ನ ಅಭಿವೃದ್ಧಿ ಕಾರ್ಯಕ್ರಮ (ಪಿಡಿಪಿ) ಅಡಿಯಲ್ಲಿ ವಿಜ್ಞಾನ ಸ್ನಾತಕೋತ್ತರ ಪದವಿ (ಎಂಎಸ್) ಪಡೆಯುತ್ತಿದ್ದ. ಇದರ ಕಲಿಕಾ ಅವಧಿ ಆಗಸ್ಟ್ ೨೦೨೫ ರಿಂದ ಮೇ ೨೦೨೬ ರವರೆಗೆ ನಿಗದಿಯಾಗಿತ್ತು. ಆದರೆ, ಈಗಿನ ಟ್ರಂಪ್ ಸರ್ಕಾರ ಎಜುಕೇಷನ್ ವೀಸಾ ಕೊಡಲು ವಿಳಂಬ ಧೋರಣೆ ಅನುಸರಿಸಿದ್ದರಿಂದ ಒಂದು ತಿಂಗಳು ತಡವಾಗಿ ಸೆಪ್ಟೆಂಬರ್.೪ರಂದು ಬೆಂಗಳೂರಿನಿಂದ ಅಮೆರಿಕಾಗೆ ತೆರಳಿದ್ದ.

ಕೇವಲ ನಾಲ್ಕು ತಿಂಗಳ ಹಿಂದೆ ಅಮೆರಿಕಾದ ಕ್ಯಾಲಿಫೋರ್ನಿಯಾಗೆ ತೆರಳಿದ ಸಾಕೇತ್ ಕಳೆದ ಫೆಬ್ರವರಿ.೯ ರ ರಾತ್ರಿ ಕಾಣೆಯಾಗಿದ್ದವನು, ಫೆಬ್ರವರಿ. ೧೫ರಂದು ಸಮೀಪದ ಟೆಲ್ಡಿನ್ ಉದ್ಯಾನದ ಅಂಜಾ ಸರೋವರದಲ್ಲಿ ಶವವಾಗಿ ಪತ್ತೆಯಾಗಿದ್ದಾನೆ. ೬.೧ ಅಡಿ ಎತ್ತರವಿದ್ದ ಸಾಕೇತ್ ತನ್ನ ದೇಹದಷ್ಟೇ ಆತ್ಮವಿಶ್ವಾಸದಲ್ಲಿ ದೃಢವಾಗಿದ್ದ. ಇಂಥ ಪ್ರತಿಭಾವಂತ ವಿದ್ಯಾರ್ಥಿ ಅಂಜಾ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎನ್ನುವುದನ್ನು ನಂಬಲು ಸಾಧ್ಯವಿಲ್ಲ. ಸಾಕೇತ್ ಲಿಂಕ್ಡ್‌ಇನ್ ಎಂಬ ಸಾಮಾಜಿಕ ತಾಣದಲ್ಲಿ ತಾನೇ ಬರೆದುಕೊಂಡಿರುವ ಪ್ರೊಫೈಲ್‌ನಲ್ಲಿ, "ನಾನು ಯುನಿವರ್ಸಿಟಿ ಕ್ಯಾಂಪಸ್ ಬರ್ಕ್ಲಿಯಲ್ಲಿ ರಾಸಾಯನಿಕ ಮತ್ತು

**ಪ್ರತಿಯೊಂದು ಕಷ್ಟದ ಪರಿಸ್ಥಿತಿಯು ಹೊಸ ಪಾಠವನ್ನು ಕಲಿಸುತ್ತದೆ, ಅದನ್ನು ಧೈರ್ಯದಿಂದ ಸ್ವೀಕರಿಸಿ ಮುನ್ನುಗ್ಗಬೇಕು.**

ಜೀವಾಣು ಎಂಜಿನಿಯರಿAಗ್ ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿ, ಐಐಟಿ ಮದ್ರಾಸ್‌ನಿಂದ ಪದವಿಪೂರ್ವ ಪದವಿ ಪಡೆದಿದ್ದೇನೆ. ಮೃದುವಾಗಿರುವ ಸಕ್ರಿಯ ವಸ್ತುಗಳು ಹಾಗೂ ಅರೆವಾಹಕಗಳು ಮತ್ತು ಸುಧಾರಿತ ವಸ್ತುಗಳಲ್ಲಿ ಆಳವಾದ ತಂತ್ರಜ್ಞಾನದ ನಾವೀನ್ಯತೆಗಳ ಬಗ್ಗೆ ನನಗೆ ಆಸಕ್ತಿ ಇದೆ" ಎಂದು ಹೇಳಿಕೊಂಡಿದ್ದಾನೆ.

ಮದ್ರಾಸ್‌ಐಐಟಿಯಲ್ಲಿಬಿಟೆಕ್‌ಪದವಿವ್ಯಾಸಂಗಮಾಡುವಾಗಲೇ ಇಂಟರ್ನ್‌ಶಿಪ್ ಮಾಡುವ ಅವಕಾಶವಿತ್ತು. ಇಂಟರ್ನ್ ಷಿಪ್ ಎಂದರೆ, ವ್ಯಾಸಂಗದ ಅಂತಿಮ ಭಾಗವಾಗಿ, ಒಂದು ಸಂಸ್ಥೆಯಲ್ಲಿ ತಾತ್ಕಾಲಿಕವಾಗಿ ಪ್ರಾಯೋಗಿಕ ಕೆಲಸದ ಅನುಭವಕ್ಕಾಗಿ ಪಡೆಯುವ ತರಬೇತಿ ಅಥವಾ ಕೌಶಲ್ಯಗಳನ್ನು ಪಡೆದುಕೊಳ್ಳುವ ಅವಕಾಶ. ಇದನ್ನು ಸದುಪಯೋಗಪಡಿಸಿಕೊಂಡಿದ್ದ ಸಾಕೇತ್ ತನ್ನ ಓದಿನ ಜೊತೆಯಲ್ಲೇ ಪ್ರಾಯೋಗಿಕ ತರಬೇತಿ ಮತ್ತು ವೃತ್ತಿ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದ. ಇದಕ್ಕೆ ಕಂಪನಿಗಳು ಸಹಾಯಧನವನ್ನು ನೀಡುತ್ತಿದ್ದರಿಂದ ಆತನ ವಿದ್ಯಾಭ್ಯಾಸದ ಖರ್ಚಿಗೂ ನೆರವಾಗುತ್ತಿತ್ತು. ಇದು ಸಾಕೇತ್ ಬಿಟೆಕ್ ವ್ಯಾಸಂಗದ ಜೊತೆಗೆ ನೇರ ಪ್ರಾಯೋಗಿಕವಾಗಿ ಕೆಲಸ ಮಾಡುತ್ತ ತನ್ನ ಅಧ್ಯಯನ ವಿಷಯವಾದ ರಾಸಾಯನಿಕ ಮತ್ತು ಜೀವಾಣು ಇಂಜಿನಿಯರಿAಗ್‌ನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತಿತ್ತು.

ಸಾಕೇತ್‌ಬಿಟೆಕ್‌ಪದವಿವ್ಯಾಸಂಗಮಾಡುವಾಗಇದ್ದಇಂಟರ್ನ್‌ಶಿಪ್ ಅವಕಾಶ ಬಳಸಿಕೊಂಡು, ಪಾಲಿಮರ್ ಎಂಜಿನಿಯರಿಂಗ್ ಮತ್ತು ಕೊಲಾಯ್ಡ್ ವಿಜ್ಞಾನ ಪ್ರಯೋಗಾಲಯದಲ್ಲಿ ಸುಮಾರು ಎರಡು ವರ್ಷಗಳ ಕಾಲ ಕೆಲಸ ಮಾಡಿದ್ದ. ಹಾಗೇ, ೨೦೨೪ರ ಸೆಪ್ಟೆಂಬರ್ ನಿಂದ ೨೦೨೫ರ ಮೇ ವರೆಗೆ ಪದವಿಪೂರ್ವ ಸಂಶೋಧಕನಾಗಿ ಮತ್ತು ೨೦೨೩ರ ಸೆಪ್ಟೆಂಬರ್ ನಿಂದ ೨೦೨೪ರ ಆಗಸ್ಟ್ ವರೆಗೆ ಯುವ ಸಂಶೋಧನಾ ಸಹೋದ್ಯೋಗಿಯಾಗಿ ಕೆಲಸ ಮಾಡಿದ್ದ. ಜೊತೆಗೆ, ೨೦೨೩ರ ಸೆಪ್ಟೆಂಬರ್ ನಿಂದ ೨೦೨೪ರ ಜೂನ್ ವರೆಗೆ 'ಯೂನಿ ಲಿವರ್' ಎಂಬ ಭಾರತದ ಬಹು ದೊಡ್ಡ ಸೋಪ್ ಮತ್ತಿತರ ಪ್ರಸಾದನಗಳ ಉತ್ಪಾದನಾ ಕಂಪನಿಯಲ್ಲಿ 'ಯಂಗ್ ರಿಸರ್ಚ್ ಫೆಲೋ' ಆಗಿಯೂ ಕೆಲಸ ಮಾಡಿದ್ದ. ನಂತರ ೨೦೨೪ರ ಮೇ ತಿಂಗಳಿಂದ ೨೦೨೪ರ ಜುಲೈ ರವರೆಗೆ ಹೈದರಾಬಾದ್‌ನ ಪ್ರಸಿದ್ಧ ಕಂಪನಿಯಾದ ಡಾ. ರೆಡ್ಡೀಸ್ ಲ್ಯಾಬೊರೇಟರೀಸ್‌ನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ತರಬೇತಿ ಪಡೆವ ಸಹಾಯಕನಾಗಿ ಸಾಕೇತ್ ಉದ್ಯಮಶೀಲತೆಯ ಮಾನ್ಯತೆ ಪಡೆದಿದ್ದ. ಇದರಿಂದ ಮದ್ರಾಸ್ ಐಐಟಿಯಲ್ಲಿ ಬಿಟೆಕ್ ಪದವಿ ವ್ಯಾಸಂಗ ಮಾಡುವಾಗಲೇ ಸಾಕಷ್ಟು ಹಣ ಗಳಿಸಿ, ತನ್ನ ವಿದ್ಯಾಭ್ಯಾಸದ ಖರ್ಚುವೆಚ್ಚ ಸರಿದೂಗಿಸುತ್ತಿದ್ದ.

### ಅಮೆರಿಕದಲ್ಲೂ ಇಂಟರ್ನ್ ಷಿಪ್ ನಂಬಿದ್ದನೇ?

ಐಐಟಿ ಮದ್ರಾಸ್‌ನಲ್ಲಿ ಬಿಟೆಕ್ ವಿದ್ಯಾರ್ಥಿ ಆಗಿದ್ದಾಗಲೇ ಶೈಕ್ಷಣಿಕ ಕ್ಷೇತ್ರವನ್ನು ಮೀರಿ, ಸಾಕೇತ್ ಓದಿನ ಜೊತೆಗೆ ಕಂಪನಿಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ತರಬೇತಿ ಪಡೆವ ಉಪ ಕೆಲಸಗಳಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದ. ಐಐಟಿ ಮದ್ರಾಸ್‌ನ ಇ-ಸೆಲ್ ಮೂಲಕ ಕಳೆದ ಎರಡು ವರ್ಷಗಳ ಕಾಲ ಹಲವಾರು ಪ್ರಮುಖ ಹುದ್ದೆಗಳಲ್ಲಿ ಸೇವಾ ಅನುಭವ ಪಡೆದುಕೊಂಡಿದ್ದ. ಅಮೆರಿಕಾದ ಕ್ಯಾಲಿಫೋರ್ನಿಯಾದಂಥ ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ಎಂ.ಎಸ್ ಸ್ನಾತಕೋತ್ತರ ಪದವಿ ಕಲಿಕೆಗೆ ಅವಕಾಶ ಸಿಕ್ಕಾಗ, ಅಲ್ಲಿನ ದುಬಾರಿ ಶೈಕ್ಷಣಿಕ ಶುಲ್ಕ ಆತಂಕ ಹುಟ್ಟಿಸಿತ್ತು. ಆದರೆ ಐಐಟಿ ಮದ್ರಾಸ್‌ನಲ್ಲಿ ಬಿಟೆಕ್ ವಿದ್ಯಾರ್ಥಿ ಆಗಿದ್ದಾಗ ಇಂಟರ್ನ್ ಷಿಪ್ ಮೂಲಕ ಹಣ ಸಂಪಾದಿಸಿ ವ್ಯಾಸಂಗ ಸಂಪೂರ್ಣಗೊಳಿಸಿದಂತೆಯೇ, ಅಮೆರಿಕದಲ್ಲೂ ಯಾವುದಾದರೂ ಕಂಪನಿಯೊಂದಿಗೆ ಸೇರಿ ಇಂಟರ್ನ್ ಷಿಪ್ ಮೂಲಕ ಹಣ ಗಳಿಸಿ, ಖರ್ಚುವೆಚ್ಚ ಸರಿದೂಗಿಸಬಹುದೆಂದು ಗಟ್ಟಿ ಧೈರ್ಯ ಮಾಡಿದ್ದ. ಇದಕ್ಕಾಗಿ ಆತ ಚಾವ್ರೋ ಚಾವ್ರೋ ಡುನ್ ಎಂಬ ಲಾರೆನ್ಸ್ ಬರ್ಕ್ಲಿ ನ್ಯಾಷನಲ್ ಲ್ಯಾಬೊರೇಟರಿ ವಿಜ್ಞಾನಿಯೊಂದಿಗೆ ಪತ್ರ ವಿನಿಮಯ ಮಾಡುತ್ತ ಸಂಪರ್ಕದಲ್ಲಿದ್ದ. ಆದರೆ, ಅವನ ಎಣಿಕೆ ತಪ್ಪಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ. ಮನೆಯಲ್ಲೂ ಆರ್ಥಿಕ ಸಂಕಷ್ಟ ಇದ್ದಿದ್ದರಿಂದ ತಂದೆ ಶ್ರೀನಿವಾಸಯ್ಯರಿಗೂ ತನ್ನ ಕಷ್ಟ ಹೇಳಿಕೊಂಡಿಲ್ಲ.

ಸಾಕೇತ್ ರೂಮೇಟ್ ಆಗಿದ್ದ ಸಿಖ್ ಸಮುದಾಯದ ಬನೀತ್ ಸಿಂಗ್ ಹೇಳುವುದನ್ನು ಗಮನಿಸಿದರೆ, ಆತ ದಿನದ ಒಂದು ಹೊತ್ತಿನ ಊಟಕ್ಕೂ ಪರದಾಡಿದ್ದಾನೆ ಎನಿಸುತ್ತೆ. ಏಕೆಂದರೆ, ಪ್ರತಿ ದಿನ ಚಿಪ್ಸ್ ಮತ್ತಿತರ ಕುರುಕಲು ತಿಂಡಿ ತಿಂದುಕೊಂಡೇ ಹಸಿವು ನೀಗಿಸಿಕೊಳ್ಳುತ್ತಿದ್ದ, ಇತ್ತೀಚಿಗೆ ನನ್ನನ್ನ ಕೇರ್ ಮಾಡೋರೆ ಇಲ್ಲ ಅನ್ನೊ ಭಾವನೆಯಿಂದ ಸಾಕೇತ್ ನೊಂದಿದ್ದ ಎಂದು ರೂಮ್ ಮೇಟ್ ಬನೀತ್ ಸಿಂಗ್ ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ದೃಢನಿರ್ಧಾರ ಮಾಡಿದ್ದಾನೆ. ಇದಕ್ಕೆ ೨೦೨೩ರಲ್ಲಿ ಚೆನ್ನೈನಲ್ಲಿ ಐಐಟಿ ವ್ಯಾಸಂಗ ಮಾಡುವಾಗ ಸಹಪಾಠಿ ಕೇದಾರ್ ಆತ್ಮಹತ್ಯೆ ಮಾಡಿಕೊಂಡಿದ್ದು ಪ್ರೇರಣೆಯಾಗಿರಬಹುದು. ಏಕೆಂದರೆ, ಸಾಕೇತ್‌ನ ಕೊನೆ ಪೋಸ್ಟ್‌ನಲ್ಲಿ ಆತ್ಮಹತ್ಯೆಗೆ ಶರಣಾದ ಕೇದರ್‌ನನ್ನ ನೆನೆದಿದ್ದಾನೆ. ಫೆಬ್ರವರಿ.೯ ರಂದು ಯುನಿವರ್ಸಿಟಿ ಕ್ಯಾಂಪಸ್‌ನಿಂದ

28ನೇ ಪುಟಕ್ಕೆ






● ಪ್ರತಿಮಾ

# 'ವ್ಯಾಪ್ಸ್ ಟೆಕ್ನೋಸಾಫ್ಟ್' ಅದ್ದೂರಿ ರಜತ ಮಹೋತ್ಸವ

### ಸಾಫ್ಟ್‌ವೇರ್ ಉದ್ಯಮದಲ್ಲಿ ಕನ್ನಡಿಗ

# ಸಿದ್ದೇಶ್‌ಕುಮಾರ್ ಸಾಧನೆ

ಭಾರತದ ಶಿಕ್ಷಣ ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗೆ ದಿಕ್ಕು ತೋರಿಸಿರುವ ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆ ತನ್ನ ರಜತ ಮಹೋತ್ಸವವನ್ನು ಬಹಳ ಅರ್ಥ ಪೂರ್ಣವಾಗಿ ಮತ್ತು ಅದ್ದೂರಿಯಾಗಿ ಆಚರಿಸಿಕೊಂಡಿತು.

೨೦೨೬ರ ಫೆಬ್ರವರಿ.೨೩ರಂದು ಸಂಜೆ ೪ ಗಂಟೆಗೆ ಬೆಂಗಳೂರಿನ ಹೆಬ್ಬಾಳದಲ್ಲಿರುವ "ಗಾಂಧಿ ಕೃಷಿ ವಿಶ್ವವಿದ್ಯಾನಿಲಯ" ದ ಡಾ. ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀÃಯ ಸಭಾಂಗಣದಲ್ಲಿ ನಡೆದ "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ರಜತ ಮಹೋತ್ಸವ ಕಾರ್ಯಕ್ರಮ ಅದರ ಮಾಲಿಕರಾದ ಆರ್. ಸಿದ್ದೇಶ್ ಕುಮಾರ್‌ಸಾಧನೆಗೆ ಮತ್ತು ಪರಿಶ್ರಮಕ್ಕೆ ಸಾಕ್ಷಿಯಾಗಿತ್ತು.

"ವ್ಯಾಪ್ಸ್ ಅಕ್ಷಯ ಫೌಂಡೇಷನ್ ಟ್ರಸ್ಟ್" ಆಶ್ರಯದಲ್ಲಿ ಆಯೋಜಿಸಿದ್ದ "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆ ೨೫ನೇ ವರ್ಷದ ಮಹೋತ್ಸವವನ್ನು ಕರ್ನಾಟಕದ ಘನತೆವೇತ್ತ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಉದ್ಘಾಟಿಸಿದರು. ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಆದಿ ಚುಂಚನಗಿರಿ ಮಹಾಸಂಸ್ಥಾನದ ಶ್ರೀ

ಅನವಶ್ಯಕ ವಿಷಯಗಳ ಹಿಂದೆ ಹೋಗುವುದನ್ನು ನಿಲ್ಲಿಸಿದ ತಕ್ಷಣ , ಅವಶ್ಯಕ ಸಂಗತಿಗಳು ನಮ್ಮನ್ನು ಹುಡುಕಿಕೊಂಡು ಬರುತ್ತವೆ . ಆಯ್ಕೆ ಸರಿಯಿರಬೇಕಷ್ಟೆ !

**ಮಹೇಶ್**
ವಿಜಯಪುರ



ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಸುತ್ತೂರು ಕ್ಷೇತ್ರದ ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರುಗಳಾದ ಶ್ರೀ ದೇಶಿಕೇಂದ್ರ ಮಹಾಸ್ವಾಮೀಜಿ ವಹಿಸಿದ್ದರು. ಇವರೊಂದಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಉತ್ತರ ಭಾರತದ ಚರ್ಚ್‌ಗಳ ಮುಖ್ಯ ನಿರ್ವಾಹಕರು ಹಾಗೂ ಕಲ್ಕತ್ತ ಧರ್ಮ ಪ್ರಾಂತ್ಯದ ಬಿಷಪ್ ಆದ ಶ್ರೀ ರೆವರೆಂಡ್ ಡಾ.ಪಾರಿತೋಷ್ ಕ್ಯಾನಿಂಗ್, ಸೆರೆಂಪೋರ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಬಿಷಪ್ ಶ್ರೀ ಡಾ.ಅನಿಲ್ ಕುಮಾರ್ ಜಾನ್ ಸರ್ವಾಂಡ್ ಮತ್ತು ನೋಟ್ರೆಡಾಮ್ ಪ್ರಾಂತ್ಯದ ಪ್ರಧಾನ ಸೋದರಿಯರಾದ ಸಿಸ್ಟರ್ ಮೇರಿ ಚೇತನಾ, ಕರ್ನಾಟಕ ರಾಜ್ಯದ ಲೋಕಾಯುಕ್ತರಾದ ನ್ಯಾಯಮೂರ್ತಿ ಶ್ರೀ ಬಿ.ಎಸ್.ಪಾಟೀಲ್, ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಪುತ್ರ ಹಾಗೂ ರಾಜ್ಯಸಭೆ ಮಾಜಿ ಸದಸ್ಯರಾದ ಶ್ರೀ ಸುನೀಲ್ ಶಾಸ್ತ್ರೀ ದೀಪ ಬೆಳಗಿಸುವ ಮೂಲಕ ಸಮಾರಂಭಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಈ ಸಂದರ್ಭದಲ್ಲಿ "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್"ನ ರಜತ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಮಂಜುನಾಥ ಪ್ರಸಾದ್, ವ್ಯವಸ್ಥಾಪಕ ನಿರ್ದೇಶಕ ಸಿದ್ದೇಶ್‌ಕುಮಾರ್ ಮತ್ತು ಇವರ ಪತ್ನಿ 'ರಾದ್ವಿ' ವಸ್ತ್ರೋದ್ಯಮ ಸಮೂಹದ ಮುಖ್ಯಸ್ಥೆ ಶ್ರೀಮತಿ ರಂಜಿತಾ ಸಿದ್ದೇಶ್ ಕುಮಾರ್ ಉಪಸ್ಥಿತರಿದ್ದರು.

"ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆ ರಜತ ಮಹೋತ್ಸವದ ಉದ್ಘಾಟನಾ ಭಾಷಣದಲ್ಲಿ ಕರ್ನಾಟಕದ ಘನತೆವೆತ್ತ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಮಾತನಾಡಿ, " ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಭಾರತ ವಿಶ್ವದಲ್ಲೇ ಮುಂಚೂಣಿಯಲ್ಲಿದೆ. ಹಾಗೇ, ದೇಶದಲ್ಲಿ ಕರ್ನಾಟಕ ಅಗ್ರಗಣ್ಯವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಬೆಂಗಳೂರಿನ ಕೊಡುಗೆ ಅಪಾರ. ಒಂದು ಶತಮಾನದಿಂದಲೂ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೆ ಅದ್ಭುತ ಕೊಡುಗೆ ನೀಡುತ್ತಾ ವಿಜ್ಞಾನ ನಗರಿ ಅನ್ನಿಸಿಕೊಂಡಿದ್ದು, ಈಗ ಕಂಪ್ಯೂಟರ್ ಯುಗದಲ್ಲಿ ಸಿಲಿಕಾನ್ ಸಿಟಿ ಅಂತ ಪ್ರಸಿದ್ಧವಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಏರೋಸ್ಪೇಸ್ ಮತ್ತಿತರ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆ ಮಾಡುತ್ತಿದೆ ಎಂದು ಬೆಂಗಳೂರಿನ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದ ಕೊಡುಗೆಯನ್ನು ಪ್ರಶಂಸಿಸಿದರು.

ಸುಮಾರು ೧೫ ನಿಮಿಷಗಳ ಉದ್ಘಾಟನಾ ಭಾಷಣದಲ್ಲಿ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಮಾತನಾಡಿ, ಬೆಂಗಳೂರಿನ ಪ್ರಗತಿಗೆ ಪೂರಕವಾಗಿ ಕರ್ನಾಟಕ ರಾಜ್ಯದ ಇತರೆ ನಗರಗಳು ಸಹ ತಂತ್ರಜ್ಞಾನ, ಡಿಜಿಟಲ್ ಪರಿಸರ ಅಭಿವೃದ್ಧಿಯಲ್ಲಿ ಗಮನಾರ್ಹ ಕೊಡುಗೆ ನೀಡುತ್ತಿವೆ ಎಂದರಲ್ಲದೆ, ೨೦೪೭ ರ ವೇಳೆಗೆ ಅಭಿವೃದ್ಧಿ ಹೊಂದಿದ, ಜಾಗೃತ ಮತ್ತು ಸ್ವಾವಲಂಬಿ ಭಾರತವನ್ನು ನಿರ್ಮಿಸಲು ನಾವೆಲ್ಲರೂ ಒಟ್ಟಾಗಿ ಮುಂದುವರಿಯೋಣ, ದೇಶದ ಅಭಿವೃದ್ಧಿಗೆ ಕೈಜೋಡಿಸೋಣ. ಭಾರತದ ಕೀರ್ತಿಯನ್ನು ವಿಶ್ವಾದ್ಯಂತ ಪಸರಿಸೋಣ. ವ್ಯಾಪ್ಸ್ ಟೆಕ್ನೋಸಾಫ್ಟ್ ಕಂಪೆನಿಯು ಕಠಿಣ ಪರಿಶ್ರಮದಿಂದ ಗುಣಮಟ್ಟದ ಸೇವೆ ಮಾಡುತ್ತಾ, ಯಶಸ್ವಿ ೨೫ ವರ್ಷಗಳನ್ನು ಪೂರೈಸಿದೆ. ಸಮೃದ್ಧ ಮತ್ತು ಬಲಿಷ್ಟ ರಾಷ್ಟ್ರ ನಿರ್ಮಾಣಕ್ಕೆ ತನ್ನದೇ ಆದ ಕೊಡುಗೆ ನೀಡಿದೆ ಎಂದು ಪ್ರಶಂಸಿಸಿದರು.

**ವಿಜ್ಞಾನದಲ್ಲಿ ಮಾನವತೆ ಇರಲಿ:**

"ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆ ೨೫ನೇ ವರ್ಷದ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯವಹಿಸಿದ್ದ ಆದಿಚುಂಚನಗಿರಿ ಮಠದ ಜಗದ್ಗುರು ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ತಮ್ಮ ಆಶೀರ್ವಚನದಲ್ಲಿ ಮಾತನಾಡುತ್ತಾ, ವಿಜ್ಞಾನದಲ್ಲಿ ಮಾನವೀಯತೆ ಅಗತ್ಯ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಮನುಷ್ಯತನಕ್ಕೆ ಆದ್ಯತೆ ನೀಡಬೇಕು. ಪ್ರತಿಯೊಬ್ಬ ಭಾರತೀಯನೂ ಸ್ವಯಂ ಅಭಿವೃದ್ಧಿ ಹೊಂದುವಂಥ ವಾತಾವರಣ ಸೃಷ್ಟಿಸಬೇಕು. ಆ ಮೂಲಕ ಸಮಾಜದ





ನಾವು ಜಾಗೃತವಾಗಿದ್ದಾಗಲೇ ನನಸಾಗಿಸಲು ಯೋಗ್ಯವಾದ ಕನಸುಗಳು ಕಾಣಿಸಿಕೊಳ್ಳುತ್ತವೆ .
ಒಳ್ಳೆಯ ಕನಸುಗಳ ನಿರೀಕ್ಷೆಯಲ್ಲಿ ಎಚ್ಚರವಾಗಿರೋಣ !

ಅನಂತು
ನೆಲಮಂಗಲ

ಅಭಿವೃದ್ಧಿಗೆ ಎಲ್ಲರೂ ಶ್ರಮಿಸಬೇಕು. ಪ್ರಾಚೀನ ಕಾಲದಿಂದಲೂ ಭಾರತ ವಿಜ್ಞಾನ ಮತ್ತು ಗಣಿತ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡುತ್ತಾ ಬಂದಿದೆ. ಧರ್ಮ-ಸಂಸ್ಕೃತಿಗೆ ಕೊಟ್ಟಷ್ಟೆ ಕೊಡುಗೆಯನ್ನು ವಿಜ್ಞಾನ-ತಂತ್ರಜ್ಞಾನಕ್ಕೂ ನೀಡಿದೆ. ಈ ನಿಟ್ಟಿನಲ್ಲಿ ಭಾರತೀಯ ಸಂತರು-ದಾರ್ಶನಿಕರ ಶ್ರಮ ಮತ್ತು ದೂರದೃಷ್ಟಿತ್ವ ಅನನ್ಯವಾದುದು. ಪ್ರಸ್ತುತ ದೇಶದ ಪ್ರಗತಿಗೆ ವಿಜ್ಞಾನ-ತಂತ್ರಜ್ಞಾನ ಬಹಳ ಅಗತ್ಯವಾಗಿದೆ. ಇದಕ್ಕಾಗಿ ಪ್ರತಿಯೊಬ್ಬ ಭಾರತೀಯ ಆಧುನಿಕ ವಿಜ್ಞಾನ ತಿಳಿವಿಗೆ ಪ್ರಯತ್ನಿಸಬೇಕು. ವಿಜ್ಞಾನ ಹಾದಿತಪ್ಪದಂತೆ ಧರ್ಮ ಕಾಯಬೇಕು. ಭಾರತೀಯರ ಬುದ್ದಿವಂತಿಕೆ ಕೇವಲ ಹಣಕ್ಕಾಗಿ ವಿನಿಯೋಗವಾಗದೆ, ಉತ್ಕೃಷ್ಟ ಗುಣಗಳ ಮೂಲಕ ಸಹಕಾರ ತತ್ವಕ್ಕೆ ಬಳಕೆ ಆಗಬೇಕು. ಉತ್ತಮ ಮನೋಭಾವದಿಂದ ಜಗತ್ತಿನ ಜನರೆಲ್ಲರೂ  ಜೀವನ ನಡೆಸಬೇಕು ಎಂದು ಶುಭ ಆಶಿಸಿದರು.

"ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೆಂÊವೇಟ್ ಲಿಮಿಟೆಡ್" ಸಂಸ್ಥೆ ರಜತ ಮಹೋತ್ಸವದಲ್ಲಿ ದಿವ್ಯ ಸಾನ್ನಿಧ್ಯವಹಿಸಿದ್ದ ಸುತ್ತೂರು ಕ್ಷೇತ್ರದ ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರುಗಳಾದ ಶ್ರೀ ದೇಶಿಕೇಂದ್ರ ಮಹಾಸ್ವಾಮೀಜಿ ತಮ್ಮ ಆಶೀರ್ವಚನದಲ್ಲಿ, ಉದ್ಯಮಿಯಾಗಿ  ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೆಂÊವೇಟ್ ಲಿಮಿಟೆಡ್" ಸಂಸ್ಥೆ ಮಾಲಿಕರಾದ ಸಿದ್ದೇಶ್ ಕುಮಾರ್ ಸಮಾಜಮುಖಿಯಾಗಿ ಯೋಚಿಸುತ್ತಾ ಬಂದಿದ್ದಾರೆ. ಇವರ ಪತ್ನಿ ಶ್ರೀಮತಿ ರಂಜಿತಾ ಅವರು ಸಹ ಪತಿಗೆ ಪೂರಕವಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಸೇವಾ ಮನೋಭಾವಕ್ಕೆ ಸಾಕ್ಷಿಯಾಗಿ "ಅಕ್ಷಯ ಪ್ರತಿಷ್ಟಾನ"ದ ಮೂಲಕ ಗೋಶಾಲೆಗಳನ್ನು ನಡೆಸುತ್ತಾ, ಗೋಮೂತ್ರದಿಂದ ವಿವಿಧ ಆಯುರ್ವೇದ ಔಷಧಿಗಳನ್ನು ತಯಾರಿಸುತ್ತಿದ್ದಾರೆ. ಇದರ ಮೂಲಕ ಸಮಾಜಕ್ಕೆ ವಿಜ್ಞಾನ-ತಂತ್ರಜ್ಞಾನ ಕೊಟ್ಟಂತೆಯೇ ಆರೋಗ್ಯ ಕಾಣಿಕೆಯನ್ನು ನೀಡುತ್ತಿದ್ದಾರೆ. ಪ್ರಸ್ತುತ ಜನರ ಆರೋಗ್ಯ ಸುಧಾರಣೆಗೆ ಪೂರಕವಾದ ಮಾಹಿತಿ ತಂತ್ರಜ್ಞಾನವನ್ನು "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆ ರೂಪಿಸಲಿ. ಈ ಸಂಸ್ಥೆ ಮುಂದೆ ಶತಮಾನೋತ್ಸವ ಆಚರಿಸಿಕೊಂಡು ಉತ್ಕೃಷ್ಟವಾಗಿ ಬೆಳೆಯಲಿ ಎಂದು ಶುಭಾಶಯ ಹೇಳಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದು ಆಶೀರ್ವಚನ ನೀಡಿದ ಉತ್ತರ ಭಾರತದ ಚರ್ಚ್ ಗಳ ಮುಖ್ಯ ನಿರ್ವಾಹಕರು ಹಾಗೂ ಕಲ್ಕತ್ತ ಧರ್ಮ ಪ್ರಾಂತ್ಯದ ಬಿಷಪ್ ಆದ ಶ್ರೀ ರೆವರೆಂಡ್ ಡಾ.ಪಾರಿತೋಷ್ ಕ್ಯಾನಿಂಗ್, ಪಶ್ಚಿಮ ಬಂಗಾಳದಲ್ಲಿರುವ ಸೆರೆಂಪೋರ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಬಿಷಪ್ ಶ್ರೀ ಡಾ.ಅನಿಲ್ ಕುಮಾರ್ ಜಾನ್ ಸರ್ವಾಂಡ್ ಮತ್ತು ಫ್ರಾನ್ಸ್ನ ನೋಟ್ರೆಡಾಮ್ ಪ್ರಾಂತ್ಯದ ಪ್ರಧಾನ ಸೋದರಿಯರಾದ ಸಿಸ್ಟರ್ ಮೇರಿ ಚೇತನಾ ಅವರುಗಳು, "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆಯು ಭಾರತದ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವುದನ್ನು ಶ್ಲಾಘಿಸಿದರು. ಭಾರತದ ನೂರಾರು ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾದ ಮಾಹಿತಿ ತಂತ್ರಾAಶವನ್ನು ನೀಡುತ್ತಿರುವ "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್", ಪ್ರಸ್ತುತ ಜಗತ್ತಿನ ಆದ್ಯ ಕ್ಷೇತ್ರವಾಗುತ್ತಿರುವ ಏಐ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ "ಏಐ-ವ್ಯಾಪ್ಸ್" ಎಂಬ ಕೃತಕ ಬುದ್ಧಿಮತ್ತೆ ಕೇಂದ್ರ ಸ್ಥಾಪಿಸುತ್ತಿರುವುದು ಔಚಿತ್ಯಪೂರ್ಣವಾಗಿದೆ  ಎಂದು ಶುಭ ಹಾರೈಸಿದರು.

**"ವ್ಯಾಪ್ಸ್ ಸಿಲ್ವರ್ ಜುಬಿಲಿ ಟೆಕ್ ಪಾರ್ಕ್" :**

ಆರ್. ಸಿದ್ದೇಶ್ ಕುಮಾರ್ ದೂರದೃಷ್ಟಿಯಿಂದ ಕ್ರಿ.ಶ.೨೦೦೧ರಲ್ಲಿ ಆರಂಭವಾದ "ವ್ಯಾಪ್ಸ್ ಟೆಕ್ನೋಸಾಫ್ಟ್




**ಹೆಣ್ಣಿನ ಶಕ್ತಿ ಇರುವುದು ತನ್ನ ದೌರ್ಜನ್ಯಗಳ ವಿರುದ್ಧ ದನಿ ಎತ್ತಿದಾಗ ಯಾವುದೇ ಅನ್ಯಾಯ ಸಹಿಸಬಾರದು. ಕಾನೂನುಬದ್ಧವಾಗಿ ನ್ಯಾಯ ಪಡೆಯಬೇಕು.**



ಪ್ರೆಂÊವೇಟ್ ಲಿಮಿಟೆಡ್" ರಜತ ಮಹೋತ್ಸವ ಸಂದರ್ಭದಲ್ಲಿ "ವ್ಯಾಪ್ಸ್ ಸಿಲ್ವರ್ ಜುಬಿಲಿ ಟೆಕ್ ಪಾರ್ಕ್"ನ್ನು ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಉದ್ಘಾಟಿಸಿದರು. ಪ್ರಸ್ತುತ ಜಗತ್ತಿನ ಆದ್ಯ ಕ್ಷೇತ್ರವಾಗುತ್ತಿರುವ ಎಐ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ "ಎಐ-ವ್ಯಾಪ್ಸ್" ಎಂಬ ಕೃತಕ ಬುದ್ಧಿಮತ್ತೆ ಕೇಂದ್ರಕ್ಕೆ ಉತ್ತರ ಭಾರತದ ಚರ್ಚ್ ಗಳ ಮುಖ್ಯ ನಿರ್ವಾಹಕರು ಹಾಗೂ ಕಲ್ಕತ್ತ ಧರ್ಮ ಪ್ರಾಂತ್ಯದ ಬಿಷಪ್ ಆದ ಶ್ರೀ ರೆವರೆಂಡ್ ಡಾ.ಪಾರಿತೋಷ್ ಕ್ಯಾನಿಂಗ್ ಇದೇ ಶುಭ ಸಮಾರಂಭದಲ್ಲಿ ಚಾಲನೆ ನೀಡಿದರು. ಈ ಐತಿಹಾಸಿಕ ಸಂಭ್ರಮದ ನಡುವೆ ಎಐ ಆಧಾರಿತ ಐವಿಆರ್‌ಎಂ-ಸೂಟ್ "ವ್ಯಾಪ್ಸ್ ಲೆಗಾಸಿ-೧"ಯನ್ನು ನೋಟ್ರೆಡಾಮ್ ಪ್ರಾಂತ್ಯದ ಪ್ರಧಾನ ಸೋದರಿಯರಾದ ಸಿಸ್ಟರ್ ಮೇರಿ ಚೇತನಾ ಬಿಡುಗಡೆ ಮಾಡಿದರು.

ಸಮಾರಂಭದಲ್ಲಿ ಮಾಜಿಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಪುತ್ರರಾದ ಸುನೀಲ್ ಶಾಸ್ತ್ರಿ ಬರೆದ ಇಂಗ್ಲೀಷ್ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರಿಸಿದ ಡಾ.ಸಿ.ನಾಗಣ್ಣ ಅವರ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಹಾಗೇ, ದಿವಂಗತ ಪ್ರಧಾನಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಅವರಿಗೆ ನೀಡಲಾದ 'ಅಮರ ವಿರಾಸಾತ್ ಗೌರವ' ವನ್ನು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪುತ್ರ ಮಾಜಿ ರಾಜ್ಯಸಭಾಸದಸ್ಯ ಶ್ರೀ ಸುನೀಲ್ ಶಾಸ್ತ್ರಿ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ "ವಂದೇ ಮಾತರಂ" ರಾಷ್ಟ್ರ ಗೀತೆ ಬರೆದ ಬಂಗಾಳದ ಕವಿಶ್ರೇಷ್ಠರಾದ ಶ್ರೀ ಬಂಕಿಮ ಚಂದ್ರ ಚಟರ್ಜಿ ಅವರಿಗೆ 'ಚಿರಸ್ಮೃತಿ ಗೌರವ'ವನ್ನು ಶ್ರೀ ಬಂಕಿಮ ಚಂದ್ರ ಚಟರ್ಜಿ ಮುಮ್ಮಗ ಶ್ರೀ ಸಜಲ್ ಚಟರ್ಜಿಗೆ ನೀಡಲಾಯಿತು. ಪಂಜಾಬ್ ಮಾಜಿ ರಾಜ್ಯಪಾಲ ಹಾಗೂ ಪಂಜಾಬ್-ಹರಿಯಾಣ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ದಿವಂಗತ ಶ್ರೀ ಮಂದಗದ್ದೆ ರಾಮಾಜೋಯಿಸ್ ಅವರಿಗೆ ನೀಡಿದ 'ಭಾರತೀಯ ಆದರ್ಶ ಗೌರವ'ವನ್ನು ಅವರ ಪುತ್ರ ವಕೀಲ ಶ್ರೀಶೈಲೇಂದ್ರ ಕುಮಾರ್ ಸ್ವೀಕರಿಸಿದರು.

"ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆಯ ೨೫ನೇ ವರ್ಷದ ರಜತ ಮಹೋತ್ಸವದ ಅಂಗವಾಗಿ ನೀಡಲಾದ "ವಿದ್ಯಾವರೇಣ್ಯ" ಪ್ರಶಸ್ತಿಗಳನ್ನು ಕೆಎಲ್‌ಇ ಶಿಕ್ಷಣ ಸಂಸ್ಥೆಯ ಶ್ರೀ ಡಾ.ಪ್ರಭಾಕರ್ ಕೋರೆ, ಕೆಐಎಡಿಬಿ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ಆರ್‌ಎಸ್‌ಎಸ್ ಸೇವಾ ಸಂಸ್ಥೆಯ ಕರ್ನಾಟಕ ದಕ್ಷಿಣ-ಮಧ್ಯ ಕ್ಷೇತ್ರದ ಕಾರ್ಯವಾಹ್ ಶ್ರೀ ಎನ್.ತಿಪ್ಪೇಸ್ವಾಮಿ, ಭಾರತದ ನಿವೃತ್ತ ಸೇನಾಧಿಕಾರಿ ಬ್ರಿಗೇಡಿಯರ್ ಬಿ.ಎಂ.ಕಾರಿಯಪ್ಪ , ಕೊಲ್ಕತ್ತಾದ ವಿಶ್ವ ದಾಖಲೆಯ ಚಾರಣಿಗರಾದ ಶ್ರೀ ಸತ್ಯರೂಪ್ ಸಿದ್ಧಾಂತ್ ಮತ್ತು ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕರಾದ ಶ್ರೀ ಸಾಯಿ ಪ್ರಕಾಶ್ ಅವರಿಗೆ ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ "ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೆಂÊವೇಟ್ ಲಿಮಿಟೆಡ್" ಸಂಸ್ಥೆಯ ಮಾಲಿಕರಾದ ಆರ್.ಸಿದ್ದೇಶ್ ಕುಮಾರ್ ಸ್ವಾಗತಿಸಿದರೆ, ನೇಗಿಲಯೋಗಿ ಟ್ರಸ್ಟ್ ಅಧ್ಯಕ್ಷ ಹಾಗೂ ನಿವೃತ್ತ ಕೆಎಎಸ್ ಅಧಿಕಾರಿ ಡಿ.ರವಿಕುಮಾರ್ ವಂದಿಸಿದರು.

**'ಕೃತಕ ಬುದ್ಧಿ ಮತ್ತೆ ಸಮಾವೇಶ (ಎಐ ಸಮಿಟ್) ವಿಶೇಷ:**

"ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್" ಸಂಸ್ಥೆ ೨೫ನೇ ವರ್ಷದ ರಜತ ಮಹೋತ್ಸವವ ಅಂಗವಾಗಿ ನಡೆದ ಎಐ ಸಮಾವೇಶದಲ್ಲಿ ಕೃತಕ ಬುದ್ಧಿಮತ್ತೆಯ ಅನುಷ್ಠಾನಗೊಳಿಸುವ, ಅದನ್ನು ಆಡಳಿತದಲ್ಲಿ ಬಳಸುವ, ಶಿಕ್ಷಣ ಕ್ಷೇತ್ರದಲ್ಲಿ ಪರಿವರ್ತನೆ ಮಾಡುವ ಹಾಗೂ ಇದಕ್ಕೆ ಸರ್ಕಾರದ ಬೆಂಬಲದ ಅಗತ್ಯದ ಕುರಿತು ಮಾರ್ಗದರ್ಶನ ನೀಡಲಾಯಿತು. ಹೀಗಾಗಿ ಈ ಸಮಾರಂಭ ಕೇವಲ ವ್ಯಾಪ್ಸ್ ಟೆಕ್ನೋಸಾಫ್ಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಸಂಭ್ರಮವಾಗಿರಲಿಲ್ಲ. ಇದು ದೇಶದ ಶಿಕ್ಷಣ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಸ್ಥೆ ಮಾಡಿದ ೨೫ ವರ್ಷದ ಕ್ರಾಂತಿಕಾರಕ ಸಾಧನೆಗೆ ಸಲ್ಲಿಸುವ ಗೌರವವಾಗಿತ್ತು" ಎನ್ನುವುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

# ವರ್ಲ್ಡ್ ಸೂಪರ್ ಸ್ಟಾರ್ ಯಶ್

## ಕನ್ನಡಿಗರ ಹೆಮ್ಮೆಯ ಹುಡುಗ

ರಂಗನಾಥ್



ಕನ್ನಡದ ಹುಡುಗನೊಬ್ಬ ವಿಶ್ವಮಟ್ಟದಲ್ಲಿ ಬೆಳೆಯುತ್ತಿರುವುದು ಕನ್ನಡಿಗರಿಗೆಲ್ಲರಿಗೂ ಸಂತಸದ ವಿಷಯ. ರಾಕಿಂಗ್ ಸ್ಟಾರ್ ಯಶ್ ನಟನೆಯ 'ಟಾಕ್ಸಿಕ್' ಕ್ರೇಜ್ ಪ್ಯಾನ್ ಇಂಡಿಯಾ ಲೆವೆಲ್‌ನಿಂದ 'ಪ್ಯಾನ್ ವರ್ಲ್ಡ್'ವರೆಗೂ ಜೋರಾಗಿದೆ. ಕಳೆದ ತಿಂಗಳು ಬಿಡುಗಡೆಯಾದ 'ಟಾಕ್ಸಿಕ್' ಚಿತ್ರದ ಒಂದೇ ಒಂದು ಟೀಸರ್ ಮಿಲಿಯನ್‌ಗಟ್ಟಲೆ ಜನ ವೀಕ್ಷಣೆ ಮಾಡಿದ್ದು ವಿಶ್ವ ಮಟ್ಟದಲ್ಲಿ ಭಾರಿ ಚರ್ಚೆಯನ್ನು ಹುಟ್ಟಾಕಿದೆ. ೨೦೨೨ರಲ್ಲಿ 'ಕೆಜಿಎಫ್ ಚಾಪ್ಟರ್ ೨' ಚಿತ್ರದ ನಂತರ 'ಕೆಜಿಎಫ್ ಚಾಪ್ಟರ್ ೩' ಮಾಡುವ ಲೆಕ್ಕಾಚಾರದಲ್ಲಿ ಯಶ್ ನಿರ್ದೇಶಕ ಪ್ರಶಾಂತ್ ನೀಲ್‌ಗಾಗಿ ಕಾದು ಕುಳಿತಿದ್ದರು. ಆದರೆ, ಪ್ರಶಾಂತ್ ನೀಲ್ ತಮ್ಮ ಮಾತೃಭಾಷೆ ತೆಲುಗಿನ ವ್ಯಾಮೋಹಕ್ಕೆ ಸಿಲುಕಿ ತೆಲುಗು ನಟರ ಚಿತ್ರಗಳನ್ನಷ್ಟೇ ಮಾಡತೊಡಗಿದರು. ತೆಲುಗಿನ ಬಾಹುಬಲಿ ಪ್ರಭಾಸ್‌ಗಾಗಿ "ಸಾಲಾರ್" ನಂಥ ಕೆಟ್ಟ ಚಿತ್ರ ನಿರ್ದೇಶಿಸಿ ತೋಪಾದ ನಂತರವೂ ಪ್ರಶಾಂತ್ ನೀಲ್ ತಮ್ಮ ತೆಲುಗು ಪ್ರೇಮ ಬಿಟ್ಟುಕೊಡಲಿಲ್ಲ. ಪ್ರಶಾಂತ್ ನೀಲ್‌ಗಾಗಿ ಕಾದು ಭ್ರಮನಿರಸನರಾದ ಯಶ್‌ಗೆ 'ಕೆಜಿಎಫ್ ಚಾಪ್ಟರ್ ೨' ಚಿತ್ರ ನಿರ್ಮಾಪಕರಾದ ಹೊಂಬಾಳೆ ಪ್ರೊಡಕ್ಷನ್‌ನ ವಿಜಯ್ ಕಿರಂಗದೂರು ಸಹ ಬೆನ್ನು ತಿರುಗಿಸಿದ್ದು ದೊಡ್ಡ ಹಿನ್ನಡೆಯಾಯಿತು. ೧೨೦೦ ಕೋಟಿ ರೂಪಾಯಿಗಳಷ್ಟು ಲಾಭ ಮಾಡಿದ 'ಕೆಜಿಎಫ್ ಚಾಪ್ಟರ್ ೨'ನಲ್ಲಿ ಲಾಭದ ಪಾಲು ಕೇಳಿದ ಯಶ್ ಬಗ್ಗೆ ನಿರ್ಮಾಪಕ ವಿಜಯ್ ಕಿರಂಗದೂರು ಅಸಮಾಧಾನಿತರಾಗಿದ್ದರಂತೆ.

ಹೀಗಾಗಿ 'ಕೆಜಿಎಫ್ ಚಾಪ್ಟರ್ ೩' ನಿರ್ಮಾಣವಾಗುವುದಿಲ್ಲ ಅನ್ನೋದನ್ನ ತಡವಾಗಿ ತಿಳಿದ ಯಶ್‌ಗೆ ಬಹಳ ನೋವಾಗಿತ್ತು. ಜೊತೆಗೆ ಅವರ ವೃತ್ತಿ ಬದುಕಿಗೇ ತೊಡಕಾಗುವಷ್ಟು ಸಮಸ್ಯೆಗಳು ಸೃಷ್ಟಿಯಾಗಿದ್ದವು. ಏಕೆಂದರೆ, 'ಕೆಜಿಎಫ್ ಚಾಪ್ಟರ್-೨' ನಂತರ ಬಂದ ಅದೆಷ್ಟೋ ಒಳ್ಳೆ ಅವಕಾಶಗಳನ್ನು ಕೈ ಚೆಲ್ಲಿ ಕೂತಿದ್ದ ಯಶ್ ಭವಿಷ್ಯದ ವೃತ್ತಿ ಬದುಕು ಡೋಲಾಯಮಾನವಾಗಿತ್ತು. ಎರಡು ವರ್ಷಗಳಿಂದ ಸುಮ್ಮನೆ ಕೂತ ಯಶ್ ಬಗ್ಗೆ ಅವರ ಮನೆಯವರಿರಲಿ, ಅಭಿಮಾನಿಗಳೇ ಬೇಸರ ಮಾಡಿಕೊಂಡಿದ್ದರು. ಚಿತ್ರರಂಗದವರಂತೂ ಯಶ್ ಸ್ಥಿತಿ ನೋಡಿ ನಗೆಯಾಡುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ಬೇರೇ ಯಾರಾದರೂ ಇದ್ದಿದ್ದರೆ, ತಲ್ಲಣಿಸಿ ಹೋಗುತ್ತಿದ್ದರು. ಆದರೆ, ಹೆಸರಿಗೆ ತಕ್ಕಂತೆ ಬಂಡೆಯAಥ ಗಟ್ಟಿ ಮನಸ್ಸು ಹೊಂದಿದ್ದ ಯಶ್ ಕೆವಿಎನ್ ಪ್ರೊಡಕ್ಷÀನ್‌ನ ವೆಂಕಟ್ ಕೆ ನಾರಾಯಣ ಅವರೊಂದಿಗೆ ಮಾತನಾಡಿ ಜಂಟಿ ನಿರ್ಮಾಪಕರಾದರು. ಕೆವಿಎನ್ ಪ್ರೊಡಕ್ಷನ್ ಮತ್ತು ತಮ್ಮದೇ ಆದ 'ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್' ಅಡಿ 'ಟಾಕ್ಸಿಕ್' ಚಿತ್ರವನ್ನು ಪ್ಯಾನ್ ಇಂಡಿಯಾ ಮಾತ್ರವಲ್ಲದೆ, "ಪ್ಯಾನ್ ವರ್ಲ್ಡ್" ಮಟ್ಟದಲ್ಲಿ ನಿರ್ಮಿಸಲು ನಿರ್ಧರಿಸಿದರು. ಚಿತ್ರಕ್ಕೆ ಮಲಯಾಳಂನ ಸೃಜನಶೀಲ ಚಿತ್ರ ನಿರ್ದೇಶಕಿ ಹಾಗೂ ರಾಷ್ಟ್ರಪ್ರಶಸ್ತಿ ವಿಜೇತ ನಟಿ ಶ್ರೀಮತಿ ಗೀತು ಮೋಹನ್‌ದಾಸ್‌ರಿಂದ ಸ್ವಾತಂತ್ರ್ಯ ಪೂರ್ವದ ಗೋವಾ ಮೂಲದ ಅಂತರರಾಷ್ಟ್ರೀಯ ಕಳ್ಳಸಾಗಾಣಿಕೆದಾರನ ಕತೆಯನ್ನು "ಟಾಕ್ಸಿಕ್" ಚಿತ್ರವಾಗಿಸಿದ್ದಾರೆ. ಚಿತ್ರದ ಮೊದಲ ಟೀಸರ್ ವಿಶ್ವಾದ್ಯಂತ ಮಿಲಿಯನ್ ಗಟ್ಟಲೆ ವೀಕ್ಷಣೆಯಾಗಿ ಭಾರಿ

**ಮಕ್ಕಳಿಗೆ ಬಾಲ್ಯದಿಂದಲೇ ತಪ್ಪುಗಳನ್ನು ಸರಿಪಡಿಸುವ ಮತ್ತು ನಿರ್ಧಾರಗಳನ್ನು ಎದುರಿಸುವ ಧೈರ್ಯವನ್ನು ಕಲಿಸಬೇಕು.**

ಯಶಸ್ಸು ಪಡೆಯಿತು.

"ಟಾಕ್ಸಿಕ್" 'ಎ ಫೇರಿ ಟೇಲ್ ಫಾರ್ ಗ್ರೋನ್-ಅಪ್ಸ್' ಎಂಬ ಉಪಶೀರ್ಷಿಕೆಯೊಂದಿಗೆ ಮಾರ್ಚ್.೧೯ ರಂದು ಗುರುವಾರ ಯುಗಾದಿ ಹಬ್ಬದಂದು ವಿಶ್ವಾದ್ಯಂತ ಬಿಡುಗಡೆಯಾಗುತ್ತಿದೆ. ಸುಮಾರು ದಾಖಲೆಯ ೬ ಸಾವಿರ ಕ್ಕೂ ಹೆಚ್ಚು ತೆರೆಗಳಲ್ಲಿ ಕಾಣಿಸಿಕೊಳ್ಳುತ್ತಿರುವ "ಟಾಕ್ಸಿಕ್" (ವಿಷಕಾರಿ) ಅಂತರರಾಷ್ಟ್ರೀಯ ಕಳ್ಳಸಾಗಾಣಿಕೆದಾರನಾದ ಗೋವಾ ಮೂಲದ ಭಾರತೀಯನೊಬ್ಬನ ಗ್ಯಾಂಗ್‌ಸ್ಟರ್ ಕತೆಯಾಗಿದೆ. ಚಿತ್ರದಲ್ಲಿ ಯಶ್ ಜೊತೆ, ಕಿಯಾರಾ ಅಡ್ವಾಣಿ , ನಯನತಾರಾ , ಹುಮಾ ಖುರೇಷಿ , ತಾರಾ ಸುತಾರಿಯಾ ಮತ್ತು ರುಕ್ಮಿಣಿ ವಸಂತ್ ರಂಥ ದೊಡ್ಡ ನಟಿಯರ ಸಾಲೇ ಇದೆ. ಚಿತ್ರಕ್ಕೆ ಛಾಯಾಗ್ರಹಣ ರಾಜೀವ್ ರವಿ, ಸಂಕಲನ ಉಜ್ವಲ್ ಕುಲಕರ್ಣಿ, ಸಂಗೀತ ರವಿ ಬಸ್ರೂರ್ ಮತ್ತು ನೃತ್ಯ ಸಂಯೋಜನೆ ಕನ್ನಡಿಗ ಇಮ್ರಾನ್ ಸರ್ಧಾರಿಯಾ ಮಾಡಿದ್ದಾರೆ. ಕನ್ನಡ ಸೇರಿದಂತೆ ಭಾರತೀಯ ಭಾಷೆಗಳಲ್ಲದೆ ಇಂಗ್ಲಿಷ್‌ನಲ್ಲೂ ಚಿತ್ರ ನಿರ್ಮಾಣವಾಗಿ, ವಿಶ್ವಾದ್ಯಂತ ಬಿಡುಗಡೆಯಾಗುತ್ತಿದೆ. ಹಾಲಿವುಡ್ ತಂತ್ರಜ್ಞಾನಕ್ಕೆ ಸಮನಾಗಿ ಚಿತ್ರಿತವಾಗಿರುವ "ಟಾಕ್ಸಿಕ್" ಚಿತ್ರ ಇತ್ತೀಚೆಗೆ ಆವಿಷ್ಕಾರಗೊಂಡ 'ಸ್ಟನ್ಸಿಸ್' ತಂತ್ರಜ್ಞಾನದಲ್ಲಿ ನಿರ್ಮಾಣವಾಗಿರುವುದು ವಿಶ್ವಾದ್ಯಂತ ಕುತೂಹಲ ಹುಟ್ಟಿಸಿದೆ.

**ಎರಡು ವರ್ಷದ ತಯಾರಿ:**

"ಟಾಕ್ಸಿಕ್" ಚಿತ್ರವನ್ನು ನಿರ್ಮಿಸಲು ಸುಮಾರು ಎರಡು ವರ್ಷ ಬೇಕಾಯಿತು. ೨೦೨೩ ರ ಡಿಸೆಂಬರ್‌ನಲ್ಲಿ 'ಯಶ್-೧೯' ಎಂಬ ತಾತ್ಕಾಲಿಕ ಶೀರ್ಷಿಕೆ ಅಡಿಯಲ್ಲಿ ಚಿತ್ರ ನಿರ್ಮಾಣವಾಯಿತು. 'ಯಶ್-೧೯' ಎಂದರೆ, ಯಶ್ ಅಭಿನಯದ ೧೯ ನೇ ಚಿತ್ರ ಎಂದರ್ಥ. ಕೆಲವು ದಿನಗಳ ನಂತರ ಅಧಿಕೃತವಾಗಿ ಚಿತ್ರದ ಹೆಸರನ್ನು "ಟಾಕ್ಸಿಕ್" ಅಂತ ಘೋಷಿಸಲಾಯಿತು. ೨೦೨೪ರ ಆಗಸ್ಟ್ ತಿಂಗಳಿಂದ ೨೦೨೫ರ ಅಕ್ಟೋಬರ್ ರವರೆಗೆ ಬೆಂಗಳೂರು, ಮುಂಬೈ, ಗೋವಾ, ತೂತುಕುಡಿ ಮತ್ತು ಜೈಪುರದಲ್ಲಿ ಚಿತ್ರೀಕರಣ ನಡೆಯಿತು. ರಾಯ್ ಪಾತ್ರದಲ್ಲಿ ಯಶ್, ನಾಡಿಯಾ ಪಾತ್ರದಲ್ಲಿ ಕಿಯಾರಾ ಅಡ್ವಾಣಿ, ಗಂಗಾ ಪಾತ್ರದಲ್ಲಿ ನಯನತಾರಾ, ಎಲಿಜಬೆತ್ ಪಾತ್ರದಲ್ಲಿ ಹುಮಾ ಖುರೇಷಿ, ರೆಬೆಕ್ಕಾ ಪಾತ್ರದಲ್ಲಿ ತಾರಾ ಸುತಾರಿಯಾ, ಮೆಲ್ಲಿಸಾ ಪಾತ್ರದಲ್ಲಿ ರುಕ್ಮಿಣಿ ವಸಂತ್ ಅಭಿನಯಿಸುತ್ತಿದ್ದಾರೆ. ಇತರೆ ಪಾತ್ರಗಳನ್ನು ಹಾಲಿವುಡ್ ಮತ್ತು ಬಾಲಿವುಡ್ ನಟರು ಮಾಡಿದ್ದಾರೆ. ಅವರಲ್ಲಿ ಟೋವಿನೋ ಥಾಮಸ್, ಅಕ್ಷಯ್ ಒಬೆರಾಯ್, ಡ್ಯಾರೆಲ್ ಡಿ'ಸಿಲ್ವಾ , ಸುದೇವ್ ನಾಯರ್, ಕೈಲ್ ಪಾಲ್, ಬೀಟ್ರಿಜ್ ಟೌಫೆನ್‌ಬಾಚ್, ಸುರ್ಜಿತ್ ಗೋಪಿನಾಥ್, ಅಮಿತ್ ತಿವಾರಿ, ಬೆನೆಡಿಕ್ಟ್ ಗ್ಯಾರೆಟ್, ಟೆಟಿಯಾನಾ ಡಾರ್ ಮತ್ತಿತರರು ಇದ್ದಾರೆ.

ವಿಶ್ವಾಸನೀಯ ಮೂಲಗಳ ಪ್ರಕಾರ ೨೦೧೮ರಲ್ಲಿ 'ಕೆ.ಜಿ.ಎಫ್-ಚಾಪ್ಟರ್-೧' ಬಿಡುಗಡೆಯಾದ ದಿನದಿಂದ ೨೦೨೩ರ ಏಪ್ರಿಲ್‌ವರೆಗೂ 'ಕೆಜಿಎಫ್-ಚಾಪ್ಟರ್-೩' ಮಾಡುವವರೆಗೂ ಹೊಂಬಾಳೆ ಫಿಲಂಸ್ ನಿರ್ಮಾಪಕ ವಿಜಯ್ ಕಿರಂಗದೂರು ಚಿತ್ರ ಮಾಡುವ ಕರಾರು ಒಪ್ಪಂದವನ್ನು ಯಶ್ ಮಾಡಿಕೊಂಡಿದ್ದರಂತೆ. ೨೦೨೨ರಲ್ಲಿ 'ಕೆ.ಜಿ.ಎಫ್-ಚಾಪ್ಟರ್-೨' ಬಿಡುಗಡೆಯಾಗಿ ಒಂದು ವರ್ಷವಾದರೂ 'ಕೆಜಿಎಫ್-ಚಾಪ್ಟರ್-೩' ಸೆಟ್ಟೇರದಿದ್ದರಿಂದ ಹೊಂಬಾಳೆ ಫಿಲಂಸ್‌ನೊಂದಿಗಿನ ಫ್ರಾಂಚೈಸಿ ರದ್ದಾಯಿತಂತೆ. ೨೦೨೩ರ ಜೂನ್ ನಂತರ ಯಶ್ ಮಲಯಾಳಂ ನಿರ್ದೇಶಕಿ ಗೀತು ಮೋಹನ್ ದಾಸ್ ನೀಡಿದ ಗೋವಾ ಮೂಲದ ಸ್ಮಗ್ಲರ್ ಒಬ್ಬನ ಕತೆಯನ್ನಾಧರಿಸಿ ಚಿತ್ರ ಮಾಡಲು ನಿರ್ಧರಿಸಿದರು. ಕ್ರಿ.ಶ.೧೯೪೦ ರಿಂದ ೧೯೭೦ರವರೆಗೆ ಬದುಕಿದ್ದ ಕುಖ್ಯಾತ ಅಂತರರಾಷ್ಟ್ರೀಯ ಕಳ್ಳಸಾಗಾಣಿಕೆದಾರನೊಬ್ಬನ ಜೀವನ ವೃತ್ತಾಂತವನ್ನಾಧರಿಸಿ "ಟಾಕ್ಸಿಕ್" ಚಿತ್ರ ನಿರ್ಮಾಣ ಯೋಜಿಸಿದರು.

**ಸಾಹಸಪ್ರಿಯರಿಗೆ ರಸದೌತಣ:**

ಹಾಲಿವುಡ್ ಮಾದರಿಯಲ್ಲಿ ಆಕ್ಷನ್ ಚಿತ್ರ ನಿರ್ಮಿಸಬೇಕೆಂದು ಯಶ್ ನಿರ್ಧರಿಸಿದ್ದರಿಂದ ಖ್ಯಾತ ಹಾಲಿವುಡ್ ಸಾಹಸ ನಿರ್ದೇಶಕ ಜೆಜೆ ಪೆರ್ರಿ ಅವರನ್ನು ಸಂಪರ್ಕಿಸಿದರು. ಆಗಲೇ ಯಶ್ ಹೊಸ ಚಿತ್ರ ಬರುತ್ತಿದೆ ಎಂಬುದು ಜಗತ್ತಿಗೆ ಗೊತ್ತಾಗಿದ್ದು, ಹಾಲಿವುಡ್‌ನ ಸೂಪರ್ ಹಿಟ್ ಚಿತ್ರಗಳಾದ 'ಜಾನ್ ವಿಕ್' 'ಫಾಸ್ಟ್ ಅಂಡ್ ಫ್ಯೂರಿಯಸ್' ಚಿತ್ರಗಳ ಸಾಹಸ

29 ನೇ ಪುಟಕ್ಕೆ



ನಾಡು-ನುಡಿ-ನೆಲ-ಜಲ ರಕ್ಷಣೆ ವಿಷಯದಲ್ಲಿ ಹಿಂದುಳಿದಿರುವ ಕನ್ನಡಿಗರ ರಕ್ಷಣೆಗೆ ನಿಜಾರ್ಥದಲ್ಲಿ ರಕ್ಷಣಾ ವೇದಿಕೆ ನಿರ್ಮಿಸಲು 'ಕರವೇ ' ಡಿಜಿಟಲ್ ಚಾನೆಲ್ ಶ್ರಮಿಸಲಿದೆ.

10ನೇ ಪುಟದಿಂದ

## ಸಿದ್ದು-ಡಿಕೆ ಸಂಘರ್ಷ ಮಿತ್ರಕೂಟಕ್ಕೆ ಹರ್ಷ

ಅಂದ ಹಾಗೆ ದೇವರಾಜ ಅರಸರನ್ನು ಬಲವಂತವಾಗಿ ಇಳಿಸಿದ ಪರಿಣಾಮವಾಗಿ ೧೯೮೩ ರ ವಿಧಾನಸಭಾ ಚುನಾವಣೆಯಲ್ಲಿ ಜನತಾ ಪರಿವಾರ ಅಧಿಕಾರಕ್ಕೆ ಬಂತು.೧೯೯೦ ರಲ್ಲಿ ವೀರೇಂದ್ರಪಾಟೀಲ್ ಮತ್ತು ೧೯೯೨ ರಲ್ಲಿ ಎಸ್.ಬಂಗಾರಪ್ಪ ಅವರನ್ನು ಕೆಳಗಳಿಸಿದ ಪರಿಣಾಮವಾಗಿ ೧೯೯೪ ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯ ಸ್ಥಿತಿಗೆ ತಲುಪಿತು.

ಈಗ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಬಲವಂತವಾಗಿ ಅಲ್ಲ,ಮನ ಒಲಿಸಿ ಕೆಳಗಿಳಿಸಿದರೂ ಅಹಿಂದ ವರ್ಗಗಳ ಮತ ಬ್ಯಾಂಕ್ ಛಿದ್ರವಾಗುತ್ತದೆ ಮತ್ತು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದುರ್ಗತಿ ಬರುತ್ತದೆ ಎಂಬುದು ರಾಹುಲ್ ಗಾಂಧಿಯವರ ಆತಂಕ.

ಹೀಗಾಗಿ ಅವರು ಏನೇ ಮಾಡಿದರೂ ಡಿ.ಕೆ.ಶಿವಕುಮಾರ್ ಅವರ ಬಳಿ ಯಾವ ಭರವಸೆಯ ಮಾತುಗಳನ್ನೂ ಆಡುತ್ತಿಲ್ಲ.ಬಹಿರಂಗವಾಗಿ ಈ ವಿಷಯದಲ್ಲಿ ಏನು ಮಾತನಾಡದಿದ್ದರೂ, ಅವರ ಪಕ್ಕದಲ್ಲಿರುವ ನಾಯಕರಿಂದ ಬರುತ್ತಿರುವ ವರ್ತಮಾನವೆಂದರೆ ,ಮಾರ್ಚ್ ತಿಂಗಳಲ್ಲಿ ಸಿದ್ಧರಾಮಯ್ಯನವರು ಬಜೆಟ್ ಮಂಡಿಸುತ್ತಾರೆ, ಇದಾದ ನಂತರ ಏಪ್ರಿಲ್-ಮೇ ತಿಂಗಳಲ್ಲಿ ಕೇರಳ,ತಮಿಳುನಾಡು,ಪಶ್ಚಿಮ ಬಂಗಾಳ, ಅಸ್ಸಾಂ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಈ ಚುನಾವಣೆಗಳು ಮುಗಿಯುವ ಹೊತ್ತಿಗೆ ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆ ಮತ್ತು ವಿಧಾನಪರಿಷತ್ತಿನ ಹಲವು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಹೀಗೆ ಒಂದರ ಹಿಂದೊಂದರಂತೆ ಯುದ್ಧಗಳು ನಡೆಯುವಾಗ ರಾಜನನ್ನೇ ಕೆಳಗಿಳಿಸಿದರೆ ಪರಿಣಾಮವೇನು?ಎಂಬುದು ರಾಹುಲ್ ಗಾಂಧಿಯವರ ಆತಂಕ.

ಹೀಗಾಗಿ ಅವರು ಡಿ.ಕೆ.ಶಿವಕುಮಾರ್ ಅವರು ಏನೇ ಹೇಳಲು ಬಯಸಿದರೂ ಅದಕ್ಕೆ ಕಿವಿ ಕೊಡುವ ಸ್ಥಿತಿಯಲ್ಲಿಲ್ಲ. ಇತ್ತೀಚೆಗೆ ಒಂದು ಭೇಟಿ ನಡೆದರೂ ಈ ವಿಷಯದಲ್ಲಿ ಅಧಿಕೃತವಾಗಿ ಅವರು ಭರವಸೆ ನೀಡಿಲ್ಲ.ಡಿ.ಕೆ.ಶಿವಕುಮಾರ್ ಅವರ ಸಮೀಪವರ್ತಿ ಮೂಲಗಳ ಪ್ರಕಾರ,ಅಧಿಕಾರ ಹಂಚಿಕೆಯ ವಿಷಯದಲ್ಲಿ ಸಿದ್ಧರಾಮಯ್ಯ ಅವರನ್ನು ಕರೆಸಿ ಮಾತನಾಡುವುದಾಗಿ ರಾಹುಲ್ ಗಾಂಧಿ ಹೇಳಿದ್ದಾರೆ.ಆದರೆ ಸಿದ್ಧರಾಮಯ್ಯ ಅವರ ಸಮೀಪವರ್ತಿಗಳ ಪ್ರಕಾರ,ದೆಹಲಿಯ ಜನಪಥ್ ನಿವಾಸದಲ್ಲಿ ಡಿ.ಕೆ.ಶಿವಕುಮಾರ್ ಅವರು ವರಿಷ್ಟರಿಂದ ಯಾವ ಭರವಸೆಯನ್ನೂ ಪಡೆದು ಬಂದಿಲ್ಲ.

ಈಗ ಬಿಜೆಪಿ-ಜೆಡಿಎಸ್ ಮಿತ್ರಕೂಟದ ನಾಯಕರ ಹರ್ಷಕ್ಕೆ ಕಾರಣವೆಂದರೆ,ಅಧಿಕಾರ ಹಂಚಿಕೆಯ ವಿಷಯದಲ್ಲಿ ಕಾಂಗ್ರೆಸ್ ಹೈಕಮಾಂಡ್ ಯಾವ ತೀರ್ಮಾನವನ್ನಾದರೂ ತೆಗೆದುಕೊಳ್ಳಲಿ. ಆದರೆ ಅದರಿಂದ ತಮಗೆ ಲಾಭ ಎಂಬ ಲೆಕ್ಕಾಚಾರ.

ಅರ್ಥಾತ್,ಇವತ್ತು ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಉಳಿಸಿಕೊಂಡರೆ ಡಿ.ಕೆ.ಶಿವಕುಮಾರ್ ಮತ್ತವರ ತಂಡ ಮೂಡಿಸುವ ಗೊಂದಲ ರಾಜ್ಯ ಕಾಂಗ್ರೆಸ್ ಬಗ್ಗೆ ಜನ ಭ್ರಮ ನಿರಸನಗೊಳ್ಳುವಂತೆ ಮಾಡುತ್ತದೆ. ಅದೇ ರೀತಿ ಸಿದ್ಧರಾಮಯ್ಯನವರನ್ನು ಕೆಳಗಿಳಿಸಿದರೂ ಅಹಿಂದ ಮತ ಬ್ಯಾಂಕ್ ಚೆದುರಿ ಹೋಗುತ್ತದೆ. ಹೀಗೆ ಚೆದುರಿ ಹೋಗುವ ಅಹಿಂದ ಮತ ಬ್ಯಾಂಕ್ ಕಾಂಗ್ರೆಸ್ ವಿರೋಧಿ ಶಕ್ತಿಗಳ ಪಾಲಿಗೆ ಬಂಪರ್ ಲಾಭ ತರುವುದು ನಿಶ್ಚಿತ.

ಹೀಗಾಗಿಯೇ ಬಿಜೆಪಿ-ಜೆಡಿಎಸ್ ಮಿತ್ರಕೂಟದ ನಾಯಕರು ಹರ್ಷಚಿತ್ತರಾಗಿದ್ದಾರೆ.ಮುಂದೇನಾಗುತ್ತದೋ ನೋಡಬೇಕು.

## ಬೆಂಗಳೂರಿಗೆ ರಿಕ್ಷಾ ಬಂದ ಕತೆ

ಮನುಷ್ಯನ ಶ್ರಮ ಕಡಿಮೆ ಮಾಡಲು ಹುಟ್ಟಿಕೊಂಡ ಮೋಟಾರು ವಾಹಕಗಳಲ್ಲಿ ಭಾರತೀಯರ ಮಟ್ಟಿಗೆ ಆಟೋ ರಿಕ್ಷಾ ಹುಟ್ಟಿದ ಹಿನ್ನೆಲೆ ರೋಚಕವಾಗಿದೆ. ಶೋಷಣೆ ಮುಕ್ತ ಸಮಾಜದ ಮೊದಲ ಹಾದಿಯಲ್ಲಿ ಸ್ವತಂತ್ರ ಭಾರತದಲ್ಲಿ ನಡೆದ ಆಟೋ ರಿಕ್ಷಾ ಕ್ರಾಂತಿ ಭಾರತೀಯರೆಂದಿಗೂ ಮರೆಯುಬಂಥದ್ದಲ್ಲ.



ಕಾಂಗ್ರೆಸ್ ಪಕ್ಷದ ಸ್ವಾತಂತ್ರ್ಯ ಹೋರಾಟಗಾರ ಎನ್.ಕೇಶವ ಅಯ್ಯಂಗಾರ್ ಬೆಂಗಳೂರಿನ ಬಳೇಪೇಟೆಯಲ್ಲಿದ್ದ ತಮ್ಮ ಮನೆಯನ್ನೇ ಕಾಂಗ್ರೆಸ್ ಕಚೇರಿಗೆ ಮುಡಿಪಾಗಿ ಕೊಟ್ಟಿದ್ದರು. ಅವರು ಬೆಂಗಳೂರಿನ ಮೇಯರ್ ಆಗಿದ್ದಾಗ, ೧೯೫೦ರ ಡಿಸೆಂಬರ್‌ನಲ್ಲಿ ಮೊದಲ ಬಾರಿ ಆಟೋ ರಿಕ್ಷಾಗಳ ಚಾಲನೆಗೆ ಹಸಿರು ನಿಶಾನೆ ನೀಡಿದ್ದರು. ಅಂದು ಬೆಂಗಳೂರಿನ ರಸ್ತೆಗಿಳಿದ ೧೦ ಆಟೋರಿಕ್ಷಾವನ್ನು ಕಾರ್ಪೊರೇಷನ್ ಬಿಲ್ಡಿಂಗ್ ಮುಂದೆ ತಾವೇ ಖುದ್ದು , ಆಟೋ ಚಾಲನೆ ಮಾಡುವ ಮೂಲಕ ಉದ್ಘಾಟಿಸಿದ್ದರು. ತಾವೇ ಆಟೋರಿಕ್ಷಾ ಓಡಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಮೇಯರ್ ಎನ್.ಕೇಶವ ಅಯ್ಯಂಗಾರ್ ಅವರು, ಹತ್ತು ಆಟೋರಿಕ್ಷಾದಲ್ಲಿ ಒಂದಾದ ಬೆಂಗಳೂರು ಮೂಲದ ಮಾಲಿಕ ಮತ್ತವನ ಇಟಲಿ ಮೂಲದ ಮಡದಿಯನ್ನು ಅವರ ಆಟೋದಲ್ಲೇ ಕೂರಿಸಿಕೊಂಡು ಬೆಂಗಳೂರು ನಗರದಲ್ಲಿ ಒಂದು ಸುತ್ತು ಚಾಲನೆ ಮಾಡಿದರು. ನಂತರ, ಬಳೆ ಪೇಟೆಯಲ್ಲಿದ್ದ ತಮ್ಮ ಮನೆಗೆ ಆ ಆಟೋದಲ್ಲೆ ದಂಪತಿಯನ್ನು ಕರೆದೊಯ್ದು ಉಪಚರಿಸಿದ್ದರು. ಆ ಕಾಲದಲ್ಲಿ ಈಗಿನಂತೆ ಯಾರದೋ ಆಟೋವನ್ನು, ಇನ್ಯಾರೋ ದಿನದ ಬಾಡಿಗೆ ಆಧಾರದ ಮೇಲೆ ಓಡಿಸುತ್ತಿರಲಿಲ್ಲ. ಆಗ ಆಟೋ ಮಾಲಿಕರೆ ಚಾಲಕರಾಗಿರುತ್ತಿದ್ದರು. ಹೀಗಾಗಿ ಆಟೋ ಚಾಲಕರೆಂದರೆ ಸ್ಥಿತಿವಂತರೆಂಬ ಅಭಿಪ್ರಾಯವಿತ್ತು. ಜನರ ಬೇಡಿಕೆ ಹೆಚ್ಚಾಗಿದ್ದರಿಂದ ಕೆಲ ವರ್ಷಗಳಲ್ಲೆ ಬೆಂಗಳೂರಿನಲ್ಲಿ ೧೦ ಆಟೋರಿಕ್ಷಾಗಳಿಂದ ೪೦ ಆಟೋರಿಕ್ಷಾಗಳಿಗೆ ಏರಿಕೆಯಾಗಿದ್ದವು. ಹಾಗೇ, ಕೆಲ ವರ್ಷಗಳಲ್ಲೆ ಹಸಿರು ಪಟ್ಟಿ ಕಪ್ಪು ಬಣ್ಣದ ಆಟೋ ರಿಕ್ಷಾ ಬಣ್ಣ , ಹಳದಿ ಪಟ್ಟಿ ಮತ್ತು ಕಪ್ಪು ಬಣ್ಣಕ್ಕೆ ಬದಲಾಗಿತ್ತು.

ಪ್ರಾಮಾಣಿಕ ಪ್ರಯತ್ನದಿಂದ ಸಾಧನೆ ಮಾಡಬಹುದು. • ಧೈರ್ಯವಿದ್ದರೆ ಸಾಧನೆ ಮಾಡುವುದು ಸುಲಭ

5ನೇ ಪುಟದಿಂದ

## ವಿದೇಶದಲ್ಲಿರುವ ಕನ್ನಡಿಗರ ರಕ್ಷಣೆಗೆ ಸರ್ಕಾರ ಮುಂದಾಗಲಿ

ಆಶಯದಂತೆ ವ್ಯಾಪಾರ ವಹಿವಾಟಿನ ವಿಷಯ ಮಾತಾಡದೆ, ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆ ಪ್ರಸ್ತಾಪಿಸಿದ್ದರು. ಇದರಿಂದ ಅಸಮಾಧಾನಿತರಾದ ಪ್ರಧಾನಿ ನರೇಂದ್ರ ಮೋದಿ, ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೋ ಜೊತೆ ಮಾತುಕತೆ ಮುಂದುವರೆಸದೆ ಅರ್ಧಕ್ಕೆ ಮೊಟಕುಗೊಳಿಸಿದ್ದರು. ಇಷ್ಟಕ್ಕೂ ಸಮಾಧಾನವಾಗದ ಪ್ರಧಾನಿ ನರೇಂದ್ರ ಮೋದಿ, ಕೆನಡಾಕ್ಕೆ ತೆರಳಬೇಕಿದ್ದ ಜಸ್ಟಿನ್ ಟ್ರೂಡೋ ವಿಮಾನ ಹಾರಾಟಕ್ಕೆ ವಿಳಂಬ ಮಾಡಿ ಆತಂಕ ಮೂಡಿಸಿದ್ದರು. ಇದು ಕೆನಡಾದ ಸಂಸತ್ತಿನಲ್ಲಿ ಪ್ರಸ್ತಾಪವಾಗಿ ಭಾರತದ ಈ ವರ್ತನೆಯನ್ನು ಖಂಡಿಸಲಾಗಿತ್ತು. ಈ ಘಟನೆ ನಂತರ ಭಾರತ ಮತ್ತು ಕೆನಡಾ ನಡುವೆ ಸಂಬಂಧ ಮತ್ತಷ್ಟು ಹದಗೆಟ್ಟು ಹೋಯಿತು.

ಹಾಗೇ ನೋಡಿದರೆ, ಸಿಖ್ ಪ್ರತ್ಯೇಕತಾವಾದ ಮೊದಲಿಗೆ ಹುಟ್ಟಿದ್ದೆ ಕೆನಡಾದಲ್ಲಿ. ಕೆನಡಾ ಪ್ರಧಾನಿಯಾಗಿದ್ದ ಜಸ್ಟಿನ್ ಟ್ರೂಡೋ ಕುಟುಂಬವೇ ಸಿಖ್ ಪ್ರತ್ಯೇಕವಾದಿಗಳ ಪರವಾಗಿ ಓಲೈಕೆ ಮಾಡುತ್ತಾ ಬಂದಿದೆ. ಜಸ್ಟಿನ್ ಟ್ರೂಡೋ ತಂದೆ ಪಿಯರೇ ಟ್ರೂಡೋ ಮೊದಲಿಗೆ ಸಿಖ್ ಉಗ್ರವಾದಕ್ಕೆ ನೀರೆರೆದು ಪೋಷಿಸಿದವರು. ೧೯೮೦ ರಿಂದ ೧೯೮೪ರವರೆಗೆ ಪ್ರಧಾನಿ ಆದಾಗಲಂತೂ, ಅಲ್ಲಿ ಹುಟ್ಟಿದ ಬಬ್ಬರ್ ಖಾಲ್ಸಾ ಎಂಬ ಉಗ್ರ ಸಂಘಟನೆ ಬೆಳೆಯಲು ಅವಕಾಶ ನೀಡಿದರು. ಇದರಿಂದ ಪಂಜಾಬ್ ೧೯೮೨ ರಿಂದ ೧೯೯೫ರವರೆಗೆ ಹಿಂಸೆಯ ದಳ್ಳುರಿಯಲ್ಲಿ ಬೆಂದಿತು. ೧೯೮೪ರ ಅಕ್ಟೋಬರ್.೩೧ರಂದು ಪ್ರಧಾನಿ ಇಂದಿರಾಗಾಂಧಿ ಹತ್ಯೆಯಾಯಿತು. ೧೯೮೫ರ ಜೂನ್.೨೩ ರಂದು ೭೪೭ ಸಂಖ್ಯೆಯ ಭಾರತೀಯ ವಿಮಾನ ಕೆನಡಾದ ಮಾಂಟ್ರಿಯಲ್‌ನಿಂದ ಹೋಗುವಾಗ ಬಾಂಬಿಟ್ಟು ೩೩೧ ಮಂದಿ ಅಮಾಯಕರನ್ನು ಕೊಲ್ಲಲಾಯಿತು. ೧೯೮೭ರಿಂದ ಪಂಜಾಬ್‌ನಲ್ಲಿ ನಡೆಯದಿದ್ದ ವಿಧಾನಸಭಾ ಚುನಾವಣೆ ೧೯೯೪ರಲ್ಲಿ ನಡೆದರೂ, ಪಂಜಾಬ್ ಮುಖ್ಯಮಂತ್ರಿಯಾದ ಬಿಯಾಂತ್ ಸಿಂಗ್ ಅವರನ್ನು ೧೯೯೫ರ ಆಗಸ್ಟ್.೩೧ರಂದು ಕಾರ್ ಬಾಂಬ್ ಮೂಲಕ ಕೊಲ್ಲಲಾಯಿತು. ಹೀಗೇ, ಎಷ್ಟೇ ಹಿಂಸಾಚಾರ ನಡೆದರೂ, ಪಂಜಾಬ್‌ನ ಸಿಖ್ ಜನ ಭಯೋತ್ಪಾದನೆಯನ್ನು ಧಿಕ್ಕರಿಸಿ ಭಾರತದ ಒಕ್ಕೂಟ ವ್ಯವಸ್ಥೆಗೆ ಹೊಂದಿಕೊಂಡರು. ಹೀಗೇ ಪಂಜಾಬ್ ನೆಮ್ಮದಿಯಾಗಿ ಇರುವಾಗ ೨೦೧೫ರಲ್ಲಿ ಕೆನಡಾದ ಪ್ರಧಾನಿಯಾದ ಜಸ್ಟಿನ್ ಟ್ರೂಡೋ ತಂದೆ ಪಿಯರೆ ಟ್ರೂಡೋರಂತೆಯೇ ಕೆನಡಾದಲ್ಲಿರುವ ಖಲಿಸ್ತಾನಿ ಉಗ್ರರಿಗೆ ಪ್ರೋತ್ಸಾಹ ಕೊಟ್ಟರು. ಇದರಿಂದ ಖಲಿಸ್ತಾನಿಗಳ ಅಟ್ಟಹಾಸ ಅಮೆರಿಕಾ, ಇಂಗ್ಲೆಂಡ್‌ವರೆಗೂ ಹರಡಿತು. ಇದರ ಬಗ್ಗೆ ಕೆನಡಾ ಸರ್ಕಾರಕ್ಕೆ ಎಷ್ಟು ಬಾರಿ ಮನವಿ ಮಾಡಿದರೂ ಕೇಳದಿದ್ದಾಗ, ಭಾರತದ ರಾ ಸಂಸ್ಥೆ ಖಲಿಸ್ತಾನಿ ನಾಯಕ ನಿಜ್ಜಾರ್‌ನನ್ನು ನಿಗ್ರಹಿಸಿತು ಅನ್ನೋ ಆರೋಪ ಮಾಡಲಾಗುತ್ತಿದೆ.

ಒಬ್ಬ ಭಯೋತ್ಪಾದಕನ ಬಗ್ಗೆ ಅನುಕಂಪ ತೋರಿಸುವ ಕೆನಡಾ ಸರ್ಕಾರ, ಅಲ್ಲಿ ವಾಸಿಸುತ್ತಿರುವ ಹಿಂದೂಗಳ ಮೇಲೆ ದೌರ್ಜನ್ಯ ನಡೆಸುತ್ತಿರುವ ಸಿಖ್ ಉಗ್ರವಾದಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ. ಈ ಕಾರಣದಿಂದಲೇ, ಕೆನಡಾದಲ್ಲಿ ಚಂದನ್ ಕುಮಾರ್ ಹತ್ಯೆಯಾಗಿದೆ. ಅತ್ತ ಅಮೆರಿಕಾದಲ್ಲೂ ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾದ ನಂತರ ಭಾರತೀಯರ ಬಗ್ಗೆ ಅಸಹನೆ ಸೃಷ್ಟಿಯಾಗಿದೆ. ಸಾಕೇತ್ ಸಾವಿನ ಹಿಂದೆ ಹಣಕಾಸಿನ ಸಮಸ್ಯೆ ಏನಾದರೂ ಇದ್ದರೆ, ಇದರ ನೇರ ಹೊಣೆಯನ್ನು ರಾಜ್ಯ ಸರ್ಕಾರ ಹೊರಬೇಕಾಗುತ್ತದೆ. ಬಿಟ್ಟಿ ಭಾಗ್ಯಗಳಿಗಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಸ್ಕಾಲರ್‌ಷಿಪ್ ಮತ್ತಿತರ ಧನ ಸಹಾಯ ನಿಲ್ಲಿಸಿರುವ ಸಿದ್ದರಾಮಯ್ಯ ಸರ್ಕಾರ ಪ್ರತಿಭಾವಂತರ ಉನ್ನತ ಭವಿಷ್ಯಕ್ಕೆ ಕಲ್ಲು ಹಾಕಿದೆ. ಸಾಕೇತ್ ಸಾವು ಆತ್ಮಹತ್ಯೆಯೋ ಅಥವ ಕೊಲೆಯೋ ಎಂಬ ಬಗ್ಗೆ ಸರಿಯಾದ ಮಾಹಿತಿ ಹೊರಬರಬೇಕಾದರೆ ಆತನ ರೂಮೇಟ್ ಆಗಿದ್ದ ಬನೀತ್ ಸಿಂಗ್ ಎಂಬ ಸಿಖ್ ವಿದ್ಯಾರ್ಥಿ ವಿಚಾರಣೆ ನಡೆಸಿದರೆ ಹೆಚ್ಚಿನ ವಿವರ ತಿಳಿಯಬಹುದು. ಒಟ್ಟಾರೆ, ಚಂದನ್‌ಕುಮಾರ್ ಮತ್ತು ಸಾಕೇತ್ ಸಾವಿನ ಹಿಂದಿನ ಸತ್ಯ ಹೊರಬರಲು ಕರ್ನಾಟಕ ಸರ್ಕಾರವು ಭಾರತ ಸರ್ಕಾರದ ಮೂಲಕ ಕೆನಡಾ ಹಾಗೂ ಅಮೆರಿಕಾ ಸರ್ಕಾರದ ಮೇಲೆ ನಿರಂತರ ಒತ್ತಡ ತರಬೇಕು. ಆ ಮೂಲಕ ಪ್ರತಿಭಾವಂತ ಕನ್ನಡಿಗರ ಸಾವಿಗೆ ನ್ಯಾಯದೊರಕಿಸಿಕೊಡಬೇಕು. ■

Statement about ownership and other particulars of
**'KARNATAKA RAKSHNAA VEDIKE'** monthly, Bangalore
as required under Rule 8 of the Registration of Newspapers.
(Central) Rules,1956.

**FORM -IV (See Rule 8)**

| | |
|---|---|
| 1. Place of Publication | : Bangalore |
| 2. Periodicity of publication | : Kannada Monthly |
| 3. Printer's Name | : KA.NA.CHANDRA SHEKAR |
| Whether Citizen of India | : Yes |
| Addres | : No.1673/A, 2nd Cross, Prakashnagar, Rajajinagar, Bangalore-560 021 |
| 4. Publisher's Name | : KA.NA.CHANDRA SHEKAR |
| Whether Citizen of India | : Yes |
| Address | : No.1673/A, 2nd Cross, Prakashnagar, Rajajinagar, Bangalore-560 021 |
| 5. Editor's Name | : KA.NA.CHANDRA SHEKAR |
| Whether Citizen of India | : Yes |
| Address | : No.1673/A, 2nd Cross, Prakashnagar, Rajajinagar, Bangalore-560 021 |

I, KA.NA. Chandrashekar, hereby declare that the particulars given above are true to the best of my knowledge and behalf.

**Date- 01/03/2026** Sd/-
**KA.NA.CHANDRA SHEKAR**

ಆರಾಮದಿಂದ ಹೊರಬಂದು ಅನಿರೀಕ್ಷಿತ ಪರಿಸ್ಥಿತಿಗಳನ್ನು ಎದುರಿಸುವುದೇ ನಿಜವಾದ ದೃಢ ಹೆಜ್ಜೆ

ಒಳಬಗೆಯ ಪಿಸುಮಾತು

pisumathu@gmail.com

# ಕನ್ನಡಿಗರು ಕಳೆದುಕೊಂಡ ಕನ್ನಡ-೨

● ಶ್ರೀಪತಿ ಗೋಗಡಿಗೆ

ಒಂದು ನುಡಿಯ ಬೆಳವಣಿಗೆಯಲ್ಲಿ ಯಾವ ಯಾವ ತುಂಡುಗಳು ಕಯ್ಯಾಡಿಸುತ್ತವೆ ಎಂಬುದರ ಬಗ್ಗೆ ಈ ಹೊತ್ತಿನ ಕನ್ನಡ ನುಡಿಯರಿಗರಾದ ಶಂಕರ ಬಟ್ ಅವರು ತಮ್ಮ ಹೊತ್ತಗೆಗಳಲ್ಲಿ ತುಂಬಾ ಹರವಿನಲ್ಲಿ ಬಿಡಿಸಿ ತಿಳಿಸಿ ಕೊಟ್ಟಿದ್ದಾರೆ. ಅವುಗಳನ್ನಿಲ್ಲಿ ನಾವು ಕೊಂಚ ಒರೆಗೆ ಹಚ್ಚಿ ನೋಡಿದರೆ ನಮ್ಮ ನುಡಿಯಾದ ಕನ್ನಡವು ಸರಿಯಾದ ಬೆಳವಣಿಗೆಯ ದಾರಿಯನ್ನು ಹಿಡಿದಿದೆಯೇ? ಇಲ್ಲವೇ ಬೀಳುವಣಿಗೆಯ ದಾರಿ ಹಿಡಿದಿದೆಯೇ? ಅನ್ನುವ ಬಗ್ಗೆ ತಿಳುವಳಿಕೆ ಮೂಡಬಹುದು.

ಒಂದು ನುಡಿಯ ಉಳಿವು ಹಾಗೂ ಬೆಳವಣಿಗೆಗೆ ಆಡಳಿತದ ಒತ್ತಾಸೆ ತುಂಬಾ ಬೇಕಾದುದು ಅನ್ನುವುದನ್ನು ಈ ಹಿಂದಿನ ನನ್ನ ಬರಹದಲ್ಲೇ ನೋಡಿದ್ದೇವೆ. ಅದನ್ನು ಹೊರತು ಪಡಿಸಿದರೆ ಬೇರೆ ಯಾವೆಲ್ಲಾ ತುಂಡುಗಳು ನುಡಿಯ ಬೆಳವಣಿಗೆಗೆ ಬೇಕಾಗುತ್ತವೆ ಎಂಬುದರ ಬಗ್ಗೆ ಗಮನ ಹರಿಸೋಣ.

ಯಾವುದೇ ನುಡಿಯು ಯಾವುದೇ ಹೊತ್ತಿನಲ್ಲಿ ತುಂಬಿದ ನುಡಿಯಾಗಿ ಇರಬಾರದು. ಒಂದು ವೇಳೆ ಹಾಗೆ ಅದು ತಾನು ಎಲ್ಲವನ್ನೂ ತುಂಬಿಕೊಂಡ ನುಡಿ, ಇನ್ನೂ ಇದರೊಳಗೆ ಏನೂ ಮಾರ್ಪಾಡು ಮಾಡಬಾರದು ಎಂದುಕೊಂಡರೆ ಆ ನುಡಿಯು ಅಲ್ಲಿಗೆ ಕೊನೆಯಾಗುತ್ತದೆ. ಅದರ ಮುಂದಿನ ಪೀಳಿಗೆಯ ಮಂದಿ ಅದನ್ನು ಬಳಸಲು ಹಿಂದೇಟು ಹಾಕತೊಡಗುತ್ತಾರೆ. ಏಕೆಂದರೆ ಅದು ಆ ಹೊಸ ಪೀಳಿಗೆಯ ಹೊತ್ತಿಗೆ ತಕ್ಕುದಾದ ನುಡಿಯಾಗಿ ಮಾರ್ಪಾಡು ಹೊಂದಿರುವುದಿಲ್ಲ. ಮತ್ತೆ ಇದಕ್ಕೆ ಎತ್ತುಗೆಯಾಗಿ ಸಂಸ್ಕೃತವನ್ನೇ ಹೇಳಬೇಕಾಗುತ್ತದೆ! ಅದು ಹೊತ್ತಿಗೆ ತಕ್ಕಂತೆ ಮಾರ್ಪಾಡು ಹೊಂದದೇ ಹೋದ ಸಲುವಾಗಿಯೇ ಮಂದಿಯ ಬಳಕೆಯಿಂದ ತೆರವಾಯಿತು. ಆದರೆ ಹೊತ್ತು ಹೊತ್ತಿಗೆ ಮಾರ್ಪಾಡನ್ನು ಅಳವಡಿಸಿಕೊಂಡ ಕನ್ನಡದಂತಹ ನುಡಿಗಳು ಇಂದಿಗೂ ಮಂದಿ ಬಳಕೆಯಲ್ಲಿ ಗಟ್ಟಿಯಾಗಿ ನಿಂತುಕೊಂಡಿವೆ. ಇದರಿಂದ ತಿಳಿಯುವುದೇನೆಂದರೆ ಒಂದು ನುಡಿಯ ಉಳಿಯುವಿಕೆಯಲ್ಲಿ ಹೊತ್ತಿಗೆ ತಕ್ಕಂತೆ ತನ್ನನ್ನು ಅಣಿಗೊಳಿಸಿಕೊಳ್ಳುವುದು ತುಂಬಾ ಬೇಕಾದ ತುಂಡಾಗಿದೆ ಅನ್ನುವುದು. ಆದರೆ ಕನ್ನಡದ ಮಟ್ಟಿಗೆ ಹೇಳುವುದಾದರೆ ಹೊತ್ತಿಗೆ ತಕ್ಕ ಅಣಿಗೊಳಿಸಿಕೊಳ್ಳುವಿಕೆ ಹಾಗೂ ಮಾರ್ಪಾಡಿನ ನಡೆಯಲ್ಲಿ ಕೆಲವೊಂದು ಎಡವಟ್ಟುಗಳು ನಡೆದು ಹೋಗಿರುವುದರಿಂದಾಗಿ, ನಾವೀಗ ಅದರ ಬಗ್ಗೆ ಬಗೆಯಿಸಿ ಸರಿಪಡಿಸಿಕೊಳ್ಳಲೇ ಬೇಕಾದ ಬೇಕಾಗಿಕೆ ಏರ್ಪಟ್ಟಿದೆ.

ಕನ್ನಡವು ಹೊತ್ತು ಹೊತ್ತಿಗೆ ಸರಿಯಾಗಿ ತನ್ನನ್ನು ಮಾರ್ಪಾಡು ಮಾಡಿಕೊಂಡಿರುವುದೇನೋ ಸರಿ. ಆದರೆ ಅದು ಸರಿಯಾದ ಬಗೆಯಲ್ಲಿ ನಡೆದಿದೆಯೇ ಅಂದರೆ ಇಲ್ಲ! ಆದರೆ ಈ ತಪ್ಪಾದ ನಡೆಯು ಇಂದು ನಿನ್ನೆಯದಲ್ಲ, ನೂರಾರು ಏಡುಗಳ ಹಿಂದೆಯೇ ಈ ನಾಡಿಗೆ ವಯಿದಿಕರ ಬರುವಿಕೆಯೊಂದಿಗೇ ತೊಡಗಿಕೊಂಡಿದ್ದಿರಬೇಕು ಅನ್ನುವುದು ನಮ್ಮ ಹಳೆಯ ಕನ್ನಡ ನಲ್ಬರಹಗಳನ್ನು ನೋಡಿದರೆ ಗೊತ್ತಾಗುತ್ತದೆ. ಅದಕ್ಕಾಗಿಯೇ ಒಂಬತ್ತನೇ ನೂರೇಡಿನ ಶ್ರೀವಿಜಯನು ತನ್ನ 'ಕವಿರಾಜ ಮಾರ್ಗಂ' ಹೊತ್ತಗೆಯಲ್ಲಿ ಈ ಬಗ್ಗೆ ಹಲವಾರು ಎಚ್ಚರಿಕೆಗಳನ್ನು ಕೊಟ್ಟಿದ್ದಾನೆ. ಸಂಸ್ಕೃತವು ಹಾಡುಗೆ ಬರೆಯಲು ತಕ್ಕುದಾದ ನುಡಿಯಾದುದರಿಂದ, ಅದನ್ನು ನಮ್ಮ ಹಾಡಿಕೆಯ ಬೇಕಿಗೆಗೆ ತಕ್ಕಂತೆ ಬಳಸಿಕೊಳ್ಳಬೇಕೇ ಹೊರತಾಗಿ ಎಗ್ಗು ಸಿಗ್ಗಿಲ್ಲದೇ ಸಕ್ಕವನ್ನೂ ಬಳಸಬಾರದು ಅನ್ನುವುದನ್ನು ಅವನು ತಿಳಿಸಿದ್ದಾನೆ. ಸರಿಯಾದ ಬಗೆಯಲ್ಲಿ ಬಳಸಿದರೆ ಮದ್ದಳೆಯ ಸಪ್ಪಳದಂತೆ ಸೊಗಸಾಗಿರುತ್ತದೆಯಲ್ಲದೆ, ತಪ್ಪಾಗಿ ಬಳಸಿದರೆ ಕರಡಿಗೆಯೊಳಗೆ ಕಲ್ಲು ಹಾಕಿ ಅಡಿಸಿದಂತೆ ಕೀರಲು ಸಪ್ಪಳವಾಗುತ್ತದೆ ಎಂದೂ ಎಚ್ಚರಿಸಿದ್ದಾನೆ. 'ಸಕ್ಕವನ್ನೂ ಬೇಕಾದಲ್ಲಿ ಅಷ್ಟೇ ಬಳಸಿಕೊಳ್ಳಬೇಕು' ಎಂದು ವಿಜಯನು ಹೇಳಿದ್ದು ಹಾಡಿಕೆಯ ಕುರಿತಾಗಿ ಅಷ್ಟೇ ಹೊರತೂ ಬೇರೆ ಬರಹಗಳಿಗೊ, ಮಾತಿಗೊ ಅಲ್ಲ. ಆದರೆ ಮುಂದೆ ನಾವು ಮಾಡಿಕೊಂಡಿದ್ದು ಏನು? ಬೇಕಿರಲಿ, ಬೇಡದಿರಲಿ ಎಲ್ಲೆಂದರಲ್ಲಿ ಸಕ್ಕವನ್ನ ತಂದು ತುರುಕಿಕೊಂಡೇ ಬಂದಿದ್ದೇವೆ.

ಶ್ರೀವಿಜಯನ ಮಾತನ್ನು ಯಾರೂ ಕೇಳಲಿಲ್ಲ, ಆಂಡಯ್ಯನ ಹೊರತಾಗಿ! ನುಡಿಯೆಂದರೆ ಹಾಡುಗೆಯಲ್ಲ, ನಲ್ಬರಹಗಳಲ್ಲ.. ಮಾತು! ಆದರೆ ಅಂದು ನಲ್ಬರಹಗಳಲ್ಲಿ ತೂರಿಕೊಳಲು ತೊಡಗಿದ ಸಕ್ಕವು ಇಂದು ನಮ್ಮ ಮಾತಿನಲ್ಲೂ ಬೆರೆತುಕೊಂಡಿದೆ. ಹಳ್ಳಿಗರ ಮಾತಿನಲ್ಲಿ ಅಷ್ಟೊಂದು ಹೆರನುಡಿಯ ಒರೆಗಳು ಇಲ್ಲದಿದ್ದರೂ ಕಲಿತವರ ಬಾಯಲ್ಲಿ ಇವು ಹೆಚ್ಚಾಗಿ ತೂರಿಕೊಳ್ಳುತ್ತಿವೆ.

ಹಾಗೆಯೇ ಒಂದು ಬರಹವು ತುಂಬಾ ಮೇಲ್ಮಟ್ಟದ್ದಾಗಿ ತೋರಬೇಕು ಅಂದರೆ ಅದರಲ್ಲಿ ಸಕ್ಕದ ಒರೆಗಳು ಹೆಚ್ಚಾಗಿ ಇರಬೇಕು ಅನ್ನುವ ಒಂದು ಕುರುಡು ನಂಬಿಕೆಯೂ ಹುಟ್ಟಿಕೊಂಡಿದೆ. ಇದರಿಂದಾಗಿಯೂ ಏನೋ ನಮ್ಮ ದೊಡ್ಡ ದೊಡ್ಡ ನಲ್ಬರೆಹಗರು ಕೂಡ ತಮ್ಮ ನಲ್ಬರಹಗಳಲ್ಲಿ ಹೆಚ್ಚು

ಪರಿಸ್ಥಿತಿಯನ್ನು ಎದುರಿಸುವ ಆತ್ಮಸ್ಥೈರ್ಯವೇ ಮಾನವರ ಅತ್ಯಂತ ಶ್ರೇಷ್ಠ ಗುಣ

ಹೆಚ್ಚಾಗಿ ಸಕ್ಕದ ಒರೆಗಳನ್ನು ತುಂಬಲು ತುಂಬಾ ಬಯಸುತ್ತಾರೆ. ಕೆಲವರ ಬರಹಗಳಂತೂ ಅವು ಕನ್ನಡ ಬರಿಗೆಯಲ್ಲಿ ಇರುವ ಸಲುವಾಗಿಯಷ್ಟೇ ಕನ್ನಡದ್ದು ಅನ್ನಿಸಿಕೊಳ್ಳುತ್ತವೆ ಹೊರತಾಗಿ, ಅವುಗಳಲ್ಲಿ ಹೆಚ್ಚಿನವು ಸಕ್ಕದ ಒರೆಗಳೇ ತುಂಬಿರುತ್ತವೆ! ಎತ್ತುಗೆಗೆ ಈ ಕೆಳಗಿನ ನಮ್ಮ ಅರಕಟ್ಟಳೆಯ ಒಂದು ನುಡಿಗಡಣವನ್ನು ಗಮನಿಸಿ:

"ಪರಂತು, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಂಡ ಸಮಯದಲ್ಲಿ ಅವನಿಗೆ ಭಾರತ ಸರ್ಕಾರದ ಅಥವಾ ಅದರ ಯಾವುದೇ ಪೂರ್ವವರ್ತಿ ಸರ್ಕಾರಗಳ ಅಧೀನದಲ್ಲಿ ಅಥವಾ ಒಂದು ರಾಜ್ಯ ಸರ್ಕಾರದ ಅಥವಾ ಅದರ ಯಾವುದೇ ಪೂರ್ವವರ್ತಿ ಸರ್ಕಾರಗಳ ಅಧೀನದಲ್ಲಿ ಹಿಂದಿನ ಯಾವುದೇ ಸೇವೆಗೆ ಸಂಬಂಧಿಸಿದಂತೆ ನಿವೃತ್ತಿ ವೇತನವನ್ನು (ಅಸಮರ್ಥತೆಯ ಅಥವಾ ಗಾಯದ ನಿವೃತ್ತಿ ವೇತನವನ್ನು ಹೊರತುಪಡಿಸಿ) ಪಡೆಯುತ್ತಿದ್ದರೆ, ಉಚ್ಚ ನ್ಯಾಯಾಲಯದಲ್ಲಿನ ಸೇವೆಗೆ ಸಂಬಂಧಿಸಿದಂತೆ ಅವನ ಸಂಬಳದಲ್ಲಿ ಈ ಕೆಳಕಂಡವುಗಳನ್ನು ಕಳೆಯತಕ್ಕದ್ದು."

೪೭ ಒರೆಗಳಿರುವ ಈ ಪುಟ್ಟ ನುಡಿಗಡಣದಲ್ಲಿ ಒಟ್ಟು ೩೨ ಸಕ್ಕದ ಇಲ್ಲವೇ ಕನ್ನಡದ್ದಲ್ಲದ ಒರೆಗಳಿವೆ! ಅಂದರೆ ನೂರಕ್ಕೆ ೬೦% ಕ್ಕಿಂತಲೂ ಕನ್ನಡದ್ದಲ್ಲದ ಒರೆಗಳೇ! ನೀವು ನಮ್ಮ ಅರಕಟ್ಟಳೆಯ ಇಡೀ ಹೊತ್ತಗೆಯನ್ನು ನೋಡಿದರೂ ಅದು ಇದೇ ಬಗೆಯಲ್ಲೇ ಇರುವುದು. ಇದೊಂದೇ ಅಲ್ಲದೇ ಆಡಳಿತದ ಬರವಣಿಗೆಗಳು ಹೆಚ್ಚಿನದಾಗಿ ಇದೇ ಬಗೆಯಲ್ಲೇ ಇರುತ್ತವೆ. ಹೀಗಿದ್ದಾಗ್ಯೂ ನಮಗೆ ಏನೂ ಅನ್ನಿಸುವುದಿಲ್ಲ! ಅದೆಲ್ಲವೂ ಕನ್ನಡವೇ ಅಂದುಕೊಂಡು ಒಪ್ಪಿಕೊಳ್ಳುತ್ತೇವೆ. ಆದರೆ ಇದಕ್ಕಿಂತ ಪೆದ್ದುತನ ಮತ್ತೊಂದಿದೆಯೇ? ಯಾವುದೋ ನುಡಿಯ ಒರೆಗಳನ್ನು ಕನ್ನಡದ ಹೆಸರಲ್ಲಿ ಕನ್ನಡ ಬರಿಗೆಗಳಲ್ಲಿ ಬರೆದೊಡನೆಯೇ ಅವು ಕನ್ನಡವಾಗಿ ಬಿಡುತ್ತವೆಯೇ?

**ಬೇರೆ ನುಡಿಯ ಒಂದಿಶ್ಟು ಒರೆಗಳು ಇದ್ದರೆ ತಪ್ಪೇನು?**

'ಆಂಗ್ಲದಲ್ಲಿ ಕೂಡ ನೂರಾರು ಹೆರನುಡಿಯ ಒರೆಗಳು ಸೇರಿಕೊಂಡಿಲ್ಲವೇ?' ಎಂದೂ ಕೇಳಬಹುದು. ಯಾವುದೇ ನುಡಿಯಲ್ಲಿ ಹೆರನುಡಿಯ ಒರೆಗಳು ಬೆರಕೆಯಾದರೆ ತಪ್ಪೇನೂ ಇಲ್ಲ. ಆದರೆ ಯಾವ ಒರೆಗಳನ್ನು ಯಾವ ನುಡಿಯಿಂದ ಬೆರಕೆ ಮಾಡಿಕೊಳ್ಳಬೇಕು ಅನ್ನುವುದನ್ನೂ ಗಮನಿಸಬೇಕಾಗಿದೆ. ಆಂಗ್ಲದಲ್ಲಿ ಸೇರಿಕೊಂಡಿರುವ ಹೆರನುಡಿಯ ಒರೆಗಳಲ್ಲಿ ಹೆಚ್ಚಿನವು ಅದೇ ನುಡಿಗುಂಪಿನ ಅಂದರೆ 'ಇಂಡೋ ಯೂರೋಪಿಯನ್' ನುಡಿ ಗುಂಪಿನಿಂದಲೇ ತನಗೆ ಬೇಕಾದ ಒರೆಗಳನ್ನು ಪಡೆದುಕೊಂಡಿದೆ ಹೊರತಾಗಿ ಬೇರೆ ನುಡಿಗುಂಪಿನಿಂದಲ್ಲ! ಬೇರೆ ನುಡಿಗುಂಪಿನಿಂದ (ನಮ್ಮ ಇಡ್ಲಿ , ದೋಸೆಯೂ ಸೇರಿ) ಪಡೆದುಕೊಂಡ ಒರೆಗಳ ಎಣಿಗೆ ತುಂಬಾ ಕಡಿಮೆ. ಆಂಗ್ಲದವರಿಗೆ ಒಂದು ಹೊಸ ಒರೆಯು ಬೇಕಾಯ್ತೆಂದರೆ ಅವರು ಮೊದಲು ಹುಡುಕುವುದು ಅವರದೇ ನುಡಿಗುಂಪಿನ ಲ್ಯಾಟಿನ್, ಜರ್ಮನ್, ಗ್ರೀಕ್ ಮೊದಲಾದ ನುಡಿಗಳಲ್ಲಿಯೇ ಹೊರತಾಗಿ ಕನ್ನಡದಲ್ಲೋ, ತಮಿಳಿನಲ್ಲೋ ಅಲ್ಲ. ಅದಕ್ಕೂ ಮಿಗಿಲಾಗಿ ಅವರು ತಮಗೆ ಬೇಕಾದ ಹೊಸ ಒರೆಗಳನ್ನು ತಮ್ಮ ನುಡಿಯಲ್ಲೇ ಕಟ್ಟಿಕೊಳ್ಳಲು ಮುಂದಾಗುತ್ತಾರೆ.

**ಒರೆತಿಳಿಕೆ:**

ಆಡಳಿತ – ಸರ್ಕಾರ
ಆಳ್ಮೆಗ – ರಾಜಕಾರಣಿ
ಎತ್ತುಗೆ – ಉದಾಹರಣೆ
ಎಡೆಪಾಲು – Region ಏಡು – ವರ್ಷ
ಒಕ್ಕೂಟದಾಳ್ವಿಕೆ – ಕೇಂದ್ರ ಸರ್ಕಾರ
ಒತ್ತುಬರಿಗೆ – ಒತ್ತಕ್ಷರ
ಒರೆ – ಪದ, ಶಬ್ದ
ಒರೆತಿಳಿಕೆ – ಶಬ್ದಾರ್ಥ
ಕಂದಮಿಳು – ದ್ರಾವಿಡ
ಕೆಲಸಮನೆ – ಕಚೇರಿ
ಕೇಳ್ವಿ – ಪ್ರಶ್ನೆ
ಗುರ್ತಿಟ – ಲಾಂಛನ
ತುಂಡು – ಅಂಶ
ತೆರವು – ದೂರ
ದೊರೆತ – ಪರಿಣಾಮ, ಫಲಿತಾಂಶ
ನಲ್ಬರಹ – ಸಾಹಿತ್ಯ
ನಲ್ಬರೆಗ – ಸಾಹಿತಿ
ನಾಡಳಿತ – ರಾಜ್ಯ ಸರ್ಕಾರ
ನುಡಿಗಡಣ – Paragraph
ನೂರೇಡು – ಶತಮಾನ
ನೆಲತರಳೆ – ಪ್ರಪಂಚ
ನೆಲೆಪಾಡು – ಪರಿಸ್ಥಿತಿ
ಪದನೆರಕೆ – ಶಬ್ದಕೋಶ
ಪೇರಿಕೆ – ಪಟ್ಟಿ
ಬಗೆಯರಿಕೆ – ಮನವರಿಕೆ
ಬಗೆಯಿಸಿ – ಯೋಚಿಸಿ
ಬರಿಗೆ – ಅಕ್ಷರ
ಬರೆಗ – ಲೇಖಕ
ಬಾನೋಡ – ವಿಮಾನ
ಬೇಕಾಗಿಕೆ – ಅನಿವಾರ್ಯತೆ
ಬೇರ್ಮೆ – ಭಿನ್ನತೆ, ವ್ಯತ್ಯಾಸ
ಮಾಟನುಡಿ – ಮಂತ್ರ
ಮಾರಾಗಿ – ಬದಲಾಗಿ
ಮುಡಿ – ಮಿಲಿಯನ್
ಮೊಗಸು – ಪ್ರಯತ್ನ
ಸಕ್ಕ – ಸಂಸ್ಕೃತ
ಸುತ್ತೆಡೆ – ಪ್ರದೇಶ
ಸುಳು – ಸುಲಭ
ಹಣಮನೆ – ಬ್ಯಾಂಕ್
ಹನ್ನೂರು – ಸಾವಿರ
ಹನ್ನೂರಾರು – ಸಾವಿರಾರು
ಹಾಡುಗೆ – ಕಾವ್ಯ
ಹೆರನುಡಿ – ಅನ್ಯಭಾಷೆ
ಹೊತ್ತು – ಕಾಲ
ಹೊದ್ದಿಗೆ – ಅಂಚಿಗೆ


ಜೀವನದಲ್ಲಿ ಯಾವುದೇ ಕಷ್ಟ ಬಂದರೂ ಧೈರ್ಯ ಮಾತ್ರ ಕಳೆದುಕೊಳ್ಳಬಾರದು

11ನೇ ಪುಟದಿಂದ

# ಪ್ರಶಸ್ತಿ ಪುರಸ್ಕಾರಗಳ ಸಾಂಸ್ಕೃತಿಕ ರಾಜಕೀಯ

ಸಾರ್ವಜನಿಕರನ್ನು ಕೋರಿತ್ತು. ಸಾಧಕರೇ ಅರ್ಜಿ ಹಾಕಬೇಕಿಲ್ಲ, ಅವರ ಪರವಾಗಿ ಬೇರೆ ಯಾರಾದರೂ ಹಾಕಬಹುದು ಎಂದು ಒಂದು ಮಾದರಿಯನ್ನು ಹರಿಯಬಿಡಲಾಗಿತ್ತು. ಜೊತೆಗೆ ಅದಕ್ಕಾಗಿ ಇ ಮೇಲ್ ವಿಳಾಸವನ್ನೂ ನೀಡಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದೆಂಬ ಸಾಧ್ಯತೆಯನ್ನು ತೆರೆದಿತ್ತು.

ವಿವಿಧ ಕ್ಷೇತ್ರಗಳ ಸಾಧಕರನ್ನು ಸರ್ಕಾರದ ಅಧಿಕಾರಿ ಸಿಬ್ಬಂದಿ ತನಗಿರುವ ಸಂಪರ್ಕದ ಮೂಲಕ ತಿಳಿದುಕೊಂಡು ಆಯ್ಕೆ ಮಾಡುತ್ತಿದ್ದ ಪದ್ಧತಿ ಈಚಿನ ವರ್ಷಗಳಲ್ಲಿ ಬದಲಾಗಿದೆಯೇ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಸನ್ಮಾನ ಸಮಾರಂಭವೊಂದರಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಗ್ ಆಶ್ಚರ್ಯ ವ್ಯಕ್ತಪಡಿಸಿ ತಾವು ಎಷ್ಟು ಅಮಾಯಕರು ಎಂದು ತೋರಿಸಿಕೊಂಡಿದ್ದರು. ಸಿಂಗ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವರಿಷ್ಠ ಅಧಿಕಾರಿಯಾಗಿದ್ದಾಗ ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಭೀಮಸೇನ ಜೋಶಿ ಅವರಿಗೆ ಅದುವರೆಗೆ ಯಾಕೆ ರಾಜ್ಯಪ್ರಶಸ್ತಿ ಸಿಕ್ಕಿಲ್ಲ ಎಂದು ಆಶ್ಚರ್ಯಪಟ್ಟು ಅವರಿಗೆಲ್ಲ ಪ್ರಶಸ್ತಿ ಸಿಗುವಂತೆ ನೋಡಿಕೊಂಡಿದ್ದರA3. ಪ್ರಶಸ್ತಿಗಾಗಿ ಇಂಥ ಸಾಧಕರು ಅರ್ಜಿ ಹಾಕಿಕೊಳ್ಳಬೇಕೇ ಎಂದು ಅವರು ವ್ಯಥೆಯಿಂದ ಹೇಳಿಕೊಂಡಿದ್ದರು.



ಪ್ರಶಸ್ತಿಗಳಿಗೆ ಬೇಡಿಕೆ ಕಳೆದ ಶತಮಾನದ ತೊಂಬತ್ತರ ದಶಕದಿಂದ ನಾಡಿನಲ್ಲಿ ತೀವ್ರಗೊಂಡಿದೆ. ಸರ್ಕಾರದ ವಿವಿಧ ಅಕಾಡೆಮಿ, ಪ್ರಾಧಿಕಾರಗಳಿಂದ ಕೊಡಮಾಡುವ ಪ್ರಶಸ್ತಿಗಳಿಗೆ ನಿರ್ದಿಷ್ಟ ಮಾರ್ಗಸೂಚಿಯ ಜೊತೆಗೆ ಸಾಮಾಜಿಕ ನ್ಯಾಯವನ್ನು ಅನ್ವಯಿಸುವ ಅವಶ್ಯಕತೆ ಏರ್ಪಟ್ಟಾಗ ಬಹುಕಾಲದಿಂದ ಎಲ್ಲ ಪ್ರಶಸ್ತಿಗಳ ಹಕ್ಕುದಾರಿಕೆಯನ್ನು ಇಟ್ಟುಕೊಂಡವರು `ಕಾಲ ಬದಲಾಯಿತಪ್ಪ.' ಎಂದು ನಿಟ್ಟುಸಿರು ಬಿಟ್ಟರು. ಅಷ್ಟಕ್ಕೆ ಅವರು ಸುಮ್ಮನಾಗಲಿಲ್ಲ. ಸರ್ಕಾರಿ ಅನುದಾನದಿಂದ ನಡೆಯುವ ಟ್ರಸ್ಟು, ಪ್ರಾಧಿಕಾರಗಳಲ್ಲಿ ಸೇರಿಕೊಂಡು ತಮ್ಮವರಿಗೆ `ನ್ಯಾಯ' ಸಿಗುವಂತೆ ನೋಡಿಕೊಂಡರು. ಸರ್ಕಾರದಿಂದ ಬರುವ ಅನುದಾನದ ಮೊತ್ತವನ್ನು ಕೇವಲ ಗೌರವ ಪ್ರಶಸ್ತಿಯ ಮೂಲಕ ತಮ್ಮಲ್ಲಿ ಹಂಚಿಕೆಯಾಗುವ ಕಾರ್ಯಕ್ರಮ ರೂಪಿಸಿದರು. ಗೌರವ ಪ್ರಶಸ್ತಿಗೆ ತಮ್ಮ ಪಾಳಿ ಬರುವಂತೆ ಟ್ರಸ್ಟಿಗೆ ರಾಜೀನಾಮೆ ನೀಡಿದ ವಿದ್ವಾಂಸರ ವರಸೆಯೂ ಮರೆಯುವಂಥದ್ದಲ್ಲ.

`ನೀವು ಬರೆದ ಕಗ್ಗವನ್ನೆಲ್ಲ ಜನ ಕೊಂಡುಕೊಂಡು ಓದುತ್ತಾರೆ ಎಂದು ನಿರೀಕ್ಷೆ ಮಾಡಬೇಡಿ' ಎಂದು ಕಿರಿಯ ಲೇಖಕರಿಗೆ ಎಚ್ಚರಿಕೆ ನೀಡುತ್ತಿದ್ದ ಹಿರಿಯ ಲೇಖಕ ಪೂರ್ಣಚಂದ್ರ ತೇಜಸ್ವಿ ಬರಹದ ಗಟ್ಟಿತನದಿಂದಲೇ ಓದುಗರ ಬೆಂಬಲ ಗಳಿಸಿದ ಲೇಖಕರು. ವಿಧಾನಪರಿಷತ್ತಿನ ಸದಸ್ಯತ್ವ ಮನೆಬಾಗಿಲಿಗೆ ಅರಸಿಕೊಂಡು ಬಂದಾಗ ನಿರಾಕರಿಸಿದರು. ಅಕಾಡೆಮಿ ಪ್ರಶಸ್ತಿ ಬಂದಾಗ ಅದಕ್ಕಾಗಿ ಹಿಗ್ಗಲಿಲ್ಲ. ಸಂಭ್ರಮಪಡಲಿಲ್ಲ. ಸರ್ಕಾರ ಅಂದರೆ ಜನಪ್ರತಿನಿಧಿಗಳ ಹಣದಿಂದ ಪ್ರಶಸ್ತಿ ನೀಡುವುದರಿಂದ ಅದನ್ನು ನಿರಾಕರಿಸುವುದು ಸರಿಯಲ್ಲ ಎಂದಿದ್ದರು. ಆದರೆ ಪ್ರಶಸ್ತಿಯನ್ನು ಸ್ವೀಕರಿಸಲು ಮೂಡಿಗೆರೆಯಿಂದ ಬನವಾಸಿಗೆ ಪ್ರಯಾಣ ಮಾಡಲು ನಿರಾಕರಿಸಿದರು. `ರಾಜ್ಯಪಾಲರಾದ ರಮಾದೇವಿಯವರು ಪ್ರಶಸ್ತಿ ನೀಡಲಿದ್ದಾರೆ, ಯಾಕೆ ಹೋಗುತ್ತಿಲ್ಲ?' ಎಂದು ಕೇಳಿದಾಗ `ಆ ಪೊಲೀಸರ ಭದ್ರತೆ.. ತಳ್ಳಾಟ.. ಇವೆಲ್ಲ ಇಷ್ಟ ಆಗಲ್ಲ ಕಣ್ರೀ' ಎಂದಿದ್ದರು. ಆದರೆ, ಯಾರೊಬ್ಬರ ವಶೀಲಿಯೂ ಇಲ್ಲದೆ, ಸಮಿತಿ ಸದಸ್ಯರ ಅಧ್ಯಯನ ಮಾತ್ರದಿಂದಲೇ ಆಯ್ಕೆಯಾದ ಮಂಗಳೂರಿನ ಸಂದೇಶ ಸಂಸ್ಥೆಯ `ಸಂದೇಶ ಮಾಧ್ಯಮ ಪ್ರಶಸ್ತಿ' ಸ್ವೀಕರಿಸಲು ಮೂಡಿಗೆರೆಯಿಂದ ಮಂಗಳೂರಿಗೆ ಹೋಗಿ ಪ್ರಶಸ್ತಿ ಸ್ವೀಕರಿಸಿದ್ದಲ್ಲದೆ ಅಂದಿನ ಔತಣಕೂಟದಲ್ಲಿಯೂ ಭಾಗಿಯಾಗಿದ್ದರು.

ಡಿವಿಜಿ, ಕುವೆಂಪು ಅವರಂತೆಯೇ ಸ್ವತಂತ್ರ ಮನೋವೃತ್ತಿಯ ಬಿ.ಜಿ.ಎಲ್.ಸ್ವಾಮಿ ಅವರ `ಹಸುರು ಹೊನ್ನು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಾಗ ಅದನ್ನು ಕನ್ನಡಿಗರು ಸಂತಸಪಟ್ಟರು. ಡಿವಿಜಿಯವರಿಗೂ ಪ್ರಶಸ್ತಿ ಬಂದಿತ್ತು; ಹೀಗೆ ತಂದೆ ಮತ್ತು ಮಗನಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಂದಿರುವುದು ನಮ್ಮ ಹೆಗ್ಗಳಿಕೆ ಎಂದು ಸಂಭ್ರಮಿಸಿದರು. ಆದರೆ, ಬಿ.ಜಿ.ಎಲ್.ಸ್ವಾಮಿ ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಹೋಗುವ ಸಹೋದ್ಯೋಗಿಗಳ ಪ್ರಸ್ತಾಪಕ್ಕೆ `ಅದೇನು ಎಲ್‌ಕೆಜಿ ಹುಡುಗರಿಗೆ ಕೊಟ್ಟ ಪ್ರೈಜಿನಂತೆ ಸಂಭ್ರಮಪಡುವ ವಿಷಯವಾ?' ಎಂದು ಗೇಲಿ ಮಾಡುತ್ತಾ ತಮ್ಮ ಸಂಶೋಧನೆಯ ಮೈಕ್ರೋಸ್ಕೋಪಿನಲ್ಲಿ ಕಣ್ಣು ತೂರಿಸಿದ್ದರಂತೆ.

ನಾಡಿನಲ್ಲಿ ಪ್ರಶಸ್ತಿಯ ಗೀಳು ಎಷ್ಟರಮಟ್ಟಿಗೆ ಬಂದಿದೆ ಎಂದರೆ ಹಣ ಇರುವ ಯಾರು ಬೇಕಾದರೂ ಪ್ರಶಸ್ತಿಯನ್ನು ಸ್ಥಾಪಿಸಿ ತಮ್ಮ ಹೆಸರಿನ ಪ್ರಶಸ್ತಿಯ ಮೂಲಕ ಸಾಧಕರಾಗಿ ದಾಖಲಾಗಬಹುದು. ಪ್ರಭಾವಿಗಳಿಗೆ ಪ್ರಶಸ್ತಿಯನ್ನು ನೀಡಿ ಅವರ ಮೂಲಕ ತಾವೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣ್ಯರಾಗಿ ಮೆರೆಯಬಹುದು. ಒಂದೆರಡು ಕೃತಿಗಳನ್ನು ಪ್ರಕಟಿಸಿದ ಹಿನ್ನೆಲೆ ಇರುವ ಆದರೆ ಸಾಕಷ್ಟು ಹಣದ ಅನುಕೂಲ ಇರುವವರು ತಮ್ಮ ಹೆಸರಿನಲ್ಲಿ ಪ್ರತಿಷ್ಠಾನ ರಚಿಸಿಕೊಂಡು ನಿರ್ದಿಷ್ಟ ಪ್ರಕಾರಗಳ ಒಂದು ಕೃತಿಗೆ ಇಪ್ಪತ್ತೈದು ಸಾವಿರ ರೂಪಾಯಿ ನಗದು ಪುರಸ್ಕಾರ ನೀಡಿ ತಮ್ಮದು ಪ್ರತಿಷ್ಠಿತ ಪ್ರಶಸ್ತಿಯಾಗುವಂತೆ ಮಾಡಿಕೊಳ್ಳುವ ತಂತ್ರಗಾರಿಕೆಯನ್ನೂ ಈಗ ನೋಡಬಹುದಾಗಿದೆ.

ಕೆಲವು ಪ್ರತಿಷ್ಠಾನಗಳಿಗೆ ಅವುಗಳ ನಿರ್ಮಾತೃಗಳ ಹಣ ಬೆಂಬಲವೇ ಆಧಾರ. ಪ್ರತಿವರ್ಷ ಒಬ್ಬರಿಗೆ ಹತ್ತು

**ಕಾವೇರಿ ತೀರದಿಂದ ಸಿಂಧು ನದಿ ತೀರದವರೆಗೂ ವ್ಯಾಪಿಸಿದ್ದ ಕನ್ನಡ ನಾಡು, ಇಂದು ಕಾವೇರಿಯಿಂದ ಕೃಷ್ಣೆವರೆಗಷ್ಟೆ ಸೀಮಿತವಾಗಿದೆ.**

ಸಾವಿರ ರೂಪಾಯಿ ನೀಡುತ್ತಿದ್ದ ಪ್ರತಿಷ್ಠಾನವೊಂದು ತನ್ನ ಅಸ್ತಿತ್ವದ ಹತ್ತನೇ ವರ್ಷದ ನೆನಪಿಗೆ ಇನ್ನೊಂದು ವಿಶೇಷ ಪ್ರಶಸ್ತಿಯನ್ನು ಪ್ರಕಟಿಸಿತು. ಎರಡೂ ಪ್ರಶಸ್ತಿಗಳನ್ನು ಎರಡು ಪತ್ರಿಕೆಗಳ ಆಯಕಟ್ಟಿನ ವ್ಯಕ್ತಿಗಳಿಗೆ ಆಯ್ಕೆ ಮಾಡುವ ಮೂಲಕ ಪ್ರತಿಷ್ಠಾನಕ್ಕೆ ಸಂಬಂಧಪಟ್ಟವರಿಗೆ ಸದಾಕಾಲವೂ ಪ್ರಚಾರದ ಒರತೆ ಪ್ರವಹಿಸುವಂತೆ ನೋಡಿಕೊಂಡ ಎಚ್ಚರಿಕೆಯ ನಡೆಯೂ ದಾಖಲಾಯಿತು.

ಈಚಿನ ವರ್ಷಗಳಲ್ಲಿ ಸರ್ಕಾರದಿಂದ ಕೊಡಮಾಡುವ ಪ್ರಶಸ್ತಿಗೆ ಮಾತ್ರವಲ್ಲದೆ ಪ್ರಶಸ್ತಿಗೆ ಆಯ್ಕೆ ಮಾಡುವ ಸ್ಥಾನಗಳಿಗೂ ಅರ್ಜಿ ಹಾಕಿಕೊಂಡು ಅದಕ್ಕಾಗಿ ಶಾಸಕ, ಸಚಿವರಿಂದ ಶಿಫಾರಸು ಪತ್ರಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಸಲ್ಲಿಸುವ ಪದ್ಧತಿ ಆರಂಭವಾಗಿರುವAತೆ ತೋರುತ್ತದೆ. ಬರಹದಲ್ಲಿ ಗಟ್ಟಿತನವಿದ್ದರೆ ಓದುಗರ ಸಂಖ್ಯೆ ಹೆಚ್ಚಳವಾಗುತ್ತದೆ. ಗಟ್ಟಿ ಬರಹದ ಕಾರಣ ಕೆಲವು ಕೃತಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಓದುಗರನ್ನು ತಲುಪುತ್ತವೆ. ಅಂಥ ಕೃತಿಗಳಿಗೆ ಪ್ರಶಸ್ತಿಗಳು ಸಿಗುವುದಿಲ್ಲ. ಕೆಲವು ಪ್ರಶಸ್ತಿ ವಿಜೇತ ಕೃತಿಗಳನ್ನೂ ಓದುವುದಕ್ಕೂ ಸಾಧ್ಯವಾಗುವುದಿಲ್ಲ. ನೊಬೆಲ್ ಪ್ರಶಸ್ತಿ ಪುರಸ್ಕೃತ ಕೃತಿಯೊಂದನ್ನು ಓದಲು ಕೈಗೆತ್ತಿಕೊಂಡಾಗ ನಿದ್ದೆ ಬಂತು ಎಂದು ಶಿವರಾಮ ಕಾರಂತರು ಒಮ್ಮೆ ಹೇಳಿದ್ದು ದಾಖಲಾಗಿತ್ತು. ಪ್ರಶಸ್ತಿಗೂ ಕೃತಿಯ ಮೌಲಿಕತೆಗೂ ಸಂಬಂಧ ಇರುವುದಿಲ್ಲ ಎಂಬುದಕ್ಕೆ ಇಂಥ ಅನುಭವಗಳು ನಿದರ್ಶನವಾಗುತ್ತವೆ. ಆದರೂ ಪ್ರಶಸ್ತಿಯ ಗೀಳು ತಪ್ಪಿಲ್ಲ.

13 ನೇ ಪುಟದಿಂದ

# ಕೆನಡಾ ಕನ್ನಡಿಗನ ಹತ್ಯೆ

ಎಲ್‌ಟಿಐ ನ 'ಮೈಂಡ್‌ಟ್ರೀ'ಯಲ್ಲಿ ಸಾಫ್ಟ್‌ವೇರ್ ತಂತ್ರಜ್ಞರಾಗಿ ಕೆಲಸ ಮಾಡುತ್ತಿದ್ದರು. ಇದಕ್ಕೂ ಮೊದಲು ಚಂದನ್ ಬೆಂಗಳೂರಿನಲ್ಲಿದ್ದಾಗ 'ಕಾಗ್ನಿಜೆಂಟ್' ಎಂಬ ಸಾಫ್ಟ್‌ವೇರ್ ಕಂಪನಿಯೊಂದಿಗೆ ಕೆಲಸ ಮಾಡಿದ್ದರು. ಇವರ ತಂದೆ ನಂದಕುಮಾರ್ ಶಿಕ್ಷಕರಾಗಿದ್ದರೆ, ತಾಯಿ ಶೈಲಜಾ ಗೃಹಿಣಿ. ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆದ ಚಂದನ್‌ಗೆ ಅಗಾಧವಾಗಿ ಬೆಳೆವ ಕನಸುಗಳಿದ್ದವು. ಇದಕ್ಕೆ ಕೆನಡಾ ತನಗೆ ಸರಿಹೊಂದುವ ಕಾರ್ಯಕ್ಷೇತ್ರ ಅಂತ ಭಾವಿಸಿದ್ದರು. ಈ ಹಿನ್ನೆಲೆಯಲ್ಲೇ ದಕ್ಷಿಣ ಏಷಿಯಾ ಸಮುದಾಯದವರನ್ನೆಲ್ಲಾ ಒಂದು ವೇದಿಕೆಗೆ ತಂದು, ಅಲ್ಲಿ ಸಮುದಾಯಕ್ಕೆ ಅಗತ್ಯವಾದ ದಿನಸಿ ಪದಾರ್ಥಗಳಲ್ಲದೆ ಇನ್ನಿತರ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಕೊಡಿಸುವ ಒಪ್ಪಂದವನ್ನು ಮಾಲ್ ಮಾಲಿಕರೊಂದಿಗೆ ಮಾತುಕತೆ ನಡೆಸಿ ಒಪ್ಪಂದ ಕುದುರಿಸಿಕೊಂಡಿದ್ದರು. ಇದೇ ವಿಷಯವಾಗಿ ಮಾತಾಡಲು ವುಡ್ ಬೈನ್ ಶಾಪಿಂಗ್ ಸೆಂಟರ್‌ಗೆ ಚಂದನ್ ಬರುವಾಗ ಹಂತಕರು ಗುಂಡು ಹೊಡೆದು ಕೊಂದಿರಬೇಕೆAದು ಶಂಕಿಸಲಾಗಿದೆ.



ಚಂದನ್‌ಕುಮಾರ್ ಕೊಲೆಯಾಗಿ ಒಂದುವಾರ ಕಳೆದರೂ, ಅವರ ಪಾರ್ಥಿವ ಶರೀರ ಆಗಸ್ಟ್ ೧೫ರಂದು ಬೆಂಗಳೂರಿನ ವಿಮಾನ ನಿಲ್ದಾಣದಿಂದ ಹುಟ್ಟೂರು ತ್ಯಾಮಗೊಂಡ್ಲುವಿನಲ್ಲಿ ಅಂತ್ಯಸAಸ್ಕಾರ ನಡೆಸಿದರೂ, ಇಲ್ಲಿಯವರೆಗೆ ಯಾರನ್ನೂ ಬಂಧಿಸಲಾಗಿಲ್ಲ. ಟೊರೊಂಟೊ ಪೊಲೀಸರು "ಉದ್ದೇಶಿತ" ದಾಳಿ ಎಂದು ಶಂಕಿಸಿ ಕೊಲೆ ತನಿಖೆಯನ್ನು ಪ್ರಾರಂಭಿಸಿದ್ದಾರೆ. ಟೊರೊಂಟೊದಲ್ಲಿ ಕನ್ನಡ ಸಂಘವನ್ನು ರಚಿಸಲು ಚಂದನ್ ಮಾಡಿದ ಪ್ರಯತ್ನಗಳು ಈ ಹತ್ಯೆಯಲ್ಲಿ ಪಾತ್ರವಹಿಸಿರಬಹುದು ಎಂದು ಕೆಲವು ಸಂಬAಧಿಕರು ಶಂಕಿಸಿದ್ದಾರೆ, ಆದರೆ ಇದು ವ್ಯಾಪಾರಿ ಮಾಫಿಯಾದ ಕೈವಾಡ ಇರುವಂತಿದೆ. ಟೊರೊಂಟೋ ಪೊಲೀಸರು ಇಲ್ಲಿಯವರೆಗೆ ಯಾವುದೇ ಉದ್ದೇಶವನ್ನು ಹೇಳಿಲ್ಲ. ಕಳೆದೊಂದು ತಿಂಗಳಲ್ಲಿ ಟೊರೊಂಟೋ ನಗರ ಒಂದರಲ್ಲೇ ಮೂರನೇ ಕೊಲೆ ನಡೆದಿದ್ದರೂ, ಕೆನಡಾ ಸರ್ಕಾರವಾಗಲಿ, ಟೊರೊಂಟೋ ಪೋಲೀಸರಾಗಲಿ ತಲೆಕೆಡಿಸಿಕೊಂಡAತೆ ಕಾಣುತ್ತಿಲ್ಲ.

ಚಂದನ್ ಕುಮಾರ್ 'ಟೊರೊಂಟೊ ಕನ್ನಡ ಸಂಘ' ಮತ್ತು ಕೆನಡಾದ ಶಿರಡಿ ಸಾಯಿಬಾಬಾ ದೇವಾಲಯ ಟ್ರಸ್ಟ್‌ನಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದರು. ಕನ್ನಡ ಸಂಘದ ಮೂಲಕ ಕರ್ನಾಟಕದ ಪ್ರಸಿದ್ಧ ಗಾಯಕರು ಮತ್ತು ಕಲಾವಿದರನ್ನು ಆಹ್ವಾನಿಸುವ ಮೂಲಕ ಕೆನಡಾದಲ್ಲಿ ಹಲವು ಜನಪ್ರಿಯ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಯಶಸ್ವಿಯಾಗಿದ್ದರು. ಇದರಿಂದ ಗ್ರೇಟರ್ ಟೊರೊಂಟೊ ಪ್ರದೇಶದಾದ್ಯಂತ ಕನ್ನಡ ಮಾತನಾಡುವ ಅನೇಕ ನಿವಾಸಿಗಳಿಗೆ ಪರಿಚಿತರಾಗಿದ್ದರು ಎಂದು ಟೊರೊಂಟೊದ ಕನ್ನಡ ಸಂಘ ಅಧ್ಯಕ್ಷ ಶ್ರೀಹರ್ಷ ಹೆಗ್ಡೆ ಮತ್ತು ಮಾಜಿ ಅಧ್ಯಕ್ಷ ವಿಜಯ್‌ಕುಮಾರ್ ತಿಳಿಸಿದ್ದರೆ, "ಚಂದನ್ ಕುಮಾರ್ ಸೇವಾ ಮನೋಭಾವದ ವ್ಯಕ್ತಿ. ಜನರಿಗೆ ಸದಾ ಸಹಾಯ ಹಸ್ತ ಚಾಚಲು ಬಯಸುವ ಸಜ್ಜನರು" ಎಂದು ಕನ್ನಡ ಸಂಘದ ಸದಸ್ಯರು ತಮ್ಮ ಸಂತಾಪ ಸಂದೇಶದಲ್ಲಿ ಬಣ್ಣಿಸಿದ್ದಾರೆ. ಚಿಕ್ಕಬಳ್ಳಾಪುರ ಸಂಸದ ಕೆ. ಸುಧಾಕರ್, ಗೃಹ ಸಚಿವ ಜಿ.ಪರಮೇಶ್ವರ್ ತ್ಯಾಮಗೊಂಡ್ಲುವಿನಲ್ಲಿರುವ ಚಂದನ್ ಪೋಷಕರ ಮನೆಗೆ ಭೇಟಿಕೊಟ್ಟು ಸಾಂತ್ವನ ಹೇಳಿದ್ದಾರೆ. ಇದಷ್ಟನ್ನೇ ಮಾಡದೆ, ಚಂದನ್ ಕುಮಾರ್ ಹತ್ಯೆ ಹಿಂದಿನ ಕೈಗಳ ಬಂಧನಕ್ಕೆ ಕೆನಡಾ ಸರ್ಕಾರದ ಮೇಲೆ ಒತ್ತಡ ಹೇರಲು ಭಾರತದ ರಾಜತಾಂತ್ರಿಕರ ನೆರವು ಪಡೆದುಕೊಳ್ಳಬೇಕು. ಸತ್ಯ ಹೊರಬರುವವರೆಗೂ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಟೊರೊಂಟೊ ಪೋಲೀಸರ ಬೆನ್ನತ್ತಬೇಕು. ಆಗಷ್ಟೇ ಚಂದನ್ ಹತ್ಯೆ ಹಿಂದಿನ ನಿಗೂಢ ಕೈಗಳು ಬೆಳಕಿಗೆ ಬರುತ್ತವೆ. ಇಲ್ಲದಿದ್ದರೆ, ಈಗಾಗಲೇ ಕೆನಡಾದಲ್ಲಿ ನಡೆದಿರುವ ಸಾವಿರಾರು ಹತ್ಯೆಗಳ ಜೊತೆ ಇದು ಸಹ ಮುಚ್ಚಿ ಹೋಗಬಹುದು.

ಮಧ್ಯ ಪ್ರಾಚ್ಯ ಕಾಲದಲ್ಲಿ ನರ್ಮದೆ ತೀರಕ್ಕೆ ಸೀಮಿತವಾಗಿದ್ದ ಕನ್ನಡ ನಾಡು ಇಂದು ಕೃಷ್ಣೆ ತೀರಕ್ಕಷ್ಟೇ ಸೀಮಿತವಾಗಿದೆ.

15 ನೇ ಪುಟದಿಂದ

# ಸಾಕೇತ್ ಸಾವಿಗೆ ನ್ಯಾಯ ಸಿಗಲಿ

ಆತ ಹೊರಗಡೆ ಹೋಗುವುದು ಅಪಾಯ ಅಂತ ಬನೀತ್‌ಸಿಂಗ್ ತಡೆದಾಗ, "ಐ ಡೋಂಟ್ ಕೇರ್" ಅಂತ ತನ್ನ ಹೆಗಲ ಮೇಲೆ ಲ್ಯಾಪ್‌ಟಾಪ್ ಬ್ಯಾಗ್ ಹಾಕಿಕೊಂಡು ಹೊರಟಿದ್ದು ನೋಡಿದರೆ, ಕ್ಯಾಂಪಸ್‌ನ ಗೆಳೆಯರಿಗೆಲ್ಲ ಬೈ ಬೈ ಅಂತ ಹೇಳಿ ಹೊರಟಿದ್ದು ಗಮನಿಸಿದರೆ ಅವನ ಮಾನಸಿಕ ಸ್ಥಿತಿ ಹೇಗಿತ್ತು ಅನ್ನೋದು ಅರ್ಥವಾಗುತ್ತೆ. ಹೀಗೇ, ಫೆಬ್ರವರಿ.೯ ರಂದು ಯುನಿವರ್ಸಿಟಿ ಕ್ಯಾಂಪಸ್‌ನಿಂದ ಹೊರಡುವ ಮುನ್ನ ಆತ ತಾಯಿಗೆ ಫೋನ್ ಮಾಡಿದ್ದಾನೆ, ಆದರೆ ಅವರು ಫೋನ್ ತೆಗೆದಿಲ್ಲ. ಇದರಿಂದಲೂ ಆತನ ಮನಸ್ಸಿಗೆ ಬೇಸರವಾಗಿರಬೇಕೆನಿಸುತ್ತೆ. ಸಾಕೇತ್ ರಾತ್ರಿಯಾದರೂ ರೂಮಿಗೆ ಬಾರದ ಬಗ್ಗೆ ರೂಮೇಟ್ ಬನೀತ್‌ಸಿಂಗ್ ಯುನಿವರ್ಸಿಟಿ ಹಾಸ್ಟೆಲ್‌ನವರಿಗೆ ತಿಳಿಸಿದ್ದಾನೆ. ತಕ್ಷಣ ಸುತ್ತಮುತ್ತ ಹುಡುಕಾಟಕ್ಕೆ ಯತ್ನಿಸಿದಾಗ ಆರು ದಿನಗಳ ನಂತರ ಒಂದು ಕಿ.ಮೀ. ದೂರದ ಟೆಲ್ಡಿನ್ ಪಾರ್ಕ್ ನಲ್ಲಿ ಆತನ ಲ್ಯಾಪ್‌ಟಾಪ್ ಮತ್ತಿತರ ವಸ್ತುಗಳಿದ್ದ ಬ್ಯಾಗ್ ಪತ್ತೆಯಾಗಿದೆ. ಟೆಲ್ ಡಿನ್ ಪಾರ್ಕ್ ಸಮೀಪದ ಅಂಜಾ ಸರೋವರದಲ್ಲಿ ಹುಡುಕಾಟ ನಡೆಸಿದಾಗ ಫೆಬ್ರವರಿ.೧೪ ರಂದು ಸಾಕೇತ್ ಕೊಳೆತ ಮೃತದೇಹ ಪತ್ತೆಯಾಗಿದೆ.



ಮರುದಿನ ಫೆಬ್ರವರಿ.೧೫ ರಂದು ಬೆಳಿಗ್ಗೆ ೫.೧೨ಕ್ಕೆ ಸ್ಯಾನ್‌ಫ್ರಾಸಿಸ್ಕೋದಲ್ಲಿರುವ ಭಾರತೀಯ ಧೂತವಾಸದ 'ಎಕ್ಸ್' ಖಾತೆಯಲ್ಲಿ ಸಾಕೇತ್ ಶವ ಅಂಜಾ ಸರೋವರದಲ್ಲಿ ಸಿಕ್ಕಿರುವ ಬಗ್ಗೆ ಮಾಹಿತಿ ನೀಡಿ, ಸಂತಾಪ ಸೂಚಿಸಿದ್ದರು. ನಂತರ ಬೆಂಗಳೂರಿನ ಸಾಕೇತ್ ಮನೆಗೆ ಫೋನ್ ಮಾಡಿ, ಶವ ಸಿಕ್ಕ ಬಗ್ಗೆ ತಿಳಿಸಿದ್ದಾರೆ. ಫೋನ್ ಎತ್ತಿಕೊಂಡು ಮಾತಾಡಿದ ತಂದೆ ಶ್ರೀನಿವಾಸಯ್ಯ ದುಃಖದ ಭರದಲ್ಲೇ "ನೀವು ತೋರಿಸುತ್ತಿರುವ ಶವ ನನ್ನ ಮಗನದಲ್ಲ, ನನ್ನ ಮಗ ಸತ್ತಿಲ್ಲ, ನಾನು ಖುದ್ದು ಬಂದು ನೋಡುವವರೆಗೂ ನಂಬಲ್ಲ" ಅಂತ ಗೋಳೋ ಅಂತ ಅತ್ತಿದ್ದಾರೆ. ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷೆ ಡಾ. ಆರತಿ ಕೃಷ್ಣ ಮರುದಿನ ಶ್ರೀನಿವಾಸಯ್ಯನವರ ಮನೆಗೆ ಭೇಟಿ ನೀಡಿ ಸಾಂತ್ವನದ ಮಾತಾಡಿದ್ದಾರೆ. ಸರ್ಕಾರದಿಂದ ಎಲ್ಲಾ ಸಹಾಯ ಮಾಡುವ ಭರವಸೆ ನೀಡಿದ್ದಾರೆ. ಆ ನತದೃಷ್ಟ ಪ್ರತಿಭಾವಂತ ವಿದ್ಯಾರ್ಥಿಗೆ ಸರ್ಕಾರದಿಂದ ಸ್ಕಾಲರ್‌ಷಿಪ್ ಅಥವ ಸಾಲದ ರೂಪದ ಧನ ಸಹಾಯ ದೊರೆತಿದ್ದರೂ ಬದುಕುಳಿಯುತ್ತಿದ್ದ. ಸುಮಾರು ಆರು ದಿನಗಳ ಕಾಲ ನೀರಿನಲ್ಲಿ ಮುಳುಗಿರುವುದರಿಂದ ದೇಹ ಊದಿಕೊಂಡು ವಿಕಾರವಾಗಿದೆ. ಈ ಹಿನ್ನೆಲೆಯಲ್ಲೇ ಸಾಕೇತ್ ಶವ ತಮ್ಮ ಮಗನದಲ್ಲ ಅಂತ ಹೆತ್ತೊಡಲು ರೋಧಿಸುತ್ತಿದೆ. ಅಮೆರಿಕಾಕ್ಕೆ ತೆರಳಲು ಸಾಕೇತ್ ಪೋಷಕರಿಗೆ ಎಮರ್ಜೆನ್ಸಿ ವೀಸಾ ನೀಡಲು ಸಹ ಅಮೆರಿಕಾ ವಲಸೆ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ. ಅಲ್ಲಿ ಕೊಳೆತಿರುವ ಸಾಕೇತ್ ಶವ ಪರೀಕ್ಷೆ ಸಹ ಆಗಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯ ಇಂಥ ದುರಂತ ಕಾಣಬಾರದು ಅಂತಿದ್ದರೆ, ರಾಜ್ಯ ಹಾಗು ಕೇಂದ್ರ ಸರ್ಕಾರಗಳು ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸಿ, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹಣಕಾಸಿನ ನೆರವು ನೀಡಬೇಕಿದೆ.

### ವಿದ್ಯಾರ್ಥಿಗಳ ಬದುಕಿಗೆ ಕೊಳ್ಳಿ ಇಟ್ಟ ಸರ್ಕಾರ

ಬಿಟ್ಟಿ ಭಾಗ್ಯಗಳಿಗೆ ಹಣ ಹೊಂದಿಸಲಾಗದೆ ಸೊರಗಿರುವ ಸಿದ್ದರಾಮಯ್ಯ ಸರ್ಕಾರ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೊಳ್ಳಿ ಇಟ್ಟಿದೆ.

ರಾಜ್ಯ ಸರ್ಕಾರ ಹಿಂದುಳಿದ ಅಭಿವೃದ್ಧಿ ನಿಗಮದಿಂದ ನೀಡುತ್ತಿದ್ದ ಸ್ಕಾಲರ್‌ಷಿಪನ್ನು (ಪ್ರತಿಭಾವೇತನ) ರದ್ದು ಮಾಡಿದೆ. ನಗರಪಾಲಿಕೆಯಿಂದ ಹತ್ತು ಲಕ್ಷ ರೂಪಾಯಿ ಸಾಲ ಕೊಡುವ ಅವಕಾಶವಿದೆ. ಇಲ್ಲಿಯೂ ಸೀಮಿತ ಹಣ ಇರುವುದರಿಂದ ಪ್ರಭಾವಿಗಳ ಶಿಫಾರಸ್‌ನಲ್ಲಿ ಗೋಲ್ ಮಾಲ್ ಆಗುತ್ತಿದೆ. ಒಕ್ಕಲಿಗ-ಲಿಂಗಾಯತ, ಮರಾಠಿ, ವಿಶ್ವಕರ್ಮ ಮತ್ತಿತರ ಜಾತಿ ನಿಗಮಗಳಲ್ಲೂ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಹಣವಿಲ್ಲ. ಮಾಸ್ಟರ್ ಡಿಗ್ರಿ ಮಾಡುವವರಿಗೆ ಸ್ಕಾಲರ್‌ಷಿಪ್ ನೀಡುವುದು ಅನ್ನುತ್ತಾರೆ. ಮಾಸ್ಟರ್ ಡಿಗ್ರಿ ಮಾಡುವ ವಿದ್ಯಾರ್ಥಿಗಳಿಗೂ ನೆಟ್ಟಗೆ ಸ್ಕಾಲರ್‌ಷಿಪ್ ಸಿಗುವುದು ಅನುಮಾನವಿದೆ.

ಹಿಂದುಳಿದವರ್ಗದ ವಿದ್ಯಾರ್ಥಿಗಳ ಸ್ಕಾಲರ್‌ಷಿಪ್‌ಗೆ ನಾಮತಿಕ್ಕಿರುವ ರಾಜ್ಯ ಸರ್ಕಾರ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಸ್ಕಾಲರ್‌ಷಿಪ್ ಹಣವನ್ನು ಅಧಿಕಗೊಳಿಸಿದೆ. ಉನ್ನತ ಶಿಕ್ಷಣ ಪಡೆಯಲು ವಿದೇಶಕ್ಕೆ ತೆರಳುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸಂಪೂರ್ಣ ವೆಚ್ಚ ಭರಿಸುತ್ತಿದೆ. ಸುಮಾರು ೫೦ಲಕ್ಷ ರೂಪಾಯಿವರೆಗೂ ಸ್ಕಾಲರ್‌ಷಿಪ್ ಪಡೆವ ಸೌಭಾಗ್ಯವನ್ನು ಅಲ್ಪಸಂಖ್ಯಾತ ಸಮೂಹಕ್ಕೆ ನೀಡಿರುವುದರಿಂದ ಬಡ ಮುಸ್ಲಿಮರಿರಲಿ, ಶ್ರೀಮಂತ ಜೈನ್ ಮಾರ್ವಾಡಿ ಮಕ್ಕಳು ಸುಲಭವಾಗಿ ಪಡೆದುಕೊಳ್ಳುತ್ತಿದ್ದಾರೆ. ಹುಚ್ಮುಂಡೆ ಮದುವೇಲಿ ಉಂಡೋನೇ ಜಾಣ ಅಂತ ಸ್ಕಾಲರ್‌ಷಿಪನ್ನು (ಪ್ರತಿಭಾವೇತನ) ಅನರ್ಹರು ಲಪಟಾಯಿಸುತ್ತಿದ್ದರೆ, ಅರ್ಹತೆ ಉಳ್ಳ ಸಾಕೇತ್‌ನಂಥ ಅರ್ಹ ವಿದ್ಯಾರ್ಥಿಗಳು ಪ್ರಾಣ ಬಿಡುತ್ತಿದ್ದಾರೆ.

ಸಾಕೇತ್ ಅವರ ಕೊನೆಯ ದಿನಗಳ ವರ್ತನೆ ಮತ್ತು ಆತನ ಮಾನಸಿಕ ತೊಳಲಾಟದ ಬಗ್ಗೆ ರೂಮ್‌ಮೇಟ್ ಬನೀತ್ ಸಿಂಗ್ ಲಿಂಕ್ಡ್‌ಇನ್ (ಐiಟಿಇeಜlಟಿ) ಪೋಸ್ಟ್‌ನಲ್ಲಿ ಬರೆದುಕೊಂಡಿರುವ ವಿಷಯಗಳಲ್ಲಿ ಹಲವು ಸ್ವಾರಸ್ಯಕರ ಮಾಹಿತಿಗಳು ಹೊರಬರುತ್ತಿವೆ. ಸಾಕೇತ್ ನಾಪತ್ತೆಯಾಗುವ ಎರಡು ವಾರಗಳ ಹಿಂದೆ ಅವನ ವರ್ತನೆಯಲ್ಲಿ ಭಾರೀ ಬದಲಾವಣೆಯಾಗಿತ್ತಂತೆ. ಸಾಕೇತ್ ರಾತ್ರಿ ಹೆಚ್ಚು ನಿದ್ದೆ ಮಾಡುತ್ತಿರಲಿಲ್ಲವಂತೆ. ಊಟ ಮಾಡದೆ ಕೇವಲ ಚಿಪ್ಸ್ ಮತ್ತಿತರ ಕುರುಕಲು ತಿಂಡಿ ತಿಂದು ಕೊಂಡೇ ಇರುತ್ತಿದ್ದನಂತೆ. 'ಈ ವಿದೇಶಿ ವಿದ್ಯಾರ್ಥಿ ಜೀವನ ತುಂಬಾ ಕಷ್ಟ ಗುರು' ಅನ್ನುತ್ತಿದ್ದನಂತೆ. ಅಂದರೆ, ಅವನಿಗೆ ವಿದ್ಯಾಭ್ಯಾಸ ನಡೆಸಲು ಹಣಕಾಸಿನ ಕೊರತೆ ಇದ್ದಿರಬಹುದೆಂಬ ಅನುಮಾನ ಹುಟ್ಟುತ್ತಿದೆ.

ಈ ಸಮಯದಲ್ಲಿ ಆತ್ಮಕ್ಕೆ ದಾರಿ ತಿಳಿಯದ ಸ್ಥಿತಿ ಇರುತ್ತದೆ. ಆದ್ದರಿಂದ ಕುಟುಂಬ ಸದಸ್ಯರು ಶಾಂತಿ ಹಾಗೂ ಪ್ರರ್ಥನೆಗಳನ್ನು ಮಾಡುತ್ತಾರೆ.

21 ನೇ ಪುಟದಿಂದ

## "ಟಾಕ್ಸಿಕ್"ಚಿತ್ರ ಚಾರ್ಲ್ಸ್ ಶೋಭ್‌ರಾಜ್‌ನ ಕತೆಯಾ?

"ಟಾಕ್ಸಿಕ್" ಚಿತ್ರದ ರಾಯ ಪಾತ್ರ ಯಾವ ಸ್ಮಗ್ಲರ್‌ನ್ನು ಆಧರಿಸಿದೆ ಎಂಬುದು ಈಗ ಬಹು ಚರ್ಚಿತ ವಿಷಯವಾಗಿದೆ. ೧೯೭೦-೮೦ರ ದಶಕದಲ್ಲಿದ್ದ ಗುಜರಾತ್ ಮೂಲದ ಸುಖೂರ್ ನಾರಾಯಣ ಬಖೀಯಾ ಪೋರ್ಚುಗೀಸರ ವಶದಲ್ಲಿದ್ದ 'ಗೋವಾ-ಡಿಯೂ-ಡಾಮನ್'ನಲ್ಲಿ ಗೋಲ್ಡ್ ಸ್ಮಗ್ಲರ್ ಆಗಿ ಕುಖ್ಯಾತನಾಗಿದ್ದ. "ಡಾಮನ್ ಡಾನ್" ಅಂತಾನೇ ಕುಖ್ಯಾತನಾಗಿದ್ದ ಸುಖೂರ್ ಬಖೀಯಾ ಮುಂಬೈನ ಆಗಿನ ಭೂಗತ ದೊರೆ ಹಾಜಿ ಮಸ್ತಾನ್ ಮತ್ತು ವರದರಾಜನ್ ಮೊದಲಿಯಾರ್ (ಇವನ ಕತೆ ಆಧರಿಸಿ 'ನಾಯಗನ್' ಚಿತ್ರವನ್ನು ಮಣಿರತ್ನಂ ನಿರ್ದೇಶಿಸಿ, ಕಮಲಹಾಸನ್ ಅಭಿನಯಿಸಿದ್ದರು) ಜೊತೆ ವ್ಯಾವಹಾರಿಕ ಸಂಬAಧ ಹೊಂದಿದ್ದ. ಸ್ಮಗ್ಲರ್ ಸುಖೂರ್ ಬಖೀಯಾನ ಕತೆಯನ್ನಾಧರಿಸಿ "ಟಾಕ್ಸಿಕ್" ಚಿತ್ರ ನಿರ್ಮಿಸಿದ್ದಾರೆ ಅನ್ನೋದು ಮೇಲ್ನೋಟಕ್ಕೆ ಸರಿ ಅನ್ನಿಸಿದರೂ, ಒಳನೋಟದಲ್ಲಿ ಅವನ ಕತೆ ಈಗಾಗಲೇ ಬಂದಾಗಿದೆ ಅನ್ನಿಸುತ್ತೆ. ಪ್ರಶಾಂತ್ ನೀಲ್ ನಿರ್ದೇಶಿಸಿದ 'ಕೆಜಿಎಫ್' ಚಿತ್ರದ ಸರಣಿ ಸುಖೂರ್ ಬಖೀಯಾನ ಕತೆಯನ್ನೇ ಆಧರಿಸಿದೆ.

ಹೀಗಾಗಿ "ಟಾಕ್ಸಿಕ್" ಚಿತ್ರ ಗೋವಾದ ಕಸ್ಟಮ್ಸ್ ಅಧಿಕಾರಿಯಾಗಿದ್ದುಕೊಂಡು ಸ್ಮಗ್ಲಿಂಗ್ ನಡೆಸುತ್ತಿದ್ದ ಕೋಸ್ಟಾವೋ ಫರ್ನಾಂಡೀಸ್ ಇಲ್ಲವೇ, ಅಂತರರಾಷ್ಟ್ರೀÃಯ ಕುಖ್ಯಾತ ಸ್ಮಗ್ಲರ್ ಹಾಗೂ ಬಿಕಿನಿ ಕಿಲ್ಲರ್ ಚಾರ್ಲ್ಸ್ ಶೋಭ್‌ರಾಜ್ ಜೀವನ ವೃತ್ತಾಂತವನ್ನು ಆಧರಿಸಿರಬೇಕೆಂದು ಅಂದಾಜಿಸಲಾಗಿದೆ. ಚಿತ್ರದ ಟೀಸರ್ ಮತ್ತು ಚಿತ್ರದಲ್ಲಿರುವ ನಾಯಕ ನಟಿಯರ ಸಾಲು ಗಮನಿಸಿದರೆ, "ಟಾಕ್ಸಿಕ್" ಚಿತ್ರ ಫ್ರಾನ್ಸಿನ ಭಾರತೀಯ ಸಂಜಾತ ಚಾರ್ಲ್ಸ್ ಶೋಭ್‌ರಾಜ್ ಜೀವನ ವೃತ್ತಾಂತವನ್ನು ಸಂಪೂರ್ಣ ಹೋಲುತ್ತದೆ.

ಸಂಯೋಜಕರಾದ ಜೆಜೆ ಪೆರ್ರಿ ೨೦೨೩ ರ ಸೆಪ್ಟೆಂಬರ್‌ನಲ್ಲಿ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ತನ್ನ ಮತ್ತು ಯಶ್ ಜೊತೆಗಿನ ಛಾಯಾಚಿತ್ರವನ್ನು ಪೋಸ್ಟ್ ಮಾಡಿದಾಗ "ಟಾಕ್ಸಿಕ್" ಚಿತ್ರ ನಿರ್ಮಾಣದ ವಿವರ ಎಲ್ಲರಿಗೂ ಗೊತ್ತಾಯಿತು.

ಅಂತಿಮವಾಗಿ ೨೦೨೩ರ ಡಿಸೆಂಬರ್‌ನಲ್ಲಿ "ಟಾಕ್ಸಿಕ್" ಚಿತ್ರೀಕರಣ ಅಧಿಕೃತವಾಗಿ ಆರಂಭವಾಯಿತು. "ಟಾಕ್ಸಿಕ್" ಚಿತ್ರದ ನಿರ್ಮಾಣದ ಯೋಜನೆಯಂತೆ ೨೦೨೫ರ ಯುಗಾದಿ ಹಬ್ಬದಂದು ಚಿತ್ರ ಬಿಡುಗಡೆಯಾಗ ಬೇಕಾಗಿತ್ತು. ಆದರೆ, ಬಿಡುಗಡೆ ವಿಳಂಬವಾದರೂ ಚಿತ್ರದ ಗುಣಮಟ್ಟ ಚೆನ್ನಾಗಿರಬೇಕು ಅಂತ ನಟ ಯಶ್ ಪಟ್ಟು ಹಿಡಿದಿದ್ದರಿಂದ ಚಿತ್ರ ಬಿಡುಗಡೆ ಮತ್ತೊಂದು ವರ್ಷ ಮುಂದೆ ಹೋಗಿ, ಅಂತಿಮವಾಗಿ ೨೦೨೬ರ ಮಾರ್ಚ್.೧೯ ರಂದು ಯುಗಾದಿ ಹಬ್ಬದಂದೇ "ಟಾಕ್ಸಿಕ್" ಚಿತ್ರ ಬಿಡುಗಡೆಯಾಗುತ್ತಿದೆ. ಹಾಲಿವುಡ್‌ನ ಜನಪ್ರಿಯ ಸಾಹಸ ನಿರ್ದೇಶಕ ಜೆಜೆ ಪೆರ್ರಿ ಜೊತೆಗೆ ಹಾಲಿವುಡ್ ಸೂಪರ್ ಆಕ್ಷನ್ ಚಿತ್ರ "ಡೂನ್-೨" ಸಾಹಸ ನಿರ್ದೇಶಕ ಥಾಯ್‌ಲ್ಯಾಂಡ್‌ನ ಕೆಚಾ ಖಾಂಫಕಡೀ, ದಕ್ಷಿಣ ಭಾರತದ ಸಾಹಸ ನಿರ್ದೇಶಕ ಜೋಡಿಯಾದ ಅನ್ಬರೀವ್ (ಅನ್ಬುಮಣಿ ಮತ್ತು ಅರಿವು ಮಣಿ) ಹಾಗೂ ಹಿಂದಿ ಚಿತ್ರರಂಗದ ಖ್ಯಾತ ಸಾಹಸ ನಿರ್ದೇಶಕ ಅಮೃತ್‌ಪಾಲ್ ಸಿಂಗ್ ಸಹ "ಟಾಕ್ಸಿಕ್" ಚಿತ್ರದ ಸಾಹಸ ದೃಶ್ಯ ಸಂಯೋಜಿಸಿರುವುದರಿಂದ ಸಾಹಸ ಪ್ರಿಯ ಪ್ರೇಕ್ಷಕರಿಗೆ ಚಿತ್ರ ರಸದೌತಣ ನೀಡಲಿದೆ ಎನ್ನುವುದರಲ್ಲಿ ಈಗ ಯಾವ ಅನುಮಾನವೂ ಉಳಿದಿಲ್ಲ.

"ಟಾಕ್ಸಿಕ್" ಚಿತ್ರದಲ್ಲಿ ಯಶ್ ಕೇವಲ ನಟ ಹಾಗು ಸಹ ನಿರ್ಮಾಪಕನಾಗಿಯಲ್ಲದೆ, ಕತೆ-ಚಿತ್ರಕತೆ ಸಿದ್ಧಪಡಿಸುವುದರಲ್ಲು ನಿರ್ದೇಶಕಿ ಗೀತೂ ಮೋಹನ್ ದಾಸ್ ತಂಡದೊಂದಿಗೆ ಸಕ್ರಿಯವಾಗಿ ಭಾಗವಹಿಸಿದ್ದರು. ಹೀಗೇ ಚಿತ್ರ ತಂಡದೊಂದಿಗೆ ಸೇರಿಕೊಂಡು ಅಭಿನಯಿಸುವುದರಿಂದ ಯಶ್ ಯಶಸ್ವಿ ನಟರಾಗಿ ಚಿತ್ರದಿಂದ ಚಿತ್ರಕ್ಕೆ ಬೆಳೆಯುತ್ತಿದ್ದಾರೆ. 'ಕೆಜಿಎಫ್' ಸರಣಿ ಚಿತ್ರದಿಂದ ರಾಷ್ಟ್ರ ಮಟ್ಟದಲ್ಲಿ ಮಿಂಚಿದ್ದ ಯಶ್, ಇದೀಗ "ಟಾಕ್ಸಿಕ್" ಚಿತ್ರದ ಮೂಲಕ ವಿಶ್ವಮಟ್ಟದಲ್ಲಿ ಮಿಂಚಲು ಹೊರಟಿದ್ದಾರೆ. ವಿಶ್ವದ ಚಿತ್ರರಂಗ ಆಳುವ ಎಲ್ಲಾ ಅರ್ಹತೆ ಕನ್ನಡಿಗ ಯಶ್‌ಗಿದೆ. ಅವರು ಮತ್ತಷ್ಟು ವಿಶ್ವ ಚಿತ್ರರಂಗದಲ್ಲಿ ಸೂಪರ್ ಸ್ಟಾರ್ ಆಗಿ ಬೆಳೆಯಲಿ ಎಂದು "ಕರ್ನಾಟಕ ರಕ್ಷಣಾ ವೇದಿಕೆ" ಶುಭ ಹಾರೈಸುತ್ತದೆ. ■



• ಮೂರು ಸಾವಿರಕ್ಕೂ ಹೆಚ್ಚಿನ ಇತಿಹಾಸವಿರುವ ಕನ್ನಡ ಭಾಷೆಯ ಅಸ್ಮಿತೆಗೆ ಧಕ್ಕೆ

4ನೇ ಪುಟದಿಂದ

# ಹಿಂದಿ ಹೇರಿಕೆ ಹಿಂದಿನ ಷಡ್ಯಂತ್ರಗಳು

ಅಧಿಕಾರ ನಡೆಸುತ್ತಿದ್ದರಿಂದ ಒಕ್ಕೂಟ ಸರ್ಕಾರದ ವಿರುದ್ಧ ಸೊಲ್ಲೆತ್ತದೆ ಹೋಗಿದ್ದು ವಿಷಾದದ ಸಂಗತಿ.

ಆದರೆ ತಮಿಳರ ರಾಜ್ಯದಲ್ಲಿ ೧೯ನೇ ಶತಮಾನದ ಆರಂಭಕ್ಕೆ ಸಾಮಾಜಿಕ-ಧಾರ್ಮಿಕ ಚಳವಳಿಯೊಂದು ಹುಟ್ಟಿಕೊಂಡು, ಅದು ಅಲ್ಲಿನ ರಾಜಕಾರಣದ ಮೇಲೂ ಪ್ರಭಾವ ಬೀರತೊಡಗಿತ್ತು. ದ್ರಾವಿಡ ಚಳವಳಿಯು ಸ್ವಾಭಿಮಾನದ ಚಳವಳಿಯೂ ಆಗಿಬಿಟ್ಟಿದ್ದರಿಂದ ಭಾಷೆ-ರಾಜಕೀಯ-ಧರ್ಮ-ದೇವರು-ಮತ ಮೌಢ್ಯಗಳ ವಿಚಾರದಲ್ಲಿ ಜನಜಾಗೃತಿಗೊಳಿಸತೊಡಗಿ ಯಶಸ್ವಿ ಹಾದಿಯನ್ನು ಕಂಡಿತ್ತು. ಅದರ ಪರಿಣಾಮವಾಗಿ ಹಿಂದಿ ಕಲಿಕೆಯನ್ನು ಸುತರಾಂ ಒಪ್ಪದೆ ತಮಿಳು ಮತ್ತು ಇಂಗ್ಲಿಷ್ ಭಾಷೆಗಳನ್ನು ಮಾತ್ರವೆ ಕಲಿಯಲು ನಿರ್ಧರಿಸಿಬಿಟ್ಟಿದ್ದು ಅವರ ದಿಟ್ಟತನ ಮತ್ತು ಪ್ರಾಬಲ್ಯದ ದ್ಯೋತಕವಾಗಿತ್ತು.

ಅಂದಿನ ತಮಿಳು ಭಾಷಿಕರ ನಿರ್ಧಾರ ಈ ಹೊತ್ತಿಗೂ ಅಲ್ಲಿ ದ್ವಿಭಾಷಾ ನೀತಿಯೇ ಮುಂದುವರಿಯಲು ನೆರವಾಯಿತು. ಕರ್ನಾಟಕದಲ್ಲಿ ಅನೇಕ ಬಾರಿ ರಾಜಕೀಯ ಸ್ಥಿತ್ಯಂತರವಾಗಿದ್ದರೂ ಭಾಷೆ ವಿಚಾರದಲ್ಲಿ ಕಠಿಣ ನಿಲುವು ತೆಗೆದುಕೊಳ್ಳುವಲ್ಲಿ ವಿಫಲವಾಗಿರುವುದರಿಂದ ಈ ಹೊತ್ತಿಗೂ ತ್ರಿಭಾಷಾ ಸೂತ್ರದ ಉರುಳಿನಲ್ಲಿ ನರಳುವಂತಾಗಿದೆ. ಅದನ್ನು ಕಂಡೇ ಕೇಂದ್ರದ ಒಕ್ಕೂಟ ಸರ್ಕಾರವು ಕ್ರಮೇಣ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸುತ್ತಾ ಎಲ್ಲ ಹಂತದಲ್ಲೂ ಅದನ್ನು ಹೇರುವಲ್ಲಿ ಯಶಸ್ವಿಯಾಗುತ್ತಿದೆ. ಅದರಲ್ಲೂ ಈ ಹೊತ್ತಿನ ಎನ್‌ಡಿಎ ನೇತೃತ್ವದ ಬಿಜೆಪಿ ಸರ್ಕಾರ ಹಿಂದಿ ಹೇರಿಕೆಯ ಜೊತೆಗೆ ತನ್ನದೇ ಆದ



ರಾಷ್ಟ್ರೀಯತೆ-ಧಾರ್ಮಿಕತೆಯ ಅಜೆಂಡಾಗಳನ್ನು ಇಟ್ಟುಕೊಂಡು ಇನ್ನಷ್ಟು ಗಟ್ಟಿಗೊಳಿಸಲು ಮುಂದಾಗಿದೆ.

ಕರ್ನಾಟಕದ ರಾಜಕಾರಣ ತುಂಬಾ ಕೆಟ್ಟ ಹಾದಿಯಲ್ಲಿ ಸಾಗುತ್ತಿದೆ. ಅತ್ತ ರಾಜ್ಯ ಭಾಷೆ ಕನ್ನಡಕ್ಕೂ ಉತ್ತಮ ವಾತಾವರಣ ಕಲ್ಪಿಸದೆ, ಇತ್ತ ಹಿಂದಿ ನಿರಾಕರಣೆಯನ್ನೂ ಮಾಡದೆ ಆಷಾಢಭೂತಿ ರಾಜಕಾರಣದ ಮೂಲಕ ಕನ್ನಡಿಗರನ್ನು ವಂಚಿಸುತ್ತಾ ಹೊರಟಿರುವುದು ನಾಚಿಕೆಗೇಡಿನ ವಿಚಾರವಾಗಿದೆ. ರಾಜ್ಯದಲ್ಲಿ ಈ ಹೊತ್ತಿಗೂ ಸ್ಪಷ್ಟವಾದ ಭಾಷಾ ನೀತಿಯನ್ನು ಜಾರಿಗೊಳಿಸಲಾಗದೆ ಕನ್ನಡದ ದುಸ್ಥಿತಿಗೆ ಕಾರಣವಾಗುತ್ತಿದೆ. ಅದರ ಜೊತೆಗೆ ಕನ್ನಡಿಗರ ಸ್ವಾಭಿಮಾನವನ್ನು ಕೆಣಕುವ ಕೆಲಸ ಮಾಡುತ್ತಿರುವುದು ವಿಷಾದಕರವಾಗಿದೆ.

ವಾಸ್ತವವಾಗಿ, ಹಿಂದಿ ಇತ್ತೀಚೆಗಷ್ಟೆ ಹುಟ್ಟಿಕೊಂಡ ಭಾಷೆಯಾಗಿದೆ. ಪಟ್ಟಭದ್ರ ಹಿತಾಸಕ್ತಿಗಳು ಅದೊಂದು ಕಾಲದಲ್ಲಿ ಸಂಸ್ಕೃತವು ದೇವ ಭಾಷೆಯೆಂತಲೂ, ಅದನ್ನು ಜನಸಾಮಾನ್ಯರು ಕಲಿಯಲು ಅವಕಾಶವಿಲ್ಲ ಎಂಬ ಕಟ್ಟಪ್ಪಣೆ ವಿಧಿಸಿದ್ದರು. ಅದನ್ನು ಗರ್ಭಗುಡಿಗಳಲ್ಲಿ ತಾವೇ ಪ್ರತಿಷ್ಠಾಪಿಸಿದ ದೇವರೆಂಬ ವಿಗ್ರಹಗಳನ್ನು ಪೂಜಿಸಿ, ಆರಾಧಿಸಲು ಬಳಸುತ್ತಿದ್ದರು. ಶ್ರೀಸಾಮಾನ್ಯರ ಮನೆಯ ವೈವಾಹಿಕ-ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಾತ್ರವೇ ಬಳಸುತ್ತಾ ಬಂದಿದ್ದರು. ಅದು ಶ್ರೀಸಾಮಾನ್ಯರಿಗೆ ಅರ್ಥವಾಗದ ಭಾಷೆಯಾಗಿಯೂ, ದೇವರು-ಪುರೋಹಿತರ ನಡುವೆ ವಾಹಕ ಭಾಷೆಯಾಗಿಯೂ ಮಾಡಿಕೊಂಡು ಇತರರನ್ನು ಭ್ರಮಾಧೀನದಲ್ಲಿರಿಸಿದ್ದು ಇತಿಹಾಸವಾಗಿದೆ.

ಅಂತಹ ಸಂಸ್ಕೃತ ಭಾಷೆಯ ಲಿಪಿಯನ್ನೆ ಹೊಂದಿರುವ ಸ್ವಂತ ಲಿಪಿ ಇಲ್ಲದ ಹಿಂದಿ ಭಾಷೆಯು ಉತ್ತರ ಭಾರತದ ರಾಜಕೀಯ ಬಲಾಢ್ಯರ ಅಸ್ತ್ರವಾಗಿ ಬಳಕೆಯಾಗತೊಡಗಿದ್ದು ಆತಂಕಕಾರಿಯಾಗಿದೆ. ಸಂಸ್ಕೃತ ಹೇರಿಕೆಯ ಬದಲಿಗೆ ತದ್ರೂಪು ಲಿಪಿ ಹೊಂದಿರುವ ಹಿಂದಿಯನ್ನು ದಕ್ಷಿಣದವರ ಮೇಲೆ ಹೇರತೊಡಗಿರುವುದು ಸನಾತನ ದಬ್ಬಾಳಿಕೆಯ ಸಂಕೇತವಾಗಿದೆ. ಹಿಂದಿಯ ಮೂಲಕ 'ತ್ರಿಭಾಷಾ ಸೂತ್ರ' ಜಾರಿಗೊಳಿಸುತ್ತಿರುವುದರ ಹಿಂದೆ ಅನೇಕ ವಿಪರ್ಯಾಸಕರ ಸಂಗತಿಗಳು ಅಡಗಿರುವುದನ್ನು ಅರಿಯದೆ ಹೋದರೆ ನಮಗೆ ನಾವೇ ವಂಚಿಸಿಕೊಂಡಂತಾಗುತ್ತದೆ.

ಇಡೀ ದೇಶಕ್ಕೆ 'ತ್ರಿಭಾಷಾ ಸೂತ್ರ'ವೆಂದು ಘೋಷಿಸುವ ಉತ್ತರ ಭಾರತದ ರಾಜಕಾರಣಿಗಳು ಅದರ ಹೆಸರಿನಲ್ಲಿ ದಕ್ಷಿಣ ಭಾರತದವರ ಚಟುವಟಿಕೆಗಳನ್ನು ನಿಯಂತ್ರಿಸಲು ಪ್ರಯತ್ನಿಸಿದ್ದಾರೆ. ವಾಸ್ತವವಾಗಿ, ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ 'ದ್ವಿಭಾಷಾ ಸೂತ್ರವೆ' ಜಾರಿಯಲ್ಲಿದೆ. ಹಿಂದಿ ರಾಜ್ಯಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಷ್ಟೆ ಬಳಕೆಯಲ್ಲಿರುತ್ತವೆ. ಹಿಂದಿಯೇತರ ಉತ್ತರದ ರಾಜ್ಯಗಳಲ್ಲಿ ಮಾತ್ರವೆ ತ್ರಿಭಾಷಾ ಸೂತ್ರ ಜಾರಿಯಲ್ಲಿರುತ್ತದೆ. ಕೆಲವು ಹಿಂದಿ ರಾಜ್ಯಗಳಲ್ಲಿ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯಗೊಳಿಸದೆ ಬರೀ ಹಿಂದಿಯನ್ನಷ್ಟೆ ಕಲಿಯುವ, ಬಳಸುವ ಪದ್ಧತಿಯನ್ನು ಜಾರಿ ಮಾಡುವ ಪ್ರಯತ್ನಗಳೂ ನಡೆದಿರುತ್ತವೆ. ಬಿಹಾರ ಸರ್ಕಾರ ಇತ್ತೀಚೆಗೆ 'ಇಂಗ್ಲಿಷ್ ವಿತೌಟ್ ಪಾಸ್' ಎಂಬ ಹೊಸ ಪದ್ಧತಿಯ ಜಾರಿಗೆ ಮುಂದಡಿಯಿಟ್ಟಿರುತ್ತದೆ.

ಇನ್ನು ದಕ್ಷಿಣದ ತಮಿಳುನಾಡಿನಲ್ಲಿ ದ್ವಿಭಾಷಾ ಸೂತ್ರವೆ ಜಾರಿಯಲ್ಲಿರುತ್ತದೆ. ಅವರು ಒಕ್ಕೂಟ ಸರ್ಕಾರದ ಯಾವುದೇ ಹೇರಿಕೆ ಭಾಷೆಯನ್ನು ಒಪ್ಪದೆ ತನ್ನದೇ ಭಾಷಾ ನೀತಿಯನ್ನು ಜಾರಿಯಲ್ಲಿಟ್ಟುಕೊಂಡಿದ್ದಾರೆ. ಅದರ ವಿರುದ್ಧ ಕ್ರಮ ತೆಗೆದುಕೊಳ್ಳುವ ಎದೆಗಾರಿಕೆ ಒಕ್ಕೂಟ ಸರ್ಕಾರಕ್ಕಿರುವುದಿಲ್ಲ ಎಂಬುದು ಚೋದ್ಯದಂತೆ ಕಾಣುತ್ತಿದೆ. ವಿಚಿತ್ರವೆಂದರೆ, ಕರ್ನಾಟಕ-ಆಂಧ್ರ-ತೆಲಂಗಾಣ-ಕೇರಳ ರಾಜ್ಯಗಳು ಮಾತ್ರ ತಮ್ಮ ಜನರನ್ನು 'ತ್ರಿಭಾಷಾ ಸೂತ್ರದ ತ್ರಿಶೂಲ'ದಿಂದ ಶೋಷಿಸುವ ಹುನ್ನಾರವನ್ನು ಮುಂದುವರಿಸಿಕೊAಡು ಬರುತ್ತಿರುವುದು ಮತ್ತೊಂದು ಬಗೆಯ ಚೋದ್ಯವಾಗಿರುತ್ತದೆ.

ಬಹು ದೊಡ್ಡ ಚೋದ್ಯವೆಂದರೆ ೫೦೦-೬೦೦ ವರ್ಷಗಳಿಂದೀಚೆಗೆ ಹುಟ್ಟಿಕೊಂಡ ಹಿಂದಿ ಭಾಷೆಯ ಮೂಲಕ ಒಂದೂವರೆ ಸಾವಿರ ವರ್ಷಗಳ ಪ್ರಾಚೀನ ಭಾಷೆಯಾದ ಕನ್ನಡ ಭಾಷೆ ಮೇಲೆ ಸವಾರಿ ಮಾಡಲು ಉತ್ತರ ಭಾರತದ ರಾಜಕಾರಣ ಮತ್ತು ಸ್ಥಳೀಯ ರಾಜಕಾರಣ ಹೊರಟಿರುತ್ತವೆ. ಇಂತಹ ವೈಚಿತ್ರ್ಯ, ದಬ್ಬಾಳಿಕೆ ಧೋರಣೆಯನ್ನು ಈ ಹೊತ್ತಿಗಾದರೂ ಕನ್ನಡಿಗರು ವಿರೋಧಿಸದೆ ಹೋದಲ್ಲಿ ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವಲ್ಲಿ ನಾವು

ಕನ್ನಡಿಗರ ಉದಾಸೀನ ಮತ್ತು ಒಗ್ಗಟ್ಟಿನ ಕೊರತೆಯಿಂದಾಗಿ ಇಂದು ನಮ್ಮ ನೆಲೆಯನ್ನು ಕಳೆದುಕೊಂಡು ಪರಭಾಷಿಕರ ಅಡಿಯಲ್ಲಿ ಶೋಷಣೆಗೊಳಗಾಗುತ್ತಿದ್ದಾರೆ.

ವಿಫಲಗೊಳ್ಳುವಂತಾಗುತ್ತದೆ.

ಅದರ ಹಿನ್ನೆಲೆಯಲ್ಲಿ ಹಿಂದಿ ಹೇರಿಕೆ ವಿರುದ್ಧ ರಾಜ್ಯದಲ್ಲಿ ಪ್ರಬಲವಾದ ಧ್ವನಿಯೆದ್ದಿರುವುದನ್ನು ಸಮಸ್ತ ಕನ್ನಡಿಗರೂ ಗಂಭೀರವಾಗಿ ಗಮನಿಸಬೇಕಾಗಿದೆ. ಈಗಾಗಲೇ 'ಹಿಂದಿ ಹೇರಿಕೆ ವಿರೋಧಿ ಕರ್ನಾಟಕ' ಸಂಘಟನೆಯು ರಾಜ್ಯದಾದ್ಯಂತ ಕ್ರಿಯಾಶೀಲವಾಗಿರುವುದು ಸ್ವಾಗತಾರ್ಹವಾದ ಹೆಜ್ಜೆಯಾಗಿದೆ. ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವೆ ನೇಮಿಸಿದ್ದ ಭಾಷಾ ನೀತಿ ನಿರ್ಧಾರದ ಆಯೋಗವು ಈಗಾಗಲೆ ತನ್ನ ವೈಜ್ಞಾನಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದರಲ್ಲಿ 'ರಾಜ್ಯದ ಶಿಕ್ಷಣ ನೀತಿಯಲ್ಲಿ ದ್ವಿಭಾಷಾ ನೀತಿಯು ಸೂಕ್ತ' ಎಂಬ ಶಿಫಾರಸ್ಸನ್ನು ಮಾಡಿರುತ್ತದೆ. ಆದರೆ ರಾಜ್ಯ ಸರ್ಕಾರವು ಅಂತಹ ವೈಜ್ಞಾನಿಕ ವರದಿಯನ್ನು ಸ್ವೀಕರಿಸಿ ಜಾರಿಗೆ ತರುವ ಬಗ್ಗೆ ನಿರ್ಧಾರ ತಾಳದೆ ಮೀನಮೇಷವೆಣಿಸುತ್ತಿರುವುದು ಕನ್ನಡಿಗರಿಗೆ ಬಗೆಯುತ್ತಿರುವ ದ್ರೋಹವಾಗಿರುತ್ತದೆ.

ಸ್ವತಃ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಆಗಾಗ ತಾವು ದ್ವಿಭಾಷಾ ನೀತಿಯ ಪರವಾಗಿದ್ದೇನೆ ಎಂದು ಹೇಳಿಕೊಳ್ಳುತ್ತಲೇ ಇದ್ದಾರೆ. ಆದರೆ ಅದನ್ನು ಜಾರಿಗೊಳಿಸುವ ನಿರ್ಧಾರ ಪ್ರಕಟಿಸಲು ಹಿಂಜರಿಯುತ್ತಿರುವುದು ವಿಚಿತ್ರವಾಗಿರುತ್ತದೆ. ಅದನ್ನು ಸಂಪುಟ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯುವ ಪ್ರಯತ್ನ ಮಾಡದೆ ಹೋಗುತ್ತಿದ್ದಾರೆ. ಅಂದರೆ, ಇದರ ಹಿಂದೆ ಕೆಲ ಶಾಸಕರು, ಮಂತ್ರಿಗಳು, ರಾಜಕೀಯ ಮುಖಂಡರು ಒತ್ತಡ ಹೇರುತ್ತಿರುವ ಶಂಕೆಯುAಟಾಗುತ್ತದೆ. ಸ್ವತಃ ವಿಧಾನ ಪರಿಷತ್ ಸಭಾಪತಿಯವರು ದ್ವಿಭಾಷಾ ನೀತಿ ಘೋಷಣೆಗೆ ಅಡ್ಡಿಯಾಗಿದ್ದಾರೆ ಎಂಬ ವಿಚಾರವೂ ಹೋರಾಟಗಾರರ ವಲಯದಲ್ಲಿ ಚರ್ಚೆಗೊಳಗಾಗುತ್ತಿದೆ.



ದ್ವಿಭಾಷಾ ನೀತಿಯನ್ನು ಜಾರಿಗೊಳಿಸಲೇಬೇಕೆಂಬುದು ಕನ್ನಡಿಗರ ಒತ್ತಾಸೆಯಾಗಿರುವಾಗ ಕೆಲವೇ ಕೆಲವು ರಾಜಕೀಯ ವ್ಯಕ್ತಿಗಳ ಕಾರಣದಿಂದ ಹಿನ್ನಡೆಯಾಗುವುದು ಯಾವ ರೀತಿಯಿಂದಲೂ ಒಳಿತಲ್ಲ. ಅಂಥವರ ವೈಯಕ್ತಿಕ ರಾಜಕೀಯ ಹಿತಾಸಕ್ತಿಗಾಗಿ ರಾಜ್ಯದ ಕೋಟ್ಯಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕುತ್ತು ತರುವುದು ಸರ್ಕಾರಕ್ಕೂ ಒಳಿತಲ್ಲ. ಸರ್ಕಾರದ ಅಂಕಿಅAಶದA3ೆA ಕಳೆದ ವರ್ಷ ಹಿಂದಿ ಪರೀಕ್ಷೆಯಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಹಿಂದಿಯ ಕಾರಣಕ್ಕಾಗಿ ನಪಾಸಾಗಿರುವುದನ್ನು ಗಂಭೀರವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಇಂತಹ ಅನರ್ಥಗಳು ಮುಂದುವರಿಯುತ್ತಾ ಹೋದಲ್ಲಿ ಕನ್ನಡ ಮಕ್ಕಳ ಭವಿಷ್ಯದ ಕತೆಯೇನು ಎಂಬ ಪ್ರಶ್ನೆ ಭುಗಿಲೇಳುತ್ತದೆ.

ಅದನ್ನು ಅರ್ಥೈಸಿಕೊಂಡಿರುವ 'ಹಿಂದಿ ಹೇರಿಕೆ ವಿರೋಧಿ ಕರ್ನಾಟಕ' ಸಂಘಟನೆಯ ಯುವ ಹೋರಾಟಗಾರರು ಈಗಾಗಲೇ ಸಭೆ-ಸಮಾರಂಭ-ವಿಚಾರ ಚಿಂತನ-ಮಂಥನಗಳನ್ನು ನಡೆಸಿ, ಕೂಡಲೆ ರಾಜ್ಯದಲ್ಲಿ ದ್ವಿಭಾಷಾ ನೀತಿಯನ್ನು ಜಾರಿಗೆ ತರಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತಲೇ ಬಂದಿದ್ದಾರೆ. ಈಗ ಅದರ ಮುಂದಿನ ಹಂತವಾಗಿ ಇದೇ ಮಾರ್ಚ್ ತಿಂಗಳಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಿಂದಿ ಪರೀಕ್ಷೆ ದಿನದಂದು ಪರೀಕ್ಷಾ ಕೊಠಡಿಗಳಿಗೆ ನುಗ್ಗಿ ತಡೆಯುವ ನಿರ್ಧಾರಕ್ಕೆ ಬಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿರುವುದನ್ನು ಗಂಭೀರವಾಗಿ ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ.

ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಹಿಂದಿ ಹೇರಿಕೆ ಹಿಂದಿನ ಷಡ್ಯಂತ್ರಗಳು ತಿಳಿದಿರುತ್ತವೆ ಎಂದು ಭಾವಿಸಬಹುದು. ಈ ಹಿಂದಿ ಹೇರಿಕೆ ಹಿಂದಿನ ಶಕ್ತಿಗಳು ಬೇರಾರೂ ಆಗಿರುವುದಿಲ್ಲ. ಸಹಸ್ರ ವರ್ಷಗಳ ಹಿಂದೆ 'ದೇವಭಾಷೆ ಸಂಸ್ಕೃತ'ವೆಂದು ಅದರ ಗುತ್ತಿಗೆ ಹಿಡಿದು ಜನಸಾಮಾನ್ಯರಿಗೆ ಅದನ್ನು ಕಲಿಸುವ ಅವಕಾಶವನ್ನೆ ನೀಡದೆ ವಂಚಿಸಿದ್ದ ಆಷಾಢಭೂತಿ-ಜನವಿರೋಧಿ ಶಕ್ತಿಗಳೇ ಈಗ 'ಹಿಂದಿ ವೇಷಧಾರಿಗಳಾಗಿ' ಅವರ ಗುತ್ತಿಗೆ ಭಾಷೆಯನ್ನು ಎಲ್ಲರ ಮೇಲೆ ಹೇರಲು ಅಣಿಯಾಗಿರುತ್ತಾರೆ.

ಅಂದು 'ಭಾಷೆಯೊಂದನ್ನು ಕಲಿಯಬಾರದು' ಅಂದಿದ್ದವರು ಇಂದು 'ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕೆಂದು' ಕಟ್ಟಾಜ್ಞೆ ವಿಧಿಸುತ್ತಿರುವುದರ ಹಿಂದೆ ಅವರದ್ದೆ ಆದ ಧಾರ್ಮಿಕ-ಭಾಷಿಕ-ವೈಯಕ್ತಿಕ ಹಿತಾಸಕ್ತಿಗಳಿರುವುದನ್ನು ಎಚ್ಚರದಿಂದ ಅರ್ಥೈಸಿಕೊಳ್ಳದಿದ್ದರೆ ಮತ್ತೆ ಶ್ರಮಿಕ ವರ್ಗದ ಜನ ಸಮೂಹ ಗುಲಾಮಗಿರಿಯ ಪರಾಕಾಷ್ಠೆಯ ಕೂಪಕ್ಕೆ ಸಿಲುಕಿಕೊಳ್ಳಬೇಕಾಗುತ್ತದೆ. 'ಹಿಂದಿ-ಹಿಂದೂ-ಹಿಂದುಸ್ತಾನ' ಎಂಬ ಷಡ್ಯಂತ್ರ ಅದರ ಹಿಂದೆ ಅಡಗಿರುವುದನ್ನು ಅರಿಯಬೇಕಾಗಿರುವುದು ಇಂದಿನ ಜರೂರಾಗಿದೆ.

ಕೇಂದ್ರದಲ್ಲಿರುವ ಒಕ್ಕೂಟ ಸರ್ಕಾರ ಇಂತಹ ಷಡ್ಯಂತ್ರಗಳನ್ನು ರೂಪಿಸುತ್ತಲೇ ಇದ್ದು, ೧೦ ವರ್ಷಗಳಿಂದ ಈ ಬಗೆಯ ತಂತ್ರ-ಕುತAತ್ರಗಳಲ್ಲೆ ತೊಡಗಿರುವುದನ್ನು ದೇಶ ಬಲ್ಲದಾಗಿರುತ್ತದೆ. ಅದರಲ್ಲೂ ಅವರ ಷಡ್ಯಂತ್ರಗಳಿಗೆ ಶರಣಾಗದ ದಕ್ಷಿಣ ಭಾರತದ ರಾಜ್ಯಗಳನ್ನು ಹಿಂದಿ ಮೂಲಕ ತನ್ನ ಕಪಿಮುಷ್ಠಿಯಲ್ಲಿ ಸಿಲುಕಿಸಿಕೊಂಡು ರಾಜಕೀಯ ಪ್ರಾಬಲ್ಯವನ್ನು ತಮ್ಮದಾಗಿಸಿಕೊಳ್ಳುವ ಹುನ್ನಾರವನ್ನು ಮುಂದಿಟ್ಟುಕೊಂಡು ಕಾರ್ಯೋನ್ಮುಖವಾಗಿರುತ್ತದೆ. ಅಂತಹ ರಾಜಕೀಯ ಪ್ರಾಬಲ್ಯ ದಕ್ಕಿದೊಡನೆ, ಅದು ಸಂವಿಧಾನ ಬದಲಾವಣೆಗೆ ಮುಂದಾಗಬಲ್ಲದಾಗಿದೆ. ನಮ್ಮ ಸಂವಿಧಾನದ ಜಾಗದಲ್ಲಿ ಅವರದ್ದೇ ಆದ ಸಂವಿಧಾನವನ್ನು ಪ್ರತಿಷ್ಠಾಪಿಸುವ, ಅನಂತರ ದಲಿತರ-ಶೂದ್ರರ-ಅಲ್ಪಸಂಖ್ಯಾತರ ಬಾಳಿಗೆ ಕೊಳ್ಳಿಯಿಡುವ ದುರುಳ ಪ್ರಯತ್ನಕ್ಕೆ ಕೈ ಹಾಕಬಲ್ಲ ದುರಾಲೋಚನೆ ಹೊಂದಿರುವುದು ವಾಸ್ತವ ಸತ್ಯವಾಗಿದೆ.

ಅದಕ್ಕೆ ಕರ್ನಾಟಕವಷ್ಟೆ ಅಲ್ಲ, ದಕ್ಷಿಣದ ಎಲ್ಲ ರಾಜ್ಯಗಳನ್ನು ಒಟ್ಟಾಗಿ ತಮಿಳುನಾಡಿನ ಮಾದರಿಯನ್ನು ಅನುಸರಿಸಿ 'ನಮಗೆ ದ್ವಿಭಾಷಾ ಸೂತ್ರ ಸಾಕು' ಎಂದು ಘೋಷಿಸುವ ಅನಿವಾರ್ಯತೆ ನಮ್ಮ ಮುಂದಿದೆ. ಆ ಮೂಲಕ ನಮ್ಮ ಭಾಷೆ ಮತ್ತು ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಮಹತ್ವದ ಜವಾಬ್ದಾರಿ ನಮ್ಮದಾಗಿರುತ್ತದೆ.

■

**ರಾಜಕಾರಣಿಗಳ ಸ್ವಾರ್ಥದ ದಾಳಕ್ಕೆ ಸಿಲುಕಿ ದೂರಾಗುತ್ತಿರುವ ಕನ್ನಡಿಗರನ್ನು ಒಗ್ಗೂಡಿಸಿ ನಾಡು-ನುಡಿ-ನೆಲ-ಜಲ ರಕ್ಷಣೆ ಮಾಡಲು ಕಾರ್ಯೋನ್ಮುಖವಾಗಲಿದೆ.**

KARNATAKA RAKSHANAA VEDIKE KANNADA MONTHLY RS.15/- MARCH-2026 RNI: KARKAN/2008/26245



**ಇದ್ದದ್ದು ಇದ್ದಂಗೆ**

ಎಚ್.ಶಿವರಾಮೇಗೌಡ

**ರೈಲ್ವೆ ಪರೀಕ್ಷೆಯಲ್ಲಿ ಮತ್ತೆ ಕನ್ನಡಕ್ಕೆ ದ್ರೋಹ ಬಗೆದ ಕೇಂದ್ರ**

**ಕನ್ನಡ ಕಹಳೆ**

ಕ.ನ. ಚಂದ್ರಶೇಖರ

**ವಿದೇಶದಲ್ಲಿರುವ ಕನ್ನಡಿಗರ ರಕ್ಷಣೆಗೆ ಸರ್ಕಾರ ಮುಂದಾಗಲಿ**



ದಿ ಪ್ರೊಫೆಷನಲ್ ಕೊರಿಯರ್ಸ್

SINCE 1987

ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ - ಕೊರಿಯರ್ ಮತ್ತು ಕಾರ್ಗೋ

ಐ ಎಸ್ ಓ 9001-2000 ಪ್ರಮಾಣಪತ್ರ ಹೊಂದಿರುವ ಸಂಸ್ಥೆ

"ಪ್ರೀತಿಯ ಕನ್ನಡಿಗರೆ ನಿಮ್ಮ ಸೇವೆಯಲ್ಲಿ, ಶ್ರೇಯಸ್ಸು ಮತ್ತು ಏಳ್ಗೆಯೊಂದಿಗೆ ನಾವು ಸದಾ ನಿಮ್ಮೊಂದಿಗಿದ್ದೇವೆ"

THE PROFESSIONAL COURIERS

DOMESTIC & INTERNATIONAL - COURIER & CARGO

An ISO 9001-2000 Certifird Enterprises

REACH US TO REACH THEM




ಅವರಿಗೆ ತಲುಪಲು ನಮಗೆ ತಲುಪಿಸಿ

EDITED, PRINTED, PUBLISHED BY KA. NA. CHANDRASHEKAR. # 1673/A, 2ND CROSS, PRAKASHNAGAR, BANGALORE-560021,
PRINTED AT: PATEL PRINTERS & PUBLISHERS, NO.1673/A, 2ND CROSS, PRAKASHNAGAR, BANGALORE-560021.